ಕರ್ನಾಟಕ ಸಾಹಿತ್ಯ ಅಕಾಡೆಮಿ

# ಎಂ.ಹೆಚ್.ಕೃಷ್ಣಯ್ಯ

## ಡಾ.ಎಲ್.ಜಿ.ಮೀರಾ



ಅಕಾಡೆಮಿ ಅಧ್ಯಕ್ಷರ ಪರಿಚಯ ಪುಸ್ತಕ ಮಾಲೆ

# ಎಂ.ಹೆಚ್. ಕೃಷ್ಣಯ್ಯ

ಪ್ರಧಾನ ಸಂಪಾದಕರು
ಪ್ರೊ. ಮಾಲತಿ ಪಟ್ಟಣಶೆಟ್ಟಿ

ಸಂಪಾದಕರು
ಪ್ರೊ. ಕೆ.ಎಸ್. ಮಧುಸೂದನ

ಲೇಖಕರು
ಡಾ. ಎಲ್.ಜಿ. ಮೀರಾ

ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು–560 002.
ದೂರವಾಣಿ:080–22211730/22106460
www.karnatakasahithyaacademy.org
Email: sahithya.academy@gmail.com

**M.H. KRISHNAIAH** BADUKU BARAHA
**A Written by: Dr. L.G. Meera**
Published by
**C.H.Bhagya**
Registrar
Karnataka Sahithya Academy
Kannada Bhavana
J.C.Road, Bengaluru-560 002.

© ಕರ್ನಾಟಕ ಸಾಹಿತ್ಯ ಅಕಾಡೆಮಿ

| | |
|---|---|
| ಪುಟಗಳು | : xii+ ೧೦೬ |
| ಬೆಲೆ | : ₹ ೧೦೦/– |
| ಮೊದಲ ಮುದ್ರಣ | : ೨೦೧೬ |
| ಪ್ರತಿಗಳು | : ೫೦೦ |
| ಮುಖಪುಟ ವಿನ್ಯಾಸ | : ಅರುಣ್‌ಕುಮಾರ್ ಜಿ. |

| | |
|---|---|
| Pages | : xii+106 |
| Price | : ₹ 100/- |
| First impression | : 2016 |
| Copies | : 500 |

**ಪ್ರಕಾಶಕರು:**
**ಸಿ.ಎಚ್.ಭಾಗ್ಯ**
ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು–560 002.

**ಮುದ್ರಕರು:**
ಸರ್ಕಾರಿ ಕೇಂದ್ರ ಮುದ್ರಣಾಲಯ
ಆರ್.ವಿ.ಕಾಲೇಜ್ ಅಂಚೆ
8ನೇ ಮೈಲಿ, ಮುತ್ತುರಾಯನಗರ
ಜ್ಞಾನಭಾರತಿ, ಮೈಸೂರು ರಸ್ತೆ
ಬೆಂಗಳೂರು–560 059.
080– 28483133 / 28484518

# ಅಧ್ಯಕ್ಷೀಯ ನುಡಿ

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಸ್ಥಾಪಿತವಾಗಿದ್ದು 1961ರಲ್ಲಿ. ಅದು ಭಾಷಾವಾರು ಪ್ರಾಂತ ರಚನೆಯಾಗಿ ನಾಡು ನುಡಿ, ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಅಪಾರ ಕುತೂಹಲ, ಅಭಿಮಾನ, ಪ್ರೀತಿ ಸ್ಫೋಟಗೊಂಡ ಸಮಯ. ನಾಡು ನುಡಿ, ಸಂಸ್ಕೃತಿಗಳನ್ನು ಹೊಸದಾಗಿ ಕಟ್ಟಿ ಬೆಳೆಸುವ ಹುಮ್ಮಸ್ಸಿನ ದಿನಗಳಾಗಿದ್ದವು ಅವು. ಜನರ ಬೇಡಿಕೆಗೆ ಸ್ಪಂದಿಸಿ ಅಂದಿನ ಸರಕಾರವು ಕರ್ನಾಟಕ ಸಾಹಿತ್ಯ ಅಕಾಡೆಮಿಯನ್ನು ಅಂದು ಶಿಕ್ಷಣ ಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಎಸ್.ಅರ್. ಕಂಠಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಿದ್ದನ್ನು ನಾವು ಇಂದು ಕೃತಜ್ಞತೆಗಳೊಂದಿಗೆ ನೆನೆಯಬೇಕು. ಆನಂತರದ ಅಧ್ಯಕ್ಷತೆಯನ್ನು ಶ್ರೀ ಕೆ.ವಿ. ಶಂಕರಗೌಡ, ಶ್ರೀ ಕೆ.ಎಚ್. ಶ್ರೀನಿವಾಸ್ ಹಾಗೂ ಶ್ರೀ ಆರ್. ಗುಂಡೂರಾವ್‌ರಂಥ ಹಿರಿಯ ರಾಜಕಾರಣಿಗಳು ಸಾಹಿತ್ಯ ಅಕಾಡೆಮಿಯ ಸೂತ್ರಧಾರಿತ್ವ ವಹಿಸಿ ಸಮರ್ಥವಾಗಿ ಮುನ್ನಡೆಸಿದರು.

ಕನ್ನಡದ ದಿಗ್ಗಜ ಸಾಹಿತಿಗಳಾದ ಶ್ರೀ ಅ.ನ. ಕೃಷ್ಣರಾಯರು, ಶ್ರೀರಂಗರು ಅಕಾಡೆಮಿಗೆ ಭದ್ರಬುನಾದಿ ಹಾಕಲು ಪ್ರಯತ್ನಿಸಿದರು. ನಂತರ ಅಧ್ಯಕ್ಷರಾದ ಡಾ. ಹಾ.ಮಾ. ನಾಯಕ, ಡಾ. ನಿಸಾರ್ ಅಹಮದ್ ಮತ್ತು ಡಾ. ಜಿ.ಎಸ್. ಶಿವರುದ್ರಪ್ಪ ಅವರುಗಳು ಅಕಾಡೆಮಿಗೆ ಖಚಿತವಾದ ರೂಪರೇಷೆಗಳ ಚೌಕಟ್ಟನ್ನು ನಿರ್ಮಿಸಿದರು. ಸಮಯದ ಬೇಡಿಕೆಗಳಿಗನುಸಾರವಾಗಿ ಹೊಸ ಯೋಜನೆಗಳನ್ನು ಕೈಗೊಂಡರು. ಅವರು ಪ್ರಕಟಿಸಿದ ಉತ್ತಮೋತ್ತಮ ಗ್ರಂಥಗಳು ಇಂದಿಗೂ ಬೇಡಿಕೆಯಲ್ಲಿವೆ. ನಂತರ ಅಧ್ಯಕ್ಷ ಸ್ಥಾನ ಸ್ವೀಕರಿಸಿದ ಡಾ. ಬರಗೂರು ರಾಮಚಂದ್ರಪ್ಪ, ಡಾ. ಗಿರಡ್ಡಿ ಗೋವಿಂದರಾಜ, ಶ್ರೀ ಶಾಂತರಸ ಮತ್ತು ಡಾ. ಗುರುಲಿಂಗ ಕಾಪಸೆಯವರಂಥ ಹಿರಿಯ ಸುಪ್ರಸಿದ್ಧ ಸಾಹಿತಿಗಳು ತಮ್ಮ ನಿಷ್ಠೆ, ಪರಿಶ್ರಮಗಳಿಂದಾಗಿ ಅಕಾಡೆಮಿಗೆ ಘನತೆ, ಗೌರವ ತಂದುಕೊಟ್ಟರು. ಡಾ. ಗೀತಾ ನಾಗಭೂಷಣ ಮತ್ತು ಪ್ರೊ. ಎಂ.ಎಚ್. ಕೃಷ್ಣಯ್ಯರಂಥ ಸಾಹಿತಿ, ವಿದ್ವಾಂಸರು ಸಾಹಿತ್ಯ ಅಕಾಡೆಮಿಯ ತೇರನ್ನು ಮುನ್ನಡೆಸಿದರು. ಇವರೆಲ್ಲರ ಸೇವೆಯನ್ನು ಕೃತಜ್ಞತೆಗಳೊಂದಿಗೆ ಸ್ಮರಿಸುತ್ತೇನೆ.

ನನ್ನ ಅವಧಿಯಲ್ಲಿ (2014–17) ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸುವರ್ಣ ಮಹೋತ್ಸವದ ಉದ್ಘಾಟನೆಯನ್ನು ಶಿವಮೊಗ್ಗೆಯಲ್ಲಿ ಆಗಸ್ಟ್ 3, 2014 ರಂದು ಸಕಲ ಸಡಗರಗಳೊಂದಿಗೆ ನೆರವೇರಿಸಲಾಯ್ತು.

ಡಾ. ಕೆ.ವಿ. ನಾರಾಯಣರಂಥ ಹಿರಿಯ ಸಾಹಿತಿ, ವಿದ್ವಾಂಸರು ಈ ಕಾರ್ಯಕ್ರಮದ ಉದ್ಘಾಟನೆ ಮಾಡಿದರು. ಇದೇ ವೇದಿಕೆಯಲ್ಲಿ ಡಾ. ಗುರುಲಿಂಗ ಕಾಪಸೆ, ಡಾ. ಗಿರಡ್ಡಿ ಗೋವಿಂದರಾಜ ಪ್ರೊ. ಎಂ.ಎಚ್. ಕೃಷ್ಣಯ್ಯ ಅವರನ್ನು ಸನ್ಮಾನಿಸಲಾಯ್ತು (ಡಾ. ನಿಸಾರ್ ಅಹಮದ್ ಮತ್ತು ಡಾ. ಗೀತಾ ನಾಗಭೂಷಣ ಅವರನ್ನು ಅವರ ನಿವಾಸದಲ್ಲಿ ಸನ್ಮಾನಿಸಲಾಯ್ತು). ಆ ನಂತರ ಮುಂದಿನ ಎರಡು ವರ್ಷದ ಅವಧಿಯಲ್ಲಿ ಸುವರ್ಣ ಸಂಭ್ರಮದ ಯೋಜನೆಯಡಿ ಕವಿಗೋಷ್ಠಿ, ಕಮ್ಮಟ ಹಾಗೂ ವಿಚಾರ ಸಂಕಿರಣಗಳನ್ನು ಏರ್ಪಡಿಸಲಾಗಿತ್ತು.

ಸುವರ್ಣ ಮಹೋತ್ಸವದ ಅಂಗವಾಗಿ ಸಮಾರೋಪ ಸಂದರ್ಭದಲ್ಲಿ ನಾಲ್ಕು ವಿಶೇಷ ಕಾರ್ಯಕ್ರಮಗಳನ್ನು ಅನುಷ್ಠಾನದಲ್ಲಿ ತಂದಿದ್ದೇವೆ.

1. ಸಾಹಿತ್ಯ ಅಕಾಡೆಮಿಯ ಹಿಂದಿನ ಹದಿನೆಂಟು ಜನ ಅಧ್ಯಕ್ಷರ ಪರಿಚಯ, ಸಾಹಿತ್ಯ ಸಾಧನೆ ಮತ್ತು ಸಾಹಿತ್ಯ ಅಕಾಡೆಮಿಗೆ ಅವರ ಸೇವೆ ಕುರಿತ ಪುಸ್ತಕ ಮಾಲೆಯನ್ನು ಪ್ರಕಟಿಸಿದ್ದೇನೆ.
2. ಕಳೆದ ಅರ್ಧ ಶತಮಾನದ ಕಾಲಾವಧಿಯಲ್ಲಿ ಸಾಹಿತ್ಯ ಅಕಾಡೆಮಿಯ ಕೆಲಸ ಕಾರ್ಯಗಳು ಜನಮನದ ಮೇಲೆ ಬೀರಿದ ಪರಿಣಾಮ ಕುರಿತ "ಪರಿಣಾಮ ಅಧ್ಯಯನ" ಗ್ರಂಥವನ್ನು ಪ್ರಕಟಿಸಿದ್ದೇನೆ.
3. ಸಾಹಿತ್ಯ ಅಕಾಡೆಮಿಯನ್ನು ಕುರಿತ ಸಾಕ್ಷ್ಯಚಿತ್ರ ನಿರ್ಮಾಣ.
4. ಕನ್ನಡ ಸಾಹಿತ್ಯ ಸಂವೇದನೆ ಕುರಿತ ರೂಪಕದ ರಂಗಪ್ರಯೋಗ.

ಸುವರ್ಣ ಮಹೋತ್ಸವದ ಉದ್ಘಾಟನೆ ಹಾಗೂ ಈ ಮಹೋತ್ಸವದ ನೆನಪಿಗಾಗಿ ಹಮ್ಮಿಕೊಂಡಿದ್ದ ಸರಣಿ ಕಾರ್ಯಕ್ರಮಗಳಲ್ಲದೆ, ಈಗ ಸಮಾರೋಪ ಸಮಾರಂಭಗಳಲ್ಲಿ ಪಾಲ್ಗೊಂಡ ಎಲ್ಲ ಸಾಹಿತಿಗಳಿಗೆ, ವಿದ್ವಾಂಸರಿಗೆ, ಕಲಾವಿದರಿಗೆ ಮತ್ತು ಸುವರ್ಣ ಮಹೋತ್ಸವದ ಎಲ್ಲ ಕಾರ್ಯಕ್ರಮಗಳಿಗೆ ಸಲಹೆ ನೀಡಿದ ತಜ್ಞ ಸಾಹಿತಿಗಳಾದ ಡಾ. ಹಂ.ಪ. ನಾಗರಾಜಯ್ಯ, ಡಾ. ಕೆ.ವೈ. ನಾರಾಯಣಸ್ವಾಮಿ ಮತ್ತು ಅಕಾಡೆಮಿಯ ಸದಸ್ಯರಾದ ಶ್ರೀಮತಿ ಬಿ.ಟಿ. ಜಾಹ್ನವಿ ಅವರುಗಳನ್ನು ಮನಃಪೂರ್ವಕ ನೆನೆಯುತ್ತೇನೆ. ನಮ್ಮ ಕಾರ್ಯಚಟುವಟಿಕೆಗಳಿಗೆ ಸಹಕಾರ ನೀಡುತ್ತಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ.ಎ. ದಯಾನಂದ ಮತ್ತು ಜಂಟಿ

ನಿರ್ದೇಶಕರಾದ ಶ್ರೀ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಅವರುಗಳಿಗೆ ಈ ಸಂದರ್ಭದಲ್ಲಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಎಲ್ಲ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನದಲ್ಲಿ ತರಲು ಅಪಾರ ಪರಿಶ್ರಮ ವಹಿಸಿದ ರಿಜಿಸ್ಟ್ರಾರರಾದ ಶ್ರೀಮತಿ ಸಿ.ಎಚ್. ಭಾಗ್ಯ ಅವರಿಗೂ ಹೃದಯಪೂರ್ವಕ ವಂದನೆಗಳು. ಸಾಹಿತ್ಯ ಅಕಾಡೆಮಿಯ ಸಿಬ್ಬಂದಿಗಳಾದ ಶ್ರೀಮತಿ ಟಿ. ಸೌಭಾಗ್ಯ, ಶ್ರೀಮತಿ ವಿಜಯಲಕ್ಷ್ಮಿ, ಶ್ರೀ ವಿ. ಹರೀಶ್‌ಕುಮಾರ್, ಶ್ರೀ ಕೃಷ್ಣಪ್ಪ ಡಿ., ಶ್ರೀ ಹರೀಶ್ ಮತ್ತು ಶ್ರೀಮತಿ ಎಸ್.ಜಿ. ಸುಚಿತ್ರ ಇವರೆಲ್ಲರೂ ಕೈಜೋಡಿಸದಿದ್ದರೆ ಇಂಥ ಬೃಹತ್ ಕಾರ್ಯಕ್ರಮಗಳು ಅಸಾಧ್ಯ. ಇವರೆಲ್ಲರ ನಿಷ್ಠೆ, ಪರಿಶ್ರಮಗಳನ್ನು ಮನಃಪೂರ್ವಕ ನೆನೆಯುತ್ತೇನೆ. ಹಾಗೆಯೇ ಮುದ್ರಣ ಕಾರ್ಯ ನಿರ್ವಹಿಸಿದ ಸರ್ಕಾರಿ ಮುದ್ರಣಾಲಯದ ನಿರ್ದೇಶಕರು ಹಾಗೂ ಅಧಿಕಾರಿ/ ಸಿಬ್ಬಂದಿಗಳೆಲ್ಲರನ್ನೂ ನಾನಿಲ್ಲಿ ಕೃತಜ್ಞತೆಗಳೊಂದಿಗೆ ನೆನೆಯುತ್ತೇನೆ.

2016

**ಮಾಲತಿ ಪಟ್ಟಣಶೆಟ್ಟಿ**
ಅಧ್ಯಕ್ಷರು

## ಸಂಪಾದಕೀಯ

ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಗೆ ಇದು ಅಪರಂಜಿ ವರುಷ. ಐವತ್ತು ವರುಷ ತುಂಬಿದ ಈ ಸಾರ್ಥಕ ಸಾಧನೆಯ ಸಂದರ್ಭದಲ್ಲಿ ಸಂಸ್ಥೆಯು ತನ್ನನ್ನು ಈ ಎತ್ತರಕ್ಕೆ ಬೆಳೆಸಿದ ಹಿಂದಿನ ಅಧ್ಯಕ್ಷರುಗಳ ಸಾಧನೆಗಳನ್ನು ಕುರಿತು ಹೊತ್ತಗೆಗಳನ್ನು ಹೊರತರುತ್ತಿರುವುದು ಸಂತಸದ ಸಂಗತಿ. ಆರಂಭಕ್ಕೆ ಮಂತ್ರಿ ಮಹೋದಯರುಗಳು ಅಧ್ಯಕ್ಷರಾಗಿದ್ದುಕೊಂಡು ಸಂಸ್ಥೆಯನ್ನು ಮುನ್ನೋಟದಿಂದ ನಡೆಸಿದರು. ನಂತರ ಅಧ್ಯಕ್ಷರ ಸ್ಥಾನಕ್ಕೆ ನಾಡಿನ ಹಿರಿಯ ಸಾಹಿತಿ ಮುತ್ಸದ್ದಿಗಳನ್ನು ಆಯ್ಕೆ ಮಾಡುವ ಕ್ರಮ ಜಾರಿಗೆ ಬಂತು. ಹೀಗಾಗಿ ಈ ಪ್ರತಿಷ್ಠಿತ ಅಕಾಡೆಮಿಗೆ ಇದುವರೆಗೆ 18 ಮಂದಿ ಅಧ್ಯಕ್ಷರಾಗಿ ಅಕಾಡೆಮಿಯನ್ನು ಭಾರತ ದೇಶದ ಗಮನಾರ್ಹ ಸಾಹಿತ್ಯ ಸಂಸ್ಥೆಯನ್ನಾಗಿ ಬೆಳೆಸಿದ್ದಾರೆ.

'ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರ ಪರಿಚಯ ಪುಸ್ತಕ ಮಾಲೆ' ಎನ್ನುವ ನಾಮನಿರ್ದೇಶನದಡಿ ಈ ಪುಸ್ತಕಗಳನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರಕಟಿಸುತ್ತಿದೆ. ಒಂದು ಸಂಸ್ಥೆ ನಾಡಿನೊಳಗೆ ಸರ್ವಾಂಗೀಣವಾಗಿ, ಸಮೃದ್ಧವಾಗಿ ಬೆಳೆದು ನಾಡಿನ ಜನರ ಮೇಲೆ ದೀರ್ಘಕಾಲಿಕ ಪ್ರಭಾವವನ್ನು ಬೀರಬೇಕಾದರೆ ಅದರ ಮುಂಚೂಣಿಯಲ್ಲಿ ನಿಂತು ನಡೆಸುವ ಅಧ್ಯಕ್ಷೀಯ ಸ್ಥಾನದ ಪಾತ್ರ ಮಹತ್ವವಾದದ್ದು. ಹಾಗೆಯೇ ಒಂದು ಸಂಸ್ಥೆಯ ಇತಿಹಾಸದಲ್ಲಿ ಐವತ್ತು ವರ್ಷಗಳ ಕಾಲಮಾನ ಕೂಡ ಒಂದು ಮೈಲಿಗಲ್ಲು. ಹೀಗಾಗಿ ಇಂತಹ ಸಂದರ್ಭದಲ್ಲಿ ಅಕಾಡೆಮಿಯನ್ನು ಸಮರ್ಥವಾಗಿ ನಡೆಸಿದ ಹಿಂದಿನ ಅಧ್ಯಕ್ಷರುಗಳಾಗಿದ್ದ ನಾಡಿನ ಪ್ರಸಿದ್ಧ ಸಾಹಿತಿಗಳಾದ ಶ್ರೀ ಅ.ನ. ಕೃಷ್ಣರಾಯ, ಶ್ರೀ ಆದ್ಯ ರಂಗಾಚಾರ್ಯ, ಶ್ರೀ ಹಾ.ಮಾ. ನಾಯಕ, ಪ್ರೊ. ಕೆ.ಎಸ್. ನಿಸಾರ್ ಅಹಮದ್, ಡಾ. ಜಿ.ಎಸ್. ಶಿವರುದ್ರಪ್ಪ, ಡಾ. ಬರಗೂರು ರಾಮಚಂದ್ರಪ್ಪ, ಡಾ. ಗಿರಡ್ಡಿ ಗೋವಿಂದರಾಜ, ಶ್ರೀ ಗುರುಲಿಂಗ ಕಾಪಸೆ, ಡಾ. ರಾ.ಶಿ. (ಎಂ. ಶಿವರಾಂ), ಡಾ. ಶಾಂತರಸ, ನಾಡೋಜ ಗೀತಾ ನಾಗಭೂಷಣ, ಪ್ರೊ. ಎಂ.ಎಚ್. ಕೃಷ್ಣಯ್ಯ ಮುಂತಾದವರುಗಳ ಸಾಧನೆಗಳನ್ನು ಕುರಿತು ಪುಸ್ತಕಗಳನ್ನು ಪ್ರಕಟಿಸುತ್ತಿರುವುದು ಸೂಕ್ತವೂ, ಸಮಂಜಸವೂ ಆಗಿದೆ. ಈ ಕೃತಿಗಳನ್ನು ಶ್ರದ್ಧೆಯಿಂದ ರಚಿಸಿದ ನಾಡಿನ ವಿವಿಧ ಭಾಗದ ಬರಹಗಾರರಾದ ಶಾ.ಮಂ. ಕೃಷ್ಣರಾವ್, ಕೆ.ಎಂ. ವಿಜಯಲಕ್ಷ್ಮಿ, ಡಾ. ಪದ್ಮಾಶೇಖರ್, ಡಾ. ರಾಮಚಂದ್ರ ಗಣಾಪುರ, ಶೂದ್ರ ಶ್ರೀನಿವಾಸ್, ಎಸ್. ಮಾರುತಿ, ಪ್ರೊ. ಮಲ್ಲಿಕಾರ್ಜುನ ಹಿರೇಮಠ, ಡಾ. ಗುರುಪಾದ ಮರಿಗುದ್ದಿ, ಡಾ. ಪ್ರಭು

ಖಾನಾಪುರೆ, ಡಾ. ಪ್ರಮೀಳಾ ಮಾಧವ್, ಡಾ. ಎಲ್.ಜಿ. ಮೀರಾ ಈ ಎಲ್ಲರಿಗೂ ಕೃತಜ್ಞತೆಗಳು.

ಈ ಜವಾಬ್ದಾರಿಯನ್ನು ನನಗಿತ್ತು ಈ ಕಾರ್ಯದಲ್ಲಿ ಸಂಪೂರ್ಣ ನೆರವು ನೀಡಿದ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಮಾಲತಿ ಪಟ್ಟಣಶೆಟ್ಟಿ, ರಿಜಿಸ್ಟ್ರಾರ್ ಸಿ.ಎಚ್. ಭಾಗ್ಯ ಹಾಗೂ ಅಕಾಡೆಮಿ ಸಿಬ್ಬಂದಿ ವರ್ಗಕ್ಕೆ ನನ್ನ ನಮ್ರ ಪ್ರಣಾಮಗಳು.

ಪ್ರೊ. ಕೆ.ಎಸ್. ಮಧುಸೂದನ
ಸಂಪಾದಕರು

## ಲೇಖಕಿಯ ಮಾತು

'ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಐವತ್ತು ವರ್ಷ ತುಂಬಿದ ಶುಭ ಸಂದರ್ಭದಲ್ಲಿ ಅಕಾಡೆಮಿಯ ಆಧ್ಯಕ್ಷರ ಬಗ್ಗೆ ಹೊತ್ತಗೆಗಳನ್ನು ಬರೆಸುತ್ತಿದ್ದೇವೆ. ನೀವೂ ಒಬ್ಬ ಅಧ್ಯಕ್ಷರ ಬಗ್ಗೆ ಬರೆಯುತ್ತೀರಾ?" ಎಂದು ಹಿರಿಯರೂ, ಆತ್ಮೀಯರೂ ನಮ್ಮ ನಡುವಿನ ಮುಖ್ಯಸಾಹಿತ್ಯಚಿಂತಕರೂ ಆದ 'ಹಳತುಹೊನ್ನಿನ' ಶ್ರೀ ಕೆ.ಎಸ್. ಮಧುಸೂದನ್ ಅವರು ಒಂದು ದಿನ ದೂರವಾಣಿಯಲ್ಲಿ ನನ್ನನ್ನು ಕೇಳಿದರು. ತಕ್ಷಣ ನಾನು ಅವರನ್ನು ಕೇಳಿದ ಮರುಪ್ರಶ್ನೆಯೆಂದರೆ 'ನಾನು ಶ್ರೀಯುತ ಎಂ.ಎಚ್.ಕೃಷ್ಣಯ್ಯನವರ ಬಗ್ಗೆ ಬರೆಯಬಹುದೇ?' ಎಂಬುದು. ನನ್ನ ಈ ಶೀಘ್ರ ಪ್ರತಿಕ್ರಿಯೆಗೆ ಕಾರಣ ಇತ್ತು. ನಾನು ಬಾಲ್ಯದಿಂದ ಭರತನಾಟ್ಯ, ಕರ್ಣಾಟಕ ಸಂಗೀತಗಳ ಅಭ್ಯಾಸಿ. ಈ ಕಲೆಗಳಿಗೂ ಮತ್ತು ಸಾಹಿತ್ಯ, ಸಮಾಜ, ಶಿಕ್ಷಣಗಳಿಗೂ ಇವಕ್ಕೂ ಇರುವ ಆಳವಾದ ಸಂಬಂಧಗಳನ್ನು ಕುರಿತು ಅಧ್ಯಯನ ಮಾಡುವ ಆಸೆ ನನಗೆ. ಆ ಕ್ಷೇತ್ರದ ಪರಿಣತರನ್ನು ಭೇಟಿಯಾಗಿ ಅವರಿಂದ ಕಲಿಯುವ ಹಂಬಲ. ನಮ್ಮ ನಡುವಿನ ಮುಖ್ಯ ಕಲಾಚಿಂತಕರಾದ ಶ್ರೀ ಎಂ.ಎಚ್.ಕೃಷ್ಣಯ್ಯನವರೊಂದಿಗೆ ಸಂವಾದಿಸುವ ತವಕ ನನ್ನೊಳಗೆ ಇದ್ದೇ ಇತ್ತು. ಹೀಗಾಗಿ ಈ ಅವಕಾಶ ಬಂದ ತಕ್ಷಣ ಮನಸ್ಸು ಅದನ್ನು ಉತ್ಸಾಹದಿಂದ ಸ್ವಾಗತಿಸಿತು.

ಕೃಷ್ಣಯ್ಯನವರ ಕೃತಿಗಳನ್ನು ಓದುತ್ತಾ ಹೋದಂತೆ ವಿವಿಧ ಕಲೆಗಳ ನಡುವಿನ ಅಂತರ್ಸಂಬಂಧವನ್ನು ಅವರು ಗ್ರಹಿಸಿದ ರೀತಿ ಆಶ್ಚರ್ಯ ತಂದಿತು. ಇಂತಹ ಗ್ರಹಿಕೆ ಸಾಧ್ಯವಾಗುವುದು ಕಲೆಯ ಬಗ್ಗೆ ಆಳವಾದ ಪ್ರೀತಿ ಇದ್ದಾಗ ಮಾತ್ರ. ಸಾಹಿತ್ಯವಿಮರ್ಶೆಯಲ್ಲೂ ಕಲಾವಿಮರ್ಶೆಯ ಪರಿಕರಗಳನ್ನು ಅಳವಡಿಸಿ ತಮ್ಮದೇ ಆದ ವಿಭಿನ್ನ ಶೈಲಿಯನ್ನು ಈ ಹಿರಿಯರು ರೂಢಿಸಿಕೊಂಡಿದ್ದಾರೆ.

ಕೃಷ್ಣಯ್ಯನವರ ಕಲಾಚಿಂತನೆಯ ಜೊತೆಗೆ ಈ ಸಂದರ್ಭದಲ್ಲಿ ನನಗೆ ಅರ್ಥವಾದದ್ದು ಕೃಷ್ಣಯ್ಯನವರಿಗೆ ಅಧ್ಯಾಪನದ ಬಗ್ಗೆ ಇರುವ ಅತೀವ ಪ್ರೀತಿ. ಹಾಗೆ ನೋಡಿದರೆ ಇವರ ಎಲ್ಲಾ ಬರವಣಿಗೆಯ ಮೂಲಸೆಲೆ ಅಧ್ಯಾಪನವೇ. ಆಳವಾಗಿ ಗಮನಿಸಿದರೆ ಅವರ ಬರವಣಿಗೆಯ ಶೈಲಿಯೂ ಅಧ್ಯಾಪನದ್ದೇ. ಒಬ್ಬ ಅಧ್ಯಾಪಕಿಯಾಗಿ ಇದೆಲ್ಲದರ ಪ್ರಾಮುಖ್ಯ ನನ್ನ ಅರಿವಿಗೆ ಬಂದಿದೆ. ಅಧ್ಯಾಪಕ ವೃತ್ತಿಯಲ್ಲಿ ಅತ್ಯಂತ ಶ್ರದ್ಧೆಯುಳ್ಳ ವ್ಯಕ್ತಿ ನಾಡಿಗೆ ಗುರು ಸ್ಥಾನದಲ್ಲಿ ನಿಂತು ನಾಡೋಜನಾಗಬಲ್ಲ ಎಂಬುದಕ್ಕೆ ಎಂ.ಎಚ್.ಕೆ. ಸಾಕ್ಷಿಯಾಗಿದ್ದಾರೆ. ಇದಕ್ಕೆ

ಕಾರಣ ತಮ್ಮ ಗುರುಗಳಾದ ತಿ.ನಂ.ಶ್ರೀ ಮುಂತಾದ ದಿಗ್ಗಜರು ಎಂದು ಅವರು ನೆನೆಯುತ್ತಾರೆ. ಕನ್ನಡ ಅಧ್ಯಾಪಕರಿಗೆ ಇದಕ್ಕಿಂತ ದೊಡ್ಡ ಸ್ಫೂರ್ತಿ ಬೇಕೆ? ಡಿ.ಎಲ್.ಎನ್. ಜಿ.ಪಿ.ರಾಜರತ್ನಂ, ತೀ.ನಂ.ಶ್ರೀ ಅವರಂತಹ ಉತ್ತಮ ಅಧ್ಯಾಪಕ ಪರಂಪರೆಗೆ ಎಂ.ಎಚ್.ಕೆ. ಒಂದು ಸೇರ್ಪಡೆ.

ಎಂ.ಎಚ್.ಕೆ. ಅವರನ್ನು ಆಗೀಗ ಸಭೆ–ಸಮಾರಂಭಗಳಲ್ಲಿ ಭೇಟಿಯಾಗಿ, ಅವರ ಭಾಷಣಗಳನ್ನು ಕೇಳಿದ ಪರಿಚಿತ ಅನುಭವವಿತ್ತಾದರೂ ದೀರ್ಘ ಸಂಭಾಷಣೆಗಳಿಗೆ ಅವಕಾಶವಾಗಿರಲಿಲ್ಲ. ಈ ಹೊತ್ತಗೆ ಬರೆಯುವ ಸಂದರ್ಭದಲ್ಲಿ ನಾಲ್ಕೈದು ಸಲ ಅವರನ್ನು ಭೇಟಿಯಾಗಿದ್ದೇನೆ. ಮನಸ್ಸು ತಣಿಯುವಷ್ಟು ಮಾತಾಡಿದ್ದೇನೆ. ಅಗತ್ಯ ಬಂದಾಗ, ಜತನದಿಂದ ಕಾಪಾಡಿಕೊಂಡಿದ್ದ, ಏಕೈಕ ಪ್ರತಿಗಳಿದ್ದ ಪುಸ್ತಕಗಳನ್ನೂ ಕೊಟ್ಟು ಸಹಕರಿಸಿದ್ದಾರೆ. ಛಾಯಾಚಿತ್ರಗಳನ್ನು ಕೇಳಿದಾಗಲೂ ಸಂತೋಷದಿಂದ ಕೊಟ್ಟಿದ್ದಾರೆ. ಸಂದರ್ಶನದಲ್ಲಿ ನಾನು ಕೇಳಿದ ಪ್ರಶ್ನೆಗಳಿಗೆಲ್ಲ ತಾಳ್ಮೆಯಿಂದ ಉತ್ತರಿಸಿದ್ದಾರೆ. ಅವರ ಪತ್ನಿ ಶ್ರೀಮತಿ ಸುವರ್ಣ ಅವರು ತಮ್ಮ ಹಸನ್ಮುಖ, ಆದರಾತಿಥ್ಯಗಳಿಂದ ಮನಸ್ಸಿಗೆ ಸಂತೋಷ ಕೊಟ್ಟಿದ್ದಾರೆ. ಇದಕ್ಕಾಗಿ ನಾನು ಈ ದಂಪತಿಗಳಿಗೆ ಆಭಾರಿಯಾಗಿದ್ದೇನೆ.

ಈ ಕೃತಿ ಬರೆಯಲು ನನಗೆ ಅವಕಾಶ ನೀಡಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಈ ಪುಸ್ತಕ ಬರೆಯಲು ನನ್ನನ್ನು ಆಯ್ಕೆ ಮಾಡಿದ ಶ್ರೀ ಕೆ.ಎಸ್.ಮಧುಸೂದನ ಅವರಿಗೆ ವಿಶ್ವಾಸಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಎಲ್.ಜಿ. ಮೀರಾ

# ಪರಿವಿಡಿ


ಅಧ್ಯಕ್ಷರ ಮಾತು iii
ಸಂಪಾದಕೀಯ vii
ಲೇಖಕಿಯ ಮಾತು ix

1. ಎಂ.ಎಚ್. ಕೃಷ್ಣಯ್ಯ ವ್ಯಕ್ತಿಯಾಗಿ 1–6
2. ಎಂ.ಎಚ್. ಕೃಷ್ಣಯ್ಯ ಅವರ ಸಾಹಿತ್ಯ 7–77
3. ಸಂದರ್ಶನ 78–87
4. ಉಪಸಂಹಾರ 88–89
5. ಛಾಯಾಚಿತ್ರಗಳು 90–103
6. ವ್ಯಕ್ತಿ ವಿವರ 104–106

# ಎಂ.ಎಚ್. ಕೃಷ್ಣಯ್ಯ – ವ್ಯಕ್ತಿಯಾಗಿ

ಎರಡು ರೀತಿಯ ಜನ ಇರುತ್ತಾರೆ. ಮೊದಲನೆಯವರು ವೃತ್ತಿಯನ್ನು ಹೊಟ್ಟೆಪಾಡಿಗಾಗಿ ಮಾಡಲೇಬೇಕಾದ ಅನಿವಾರ್ಯ ದಂದುಗ ಎಂದು ಭಾವಿಸುವವರು. ಎರಡನೆಯವರು ವೃತ್ತಿಯನ್ನು ಆತ್ಮೋದ್ಧಾರದ ಮೆಟ್ಟಿಲೆಂದು ಭಾವಿಸಿ ಅದರಲ್ಲಿ ನೂರು ಶೇಕಡ ಶ್ರದ್ಧೆಯನ್ನಿಟ್ಟು ತನ್ಮೂಲಕ ಸಾರ್ಥಕತೆಯನ್ನು ಪಡೆಯುವವರು. ಶ್ರೀಯುತ ಮೈಸೂರು ಹುಚ್ಚಯ್ಯ ಕೃಷ್ಣಯ್ಯನವರು ಎರಡನೆಯ ಸಾಲಿಗೆ ಸೇರುತ್ತಾರೆ. ಇವರು ಕಾಲೇಜು ಅಧ್ಯಾಪಕ ವೃತ್ತಿಯಲ್ಲಿ ತಮಗಿದ್ದ ಶ್ರದ್ಧೆ ಮತ್ತು ಜ್ಞಾನದಾಹಗಳಿಂದಾಗಿ ಒಳ್ಳೆಯ ಲೇಖಕರಾಗಿ ರೂಪುಗೊಂಡು ಸಮಾಜದಲ್ಲಿ ಗೌರವಾರ್ಹ ಸ್ಥಾನ ಗಳಿಸಿದವರು.

ಶಿಕ್ಷಣ ಕ್ಷೇತ್ರದ ಆಚೆ ಇರುವ ಮಂದಿಗೆ ಶ್ರೀ ಎಂ ಎಚ್ ಕೃಷ್ಣಯ್ಯನವರು ನಮ್ಮ ನಡುವಿನ ಹಿರಿಯ ಕಲಾ ಚಿಂತಕರು, ಸಾಹಿತ್ಯ ವಿಮರ್ಶಕರು ಹಾಗೂ ವಿದ್ವಾಂಸರು ಎಂದು ಪರಿಚಿತರಾಗಿದ್ದಾರೆ. ಈ ಕೀರ್ತಿಯು ಈ ಹಿರಿಯರು ಅರ್ಜಿಸಿದ ಸಾಂಸ್ಕೃತಿಕ ಆಸ್ತಿ. ವಾಸ್ತವಿಕವಾಗಿ ಇವರು ಕನ್ನಡ ಪ್ರಾಧ್ಯಾಪಕರಾಗಿ ವೃತ್ತಿ ಸಲ್ಲಿಸುತ್ತಾ ಮೌಲಿಕ ಗ್ರಂಥಗಳನ್ನು ಬರೆದವರು. ಕರ್ನಾಟಕ ಕಲಾ ದರ್ಶನ, ಬೆಂಗಳೂರು ದರ್ಶನ ಮುಂತಾದ ಸಾಂಸ್ಕೃತಿಕವಾಗಿ ಮುಖ್ಯವೆನಿಸುವ ಗ್ರಂಥಗಳ ಸಂಪಾದಕ ಮಂಡಳಿಗಳಲ್ಲಿ ಸಕ್ರಿಯವಾಗಿ ಕೆಲಸ ಮಾಡಿದವರು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದವರು. ಕರ್ನಾಟಕ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಲ್ಲಿಯೂ ನಿಯೋಜನೆ ಮೇರೆಗೆ ಸೇವೆ ಸಲ್ಲಿಸಿದ ಅನುಭವವುಳ್ಳವರು.

ಮೊದಲೇ ಹೇಳಿದಂತೆ ಮೂಲತಃ ಕೃಷ್ಣಯ್ಯನವರು ಒಬ್ಬ ಶ್ರದ್ಧಾವಂತ ಅಧ್ಯಾಪಕರು. ವಿದ್ಯಾರ್ಥಿಗಳಿಗೆ ಪಾಠ ಹೇಳುವ ತಮ್ಮ ವೃತ್ತಿಯನ್ನು ಕೇವಲ ಜೀವನೋಪಾಯವೆಂದು ಭಾವಿಸದೆ ಎಳೆಯರ ಜ್ಞಾನದಿಗಂತವನ್ನು ವಿಸ್ತರಿಸುವ ಧನ್ಯತೆಯ ಕೈಂಕರ್ಯವೆಂದು ಭಾವಿಸಿದವರು. ಈ ಶ್ರದ್ಧೆಯೇ ಅವರ ವ್ಯಕ್ತಿತ್ವದ ಶಕ್ತಿಗೆ ಮತ್ತು ಹೊರಚಾಚುಗಳಿಗೆ ಕಾರಣವಾಗಿದೆ ಅನ್ನಿಸುತ್ತದೆ.

ಕೃಷ್ಣಯ್ಯನವರ ಅಧ್ಯಾಪಕ ಮನೋಧರ್ಮ ಅವರ ಬರವಣಿಗೆಯ ಶೈಲಿಯಲ್ಲೂ ಕಾಣಿಸುತ್ತದೆ. ಯಾವುದೇ ವಿಷಯವನ್ನಾದರೂ ಕಲಾಕೃತಿಯನ್ನಾದರೂ ಓದುಗನನ್ನು ಎದುರಿಗೆ ಕೂರಿಸಿಕೊಂಡಿದ್ದಾರೇನೋ

ಎಂಬಂತೆ ವಿವರಣೆಗೆ ತೊಡಗುತ್ತಾರೆ. ತಾವು ವಿವರಿಸುತ್ತಿರುವುದು ಅರ್ಥವಾಗುವಂತೆ, ಕ್ರಮವಾಗಿ ಒಂದು ಕಡೆಯಿಂದ ಪರಿಚಯಿಸುತ್ತಾರೆ. ದ್ವಂದ್ವಕ್ಕೆಡೆಯಿಲ್ಲದ ನಿಖರ, ತರ್ಕಬದ್ಧ ನಿರೂಪಣೆ ಇವರ ವಿಶಿಷ್ಟ ರೀತಿಯಾಗಿದೆ.

ಅಧ್ಯಾಪಕ ವೃತ್ತಿಯನ್ನು ಪ್ರೀತಿಸಿದಷ್ಟೇ ಇವರು ಕಲೆಯನ್ನು ಕೂಡ ಪ್ರೀತಿಸಿದ್ದಾರೆ. ಒಂದು ಚಿತ್ರ, ಹಾಡು, ಶಿಲ್ಪ ಇವರಿಗೆ ಸದಾ ಕಾಲಕ್ಕೂ ಅನಂದ ನೀಡುವ ಸಂಗತಿಗಳಾಗಿವೆ. ಅವರು ಕಲೆಯ ಬಗ್ಗೆ ಮಾತಾಡುವುದನ್ನು ಕೇಳುತ್ತಿದ್ದರೆ, ಒಂದು ಮಗುವಿನಲ್ಲಿರುವ ಬೆರಗು ಈಗಲೂ ಇವರಲ್ಲಿರುವುದು ಕೇಳುಗರಿಗೆ ವೇದ್ಯವಾಗುತ್ತದೆ. ಜೀವನದಲ್ಲಿ ಯಾವುದಾದರೂ ವಿಷಯದಲ್ಲಿ ಆಳವಾದ ಪ್ರೀತಿ ಇದ್ದರೆ ಎಷ್ಟೇ ವಯಸ್ಸಾದರೂ, ಏನೇ ಕಷ್ಟಗಳು ಬಂದರೂ ಜೀವನೋತ್ಸಾಹ ಕುಗ್ಗುವುದಿಲ್ಲ ಎಂಬುದು ನಾವು ಈ ಕಲಾಸಕ್ತ ಹಿರಿಯರಿಂದ ಕಲಿಯಬೇಕಾದ ಸಂಗತಿ.

ಸರಳ ಮನಸ್ಸಿನ, ಸರಳ ಜೀವನಶೈಲಿಯ ಈ ಸಜ್ಜನ ವ್ಯಕ್ತಿಯ ಬದುಕು ಒಂದು ಉತ್ತಮ ಬದುಕಿಗೆ ಮಾರ್ಗಸೂಚಿಯಾಗಿದೆ. ಇವರಿಂದ ಕಲಿಯುವುದು ಬಹಳ ಇದೆ. ಕರ್ನಾಟಕವು ಪ್ರೀತಿಯಿಂದ ಕೊಟ್ಟ ನಾಡೋಜ ಬಿರುದು ಇವರ ಹೆಗಲ ಮೇಲೆ ಹಗುರವಾಗಿ ಕುಳಿತಿದೆ. "ನನ್ನನ್ನು ಪ್ರೊಫೆಸರ್ ಎಂದು ಗುರುತಿಸಿದರೆ ಸಾಕು. ಪಾಠ ಹೇಳುವುದು ನಾನು ಪ್ರೀತಿಯಿಂದ ಮಾಡಿದ ಕೆಲಸವಲ್ಲವೇ? ಆ ವೃತ್ತಿಯ ಸೂಚಕವಾದ ಪ್ರೊಫೆಸರ್ ಎಂಬ ಪದವೇ ನನಗಿಷ್ಟ. ಬೇರೆ ಬಿರುದುಗಳು ನನಗೆ ಬೇಡ" ಎನ್ನುವ ಗರಿಹಗುರ ಮನಸ್ಸಿನವರು ಇವರು. ತಾವು ಮಾಡುವ ಕೆಲಸದಲ್ಲಿ ಯಾರಿಗೆ ಸಂತೋಷ ಸಿಗುತ್ತದೋ ಅವರು ಅತ್ಯಂತ ತೃಪ್ತರು ಎನ್ನುತ್ತದೆ ಈ ಲೋಕದ ವಿವೇಕ. ಕೃಷ್ಣಯ್ಯನವರು ಈ ದೃಷ್ಟಿಯಿಂದ ನಿಜಕ್ಕೂ ಸಂತೃಪ್ತರು.

**ಬದುಕು:** ಎಂ ಎಚ್ ಕೃಷ್ಣಯ್ಯ – ಮೈಸೂರು ಹುಚ್ಚಯ್ಯ ಕೃಷ್ಣಯ್ಯ – ಹುಟ್ಟಿದ್ದು ಮೈಸೂರಿನಲ್ಲಿ, 1937ರ ಜುಲೈ 21ರಂದು. ಇವರು ವಿದ್ಯಾಭ್ಯಾಸ ಮಾಡಿದ್ದು ಅದೇ ಊರಿನಲ್ಲಿ. 1959ರಲ್ಲಿ ಕನ್ನಡ ಎಂ ಎ ಪೂರೈಸಿದರು. ನಂತರ ಸರ್ಕಾರಿ ಸೇವೆಗೆ ಸೇರಿ ಕರ್ನಾಟಕದ ಬೇರೆ ಬೇರೆ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದರು. ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಲ್ಲಿ ಪ್ರತಿನಿಯೋಜನೆ ಮೇರೆಗೆ ಸೇವೆ ಸಲ್ಲಿಸಿದರು. ಅಧ್ಯಾಪನವನ್ನು ಕುರಿತು ಆಳವಾದ ಪ್ರೀತಿ ಇದ್ದ ಇವರು

ಪ್ರಾಂಶುಪಾಲರ ಹುದ್ದೆಗಿಂತ ಪಾಠ ಮಾಡುವುದನ್ನೇ ಮುದ್ದೆಂದು ಭಾವಿಸಿ, ತಮ್ಮ ಸೇವಾವಧಿಯ ಕೊನೆಯಲ್ಲಿ ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ಪ್ರೊಫೆಸರ್ ಕೆಲಸ ಮಾಡುತ್ತ ನಿವೃತ್ತಿ ಹೊಂದಿದರು.

ನಿವೃತ್ತಿ ಅನ್ನುವುದು ವೃತ್ತಿಗೇ ಹೊರತು ಪ್ರವೃತ್ತಿಗಲ್ಲವಲ್ಲ! ನಿವೃತ್ತಿಯ ನಂತರ ಈ ಹಿರಿಯರು ತಮ್ಮ ಸಮಯದ ಸದ್ಬಳಕೆ ಮಾಡಿಕೊಂಡು ಅನೇಕ ಕಾರ್ಯಕ್ರಮಗಳಲ್ಲಿ ಅಚ್ಚುಕಟ್ಟಾದ ಉಪನ್ಯಾಸಗಳನ್ನು ನೀಡಿದರು. ಗ್ರಂಥಗಳನ್ನು ಸಂಪಾದಿಸಿದರು. ಕಲೆಗಳನ್ನು ಕುರಿತು ತಮ್ಮ ಅಧ್ಯಯನವನ್ನು ಮುಂದುವರಿಸಿದರು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಸ್ಥಾನ ಇವರನ್ನು ಅರಸಿಕೊಂಡು ಬಂದಾಗ ಅದನ್ನು ಕೆಲಸ ಮಾಡುವ ಅವಕಾಶವೆಂದು ಸ್ವೀಕರಿಸಿದರು. ಅನೇಕ ಹೊಸ ಯೋಜನೆಗಳನ್ನು ಕೈಗೊಂಡು ಸಾಕಷ್ಟು ಯಶಸ್ಸನ್ನು ಪಡೆದರು. 'ಕರ್ನಾಟಕ ಕಲಾ ದರ್ಶನ, ಬೆಂಗಳೂರು ದರ್ಶನದ ಬೃಹತ್ ಸಂಪುಟಗಳನ್ನು ಇತರ ಲೇಖಕರ ಜೊತೆಗೆ ಸಂಪಾದಿಸಿದರು. ವಿ.ಸೀ.ಸಂಪದದ ಅಧ್ಯಕ್ಷರಾಗಿ ಈಗಲೂ ದುಡಿಯುತ್ತಿದ್ದಾರೆ. ನಾಡಿನ ಕಲಾವಿದರು, ಸಾಹಿತಿಗಳು ಇವರ ಮನೆಗೆ ಸದಾ ಬರುತ್ತಿರುತ್ತಾರೆ, ವಿವಿಧ ವಿಷಯಗಳನ್ನು ಕುರಿತು ಸಲಹೆ ಮಾರ್ಗದರ್ಶನಗಳನ್ನು ಕೇಳುತ್ತಿರುತ್ತಾರೆ. ಬೇಂದ್ರೆಯವರ 'ನಾಕುತಂತಿ' ಹಾಡನ್ನು ಸಂಪರ್ಕದನಿಯಾಗಿ ಇಟ್ಟಿರುವ ಇವರ ಜಂಗಮವಾಣಿಯು ತಂತುಗಳನ್ನು ನಿರಂತರವಾಗಿ ಬೆಸೆಯುತ್ತಲೇ ಇದೆ. ಒಟ್ಟಿನಲ್ಲಿ ಬೇಸರಕ್ಕೆ ಎಡೆಯಿಲ್ಲದ ಸಾಹಿತ್ಯಕಲಾರಸಭರಿತ ಬಾಳನ್ನು ಈ ವಿದ್ವಾಂಸರು ರೂಪಿಸಿಕೊಂಡಿದ್ದಾರೆ. ಸಂಬಂಧಗಳು ರೂಪುಗೊಳ್ಳುವುದೇ ಕಷ್ಟಕರವಾಗಿರುವ ಈ 'ಬಳಸು ಮತ್ತು ಎಸೆ' ಕಾಲದಲ್ಲಿ, ಹತ್ತಾರು ಜನರು ಆಸೆಯಿಂದ ಬಂದು ಭೇಟಿಯಾಗುವಂತೆ ಬಾಳುವುದು ಒಂದು ಸವಾಲೇ ಸರಿ. ಇಂತಹ ಸಾರ್ಥಕ ಬಾಳನ್ನು ತಮ್ಮದಾಗಿಸಿಕೊಂಡ ಶ್ರೀ ಎಂ.ಎಚ್.ಕೃಷ್ಣಯ್ಯನವರನ್ನು ಅಭಿನಂದಿಸಲೇಬೇಕು.

ಸಾಹಿತ್ಯ ಕ್ಷೇತ್ರದಲ್ಲಿ ಈ ಹಿರಿಯರು ಪಡೆದುಕೊಂಡಿರುವ ಒಡನಾಟ, ಸಂತೋಷಗಳು ಒಂದೆಡೆಯಾದರೆ ವೈಯಕ್ತಿಕ ಬದುಕಿನಲ್ಲಿ ಇವರು ಕಾಪಿಟ್ಟುಕೊಂಡಿರುವ ಸಂಬಂಧಗಳ ಹದ ಇನ್ನೊಂದೆಡೆ. ಶ್ರೀಮತಿ ಸುವರ್ಣ ಅವರೊಂದಿಗೆ ನಿಡುಗಾಲದ ಪ್ರೀತಿಯ ದಾಂಪತ್ಯ ಇವರದು. ತಾನು ಉದ್ಯೋಗಕ್ಕಾಗಿ ಊರೂರು ತಿರುಗುತ್ತಿದ್ದಾಗ ಮನೆ ಮತ್ತು ಮಕ್ಕಳನ್ನು ಜೋಕೆ

ಮಾಡಿದ ಹಾಗೂ ಸಂಸಾರದ ಜವಾಬ್ದಾರಿ ಹೊತ್ತ ತನ್ನ ಪತ್ನಿಯ ಬಗ್ಗೆ ಇವರಿಗೆ ವಿಶೇಷ ಆದರ, ವಿಶ್ವಾಸ. ಉನ್ನತ ವಿದ್ಯಾಭ್ಯಾಸ ಪಡೆದು ಒಳ್ಳೆಯ ಹುದ್ದೆಗಳಲ್ಲಿರುವ ಇಬ್ಬರು ಮಕ್ಕಳ ಬಗ್ಗೆ ಹೆಮ್ಮೆ, ಸಂತೋಷ. ಮಗನೊಬ್ಬನನ್ನು ಅವನ ತರುಣ ವಯಸ್ಸಿನಲ್ಲಿ ಕಳೆದುಕೊಂಡು, ಆ ದುಃಖವನ್ನು ವಿಷಕಂಠರಂತೆ ನುಂಗಿಕೊಂಡು, ಈ ದಂಪತಿಗಳು ಬಾಳ ನೌಕೆಯನ್ನು ಧೈರ್ಯದಿಂದ ಮುನ್ನಡೆಸಿದ್ದಾರೆ. ಬರುವ ಅತಿಥಿ, ಅಭ್ಯಾಗತರಿಗಾಗಿ ತಮ್ಮ ಮನೆಯನ್ನು ತಂಪು ಕೊಡುವ ಹೊಂಗೆ ಮರದಂತೆ ರೂಪಿಸಿರುವುದು ಈ ದಂಪತಿಗಳ ಸಜ್ಜನಿಕೆ, ಸುಸಂಸ್ಕೃತಿಗೆ ಸಾಕ್ಷಿ.

***

**ಅಧ್ಯಾಪನ:–** ಕೃಷ್ಣಯ್ಯನವರಿಗೆ ತುಂಬ ಇಷ್ಟವಾದ ಕೆಲಸ ಅಂದರೆ ಅಧ್ಯಾಪನ. ಅವರ ಬರಹದ ಮೂಲಸೆಲೆ ಇರುವುದು ಅಧ್ಯಾಪಕ ಮನೋಧರ್ಮದಲ್ಲಿ. ಯಾವುದಾದರೂ ಒಂದು ವಿಷಯದ ಬಗ್ಗೆ ಆಳವಾಗಿ ಅಧ್ಯಯನ ಮಾಡಿ ಅದರ ಆಳ, ವಿಸ್ತಾರಗಳನ್ನು ಅರಿತು ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಅದನ್ನು ಅರ್ಥವಾಗುವಂತೆ ವಿವರಿಸಬೇಕು, ಸ್ಪಷ್ಟ ಪಡಿಸಬೇಕು, ಈ ಮೂಲಕ ವಿದ್ಯಾರ್ಥಿಯ ಜ್ಞಾನದಿಗಂತವನ್ನು ಕೈಲಾದಷ್ಟು ಮಟ್ಟಿಗೆ ವಿಸ್ತರಿಸಬೇಕು ಎಂಬ ಹಂಬಲ ಅವರದು. ವಿದ್ಯಾರ್ಥಿಗಳನ್ನು ಬೆಳೆಸುವುದರಲ್ಲಿ ಸುಖ ಕಾಣುವ ಉನ್ನತ ಮನೋನೆಲೆ. ಕನ್ನಡ ಸಂಸ್ಕೃತಿ ಇಲಾಖೆಯು ನಡೆಸುವ ಮನೆಯಂಗಳದಲ್ಲಿ ಮಾತುಕತೆ ಈ ಕಾರ್ಯಕ್ರಮದಲ್ಲಿ ಸ್ವತಃ ಕೃಷ್ಣಯ್ಯನವರು ತಮ್ಮ ಈ ಭಾವನೆಯನ್ನು ಹಂಚಿಕೊಂಡಿದ್ದಾರೆ. ಅವರ ಕೃತಿಗಳಿಗೂ ಈ ಸ್ವಭಾವ ಮೂಲವಾಗಿದೆ. 'ಕನ್ನಡ ಭಾಷೆಯ ಸಂಕ್ಷಿಪ್ತ ಚರಿತ್ರೆ' ಪುಸ್ತಕವು ಮೂಡಿ ಬಂದಿದ್ದು ಅವರು ತರಗತಿಗಾಗಿ ಮಾಡಿಕೊಂಡ ಟಿಪ್ಪಣಿಗಳಿಂದ. ಇವರನ್ನು ನೋಡಿದರೆ ಡಿಎಲ್ಎನ್, ತ ಸು ಶಾಮರಾಯರು, ತಿ ನಂಶ್ರೀ, ಜಿ ಪಿ ರಾಜರತ್ನಂ ಮುಂತಾದ ನವೋದಯದ ಅಧ್ಯಾಪಕ ಪರಂಪರೆ ನೆನಪಾಗುತ್ತದೆ. ಅದೇ ಶಿಷ್ಯ ವಾತ್ಸಲ್ಯ, ಅದೇ ಬದ್ಧತೆ. ಐಎಎಸ್, ಕೆಎಎಸ್ ಓದುವಾಗ ಅವರಿಂದ ಪಾಠ ಹೇಳಿಸಿಕೊಂಡವರೂ ಇವರ ಅಧ್ಯಾಪಕಆದರ್ಶಕ್ಕೆ ತಲೆಬಾಗಿದ್ದಾರೆ. ಈಗ ಐಎಎಸ್ ಅಧಿಕಾರಿಯಾಗಿರುವ ಮಹಿಳೆಯೊಬ್ಬರು ತಾವು ಕೃಷ್ಣಯ್ಯನವರಿಂದ ಪಾಠ ಕೇಳಿ ಕನ್ನಡ ವಿಷಯದ ಪರೀಕ್ಷೆ ಬರೆಯುತ್ತಿದ್ದಾಗ, ಸ್ವತಃ ಕೃಷ್ಣಯ್ಯನವರು ಕಿವಿಯಲ್ಲಿ ಹೇಳಿ ಬರೆಸುತ್ತಿದ್ದಾರೇನೋ ಎಂಬ ಭಾವನೆ

ಉಂಟಾಗುತ್ತಿತ್ತು ಎಂದು ಹೇಳಿದ್ದರಂತೆ. ಕನ್ನಡದಲ್ಲಿ ಐಎಎಸ್, ಕೆಎಎಸ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಆಧಿಕಾರಿಗಳಾಗಿರುವವರು ಸಾ ಶಿ ಮರುಳಯ್ಯನವರನ್ನು ಮತ್ತು ಇವರನ್ನು ಒಂದೇ ಸಾಲಿನಲ್ಲಿಟ್ಟು ಗೌರವಿಸುತ್ತಾರೆ. ಈ ನಿಸ್ವಾರ್ಥಸೇವೆ ಮತ್ತು ತ್ಯಾಗಗಳಿಗಾಗಿ ನಾಡು ಇವರಿಗೆ ಋಣಿ.

ಕೃಷ್ಣಯ್ಯನವರ ಜೀವಕೊರಳ ಗೆಳೆಯರಾದ ಅ ರಾ ಮಿತ್ರ ಅವರು ತಮ್ಮ ಗೆಳೆಯನ ಅಧ್ಯಾಪಕ ಗುಣವನ್ನು ಹೀಗೆ ನೆನೆಯುತ್ತಾರೆ – "ಮೊದಲಿಗೆ ಕೃಷ್ಣಯ್ಯ ತುಂಬ ಪ್ರಭಾವಶಾಲಿಯಾದ ಅಧ್ಯಾಪಕ ಎಂದು ಹೇಳಬೇಕು. ಅವರ ಪ್ರವಚನ ವಿಧಾನವನ್ನು ದೇಶವಿದೇಶಗಳಲ್ಲಿರುವ ಅನೇಕ ವಿದ್ಯಾರ್ಥಿಗಳು ಕೃತಜ್ಞತೆಯಿಂದ ಜ್ಞಾಪಿಸಿಕೊಳ್ಳುತ್ತಾರೆ. ಯಾವುದೇ ವಿಷಯವನ್ನು ತೆಗೆದುಕೊಂಡರೂ ಅದಕ್ಕೆ ಜೀವ ತುಂಬುವ ಶಕ್ತಿ ಅವರಲ್ಲಿದೆ. ಹಳಗನ್ನಡ ಕಾವ್ಯ ಖಂಡಗಳನ್ನು ಅವರು ಓದುತ್ತಿದ್ದ ರೀತಿ, ವ್ಯಾಖ್ಯಾನಿಸುತ್ತಿದ್ದ ಬಗೆಗಳನ್ನು ಶಿಷ್ಯವರ್ಗ ಅಭಿಮಾನದಿಂದ ವಿವರಿಸುತ್ತಾರೆ. ಪಾಠಕ್ಕೆ ಪೂರ್ವಸಿದ್ಧತೆ ಮಾಡಿಕೊಳ್ಳುವುದು ನಮ್ಮಿಬ್ಬರಿಗೂ ಸಮಾನವಾದ ಗೀಳಾಗಿತ್ತು. ಕೃಷ್ಣಯ್ಯನವರಂಥ ಅಧ್ಯಾಪಕರಿದ್ದರೆ ಯಾವ ಪಠ್ಯವೂ ನೀರಸವಾಗುವುದಿಲ್ಲ ಎಂದು ಅವರ ವಿದ್ಯಾರ್ಥಿಗಳನೇಕರು ನನಗೆ ಹೇಳಿದ್ದಾರೆ. ಸುಮ್ಮನೆ ವಾಕ್ ಪ್ರವಾಹವನ್ನು ಹರಿಯಬಿಡದೆ ಮಧ್ಯೆ ಮಧ್ಯೆ ನಿಂತು ವಿದ್ಯಾರ್ಥಿಗಳನ್ನು ಚಿಂತನೆಗೆ ಹಚ್ಚುವ ರೀತಿಯಲ್ಲಿ ಸಂವಾದವನ್ನು ಬೆಳೆಸುವುದು ಅವರ ಶಿಕ್ಷಣ ನೀತಿಯಾಗಿತ್ತು. ಪರಿಕರ ವಿಷಯಗಳ ಪೂರ್ವ ಸಾಮಾಗ್ರಿಯ ಕುಂದಣದಿಂದ ಅವರು ಪಠ್ಯವನ್ನು ಅಲಂಕರಿಸುವ ವಿಧಾನ ಎಲ್ಲ ಶಿಕ್ಷಕರಿಗೂ ಮಾರ್ಗದರ್ಶಕವಾಗಿತ್ತು. ಅಲ್ಲದೆ ಗ್ರಂಥಾಲಯಗಳ ಸದುಪಯೋಗ ಚುರುಕಾದ ಅಧ್ಯಯನಗಳಿಂದಾಗಿ ಅವರ ಅಧ್ಯಾಪನ ಕಾರ್ಯ ಮೆರುಗು ಪಡೆದಿತ್ತು. ಇವರ ಉಪನ್ಯಾಸ ಕಲೆಯನ್ನು ಕೆ.ಎಸ್.ನರಸಿಂಹಸ್ವಾಮಿಯವರ ಒಂದು ರೂಪಕದ ಹಿನ್ನೆಲೆಯಲ್ಲಿ ಸ್ಮರಿಸುವ ಬಯಕೆ ನನ್ನದು. ಅದೆಂದರೆ

"ಅಬ್ಬರಗಳನ್ನು ದಾಟಿದ

ಗಟ್ಟಿ ಪಂಕ್ತಿಗಳ ಸಹಜ ಸಂಚಾರದ ಕನಸು"

ಹೀಗೆ ತಮ್ಮ ಮಿತ್ರನಿಂದ ಪ್ರಶಂಸೆ ಪಡೆದ ಎಂ.ಎಚ್.ಕೆ. ಇಷ್ಟ ಪಟ್ಟು ಪಾಠ ಮಾಡಿದವರು. ಶ್ರೀಯುತರು ಪಾಠ ಮಾಡುತ್ತಿದ್ದಾಗ ಪದವಿ ಕಾಲೇಜುಗಳಿಗೆ ಸೆಮಿಸ್ಟರ್ ಧಾವಂತದ ಪೀಡೆ ತಗುಲಿರಲಿಲ್ಲ. ಹೀಗಾಗಿ ಪಾಠಕ್ಕೆ

ದೀರ್ಘ ಪೀಠಿಕೆ, ಪ್ರಸ್ತಾವನೆಗಳನ್ನು ನೀಡಲು ಮತ್ತು ಪಾಠ ಮಾಡುತ್ತಿದ್ದಾಗ ಪಾಠಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಹೇಳುವ ಅವಕಾಶ ಇತ್ತು. ಕೃಷ್ಣಯ್ಯನವರು ಇದನ್ನು ಚೆನ್ನಾಗಿ ಬಳಸಿಕೊಂಡು ತಮ್ಮ ಅಧ್ಯಾಪನವನ್ನು ಅಪರಂಜಿಯಾಗಿಸಿಕೊಂಡರು. ಒಬ್ಬ ಅಧ್ಯಾಪಕನ ಜವಾಬ್ದಾರಿ ಎಷ್ಟು ದೊಡ್ಡದು ಎಂಬುದನ್ನು ಚೆನ್ನಾಗಿ ಅರಿತಿದ್ದ ಇವರು 'ಒಬ್ಬ ಉತ್ತಮ ಅಧ್ಯಾಪಕನಿಗೆ ಪಠ್ಯ ಒಂದು ನೆಪ. ತಾನು ಹೇಳಬೇಕಾದ ವಿಚಾರಗಳನ್ನು, ಜೀವನಮೌಲ್ಯಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸಲು ಇರುವ ಉಪಕರಣ ಅದು. ಪಠ್ಯಭಾಗ ಪೂರೈಸಿದರೆ, ಅಥವಾ ಪರೀಕ್ಷೆಗಾಗಿ ವಿದ್ಯಾರ್ಥಿಗಳನ್ನು ತಯಾರು ಮಾಡಿಬಿಟ್ಟರ ಅಧ್ಯಾಪಕನ ಜವಾಬ್ದಾರಿ ಮುಗಿದುಹೋಗುವುದಿಲ್ಲ. ಇದಕ್ಕಿಂತ ಆಳವಾದ ರೀತಿಯಲ್ಲಿ ವಿದ್ಯಾರ್ಥಿಯ ಮನಸ್ಸನ್ನು ಮುಟ್ಟಬೇಕು. ಅವನ ಜ್ಞಾನದಿಗಂತವನ್ನು ವಿಸ್ತರಿಸುವುದರ ಮೂಲಕ ಆ ಎಳೆಜೀವದ ಬದುಕನ್ನು ಉತ್ತಮವಾಗಿ ರೂಪಿಸುವ ಮಹತ್ಕಾರ್ಯ ಅಧ್ಯಾಪಕನಿಂದ ಆಗಬೇಕು' ಎಂಬ ಪ್ರಜ್ಞೆ ಇದ್ದ ಅಪರೂಪದ ಬೋಧಕರು. ನಾಡು ಇವರಿಗೆ ಪ್ರೀತಿಯಿಂದ ಕೊಟ್ಟ ಗೌರವ ಡಾಕ್ಟರೇಟ್ ಮತ್ತು ನಾಡೋಜ ಗೌರವಗಳು ಇವರೊಳಗಿನ ಅಧ್ಯಾಪಕನಿಗೆ ಸಲ್ಲುವಂಥವು ಎಂಬುದು ಇವರನ್ನು ಬಲ್ಲವರ ಭಾವನೆಯಾಗಿದೆ.

# ಎಂ.ಎಚ್. ಕೃಷ್ಣಯ್ಯನವರ ಸಾಹಿತ್ಯ

## ರಂಗಭೂಮಿ ಮತ್ತು ಸೌಂದರ್ಯಪ್ರಜ್ಞೆ

ಕೃಷ್ಣಯ್ಯನವರ ಮುಖ್ಯ ಪುಸ್ತಕಗಳಲ್ಲೊಂದು ಅವರ 'ರಂಗಭೂಮಿ ಮತ್ತು ಸೌಂದರ್ಯಪ್ರಜ್ಞೆ'. 2009ರಲ್ಲಿ ಪ್ರಕಟಗೊಂಡ ಇದು ಒಂದು ಲೇಖನಗುಚ್ಛ. ರಂಗಭೂಮಿಯ ಚರಿತ್ರೆ ಹಾಗೂ ಸೌಂದರ್ಯಪ್ರಜ್ಞೆಯನ್ನು ಕುರಿತ ಲೇಖನಗಳು ಇಲ್ಲಿವೆ. 254 ಪುಟಗಳ ಪುಸ್ತಕ ಇದು. ಎರಡು ಭಾಗಗಳು. ಒಟ್ಟು ಹದಿನೇಳು ಲೇಖನಗಳು. ಮೊದಲನೆಯ ಭಾಗದಲ್ಲಿ ಐದು ಲೇಖನಗಳಿವೆ – ಭಾರತೀಯ ರಂಗಭೂಮಿ, ಕನ್ನಡ ರಂಗಸಾಹಿತ್ಯ ಮತ್ತು ರಂಗಭೂಮಿ, ರಂಗಚಿಂತನೆಯ ಸಮಗ್ರ ನೋಟ, ಆಧುನಿಕ ನಾಟಕ ಸಾಹಿತ್ಯ : ಪೌರಾಣಿಕ ಮತ್ತು ಐತಿಹಾಸಿಕ ವಸ್ತು ಪರಿಕಲ್ಪನೆ, ಜೆರ್ರಿ ಗ್ರೊಟೋವ್ಸ್ಕಿ – ಇವು ಈ ಲೇಖನಗಳು.

ಮೊದಲನೆಯ ಲೇಖನ 'ಭಾರತೀಯ ರಂಗಭೂಮಿ' ಸುದೀರ್ಘವಾದುದು. ಭಾರತೀಯ ಭಾಷೆ ಮತ್ತು ಸಂಸ್ಕೃತಿಗಳ ಬಹುತ್ವವನ್ನು ಗಮನಿಸುತ್ತಾ ಏಕರೂಪಿ ರಂಗಭೂಮಿ ಎಂಬುದು ಇಲ್ಲಿಲ್ಲ ಎಂದು ಹೇಳುತ್ತಾರೆ. ರಾಷ್ಟ್ರೀಯ ರಂಗಭೂಮಿ ಎಂಬ ಪರಿಕಲ್ಪನೆಯನ್ನು ಭಾರತದ ಸಂದರ್ಭದಲ್ಲಿಟ್ಟು ಸುದೀರ್ಘವಾದ ಚರ್ಚೆ ಮಾಡಿದ್ದಾರೆ.

ಎರಡನೆಯ ಲೇಖನವು 'ಕನ್ನಡ ರಂಗಸಾಹಿತ್ಯ ಮತ್ತು ಕನ್ನಡ ರಂಗಭೂಮಿ'ಯನ್ನು ಕುರಿತದ್ದು. ಇದರಲ್ಲಿ ಕನ್ನಡ ರಂಗಸಾಹಿತ್ಯವು ಬೆಳೆದು ಬಂದ ರೀತಿಯನ್ನು ವಿವೇಚಿಸಲಾಗಿದೆ.

ಮೂರನೆಯ ಪ್ರಬಂಧ 'ರಂಗಚಿಂತನೆಯ ಸಮಗ್ರನೋಟ'. ಇದರಲ್ಲಿ 1990ನೇ ವರ್ಷದ ಜೂನ್ 20ರಿಂದ 22ರವರೆಗೆ ನಡೆದ 'ಡಾ.ಗುಬ್ಬಿ ವೀರಣ್ಣ ಶತಮಾನೋತ್ಸವ ಉದ್ಘಟನಾ ಸಮಾರಂಭ'ದ ಅಂಗವಾಗಿ ನಡೆದ ರಂಗಚಿಂತನೆಗಳು ದಾಖಲಾಗಿವೆ; 'ಇಂದಿನ ವೃತ್ತಿರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿ ಇವೆರಡರಿಂದ ಹೊಸ ರಂಗಭೂಮಿಯ ಕಲ್ಪನೆ ಸಾಧ್ಯವೆ?' ಎಂಬ ಪ್ರಶ್ನೆ ಇಲ್ಲಿ ಮುಖ್ಯವಾಗಿತ್ತು. 'ಕರ್ನಾಟಕದಲ್ಲಿ ಇಂದು ವೃತ್ತಿರಂಗಭೂಮಿಗೆ ಅಸ್ತಿತ್ವದ ಸಮಸ್ಯೆ ತಲೆದೋರಿದೆ' ಎಂಬುದು ಸಹ ಅಲ್ಲಿ ಎಲ್ಲರನ್ನೂ ಕಾಡಿದ ಪ್ರಶ್ನೆಯಾಗಿತ್ತು. ಡಾ. ವಿಜಯಾ, ಡಾ. ಪಿ.ಎಸ್. ರಾಮಾನುಜಂ,

ಡಾ. ಜಿ.ಎಸ್.ಸಿದ್ಧಲಿಂಗಯ್ಯ, ಎಚ್.ಎಸ್.ಶಿವಪ್ರಕಾಶ್, ಯೋಗಾ ನರಸಿಂಹ, ಚಂದ್ರಶೇಖರ ಕಂಬಾರ, ಬಸವಲಿಂಗಯ್ಯ, ಯಮುನಾಮೂರ್ತಿ ಮುಂತಾದ ಅನೇಕ ಚಿಂತಕರು ತಮ್ಮ ವಿಚಾರಗಳನ್ನು ಹಂಚಿಕೊಂಡರು. ವಿಷಯದ ಸಾರ ಇದು. ಇಂದಿನ ನಾಟಕಗಳ ವೈವಿಧ್ಯ ಗೊಂದಲ ಹುಟ್ಟಿಸುವಷ್ಟಿದೆ. "ಶುದ್ಧ ಪೌರಾಣಿಕ, ಐತಿಹಾಸಿಕ ನಾಟಕಗಳ ಜೊತೆಗೆ ಆಧುನಿಕ ಸಂದರ್ಭದಲ್ಲಿ ಹೊಸ ಅರ್ಥ ಧ್ವನಿಯಿಸುವ ನಾಟಕಗಳು, ವೈನೋದಿಕ ಅಥವಾ ದುರಂತ ಎಂದು ಸಾಂಪ್ರದಾಯಿಕ ಅರ್ಥದಲ್ಲಿ ವಿಂಗಡಿಸಲಾಗದ ನಾಟಕಗಳು, ತಾಂತ್ರಿಕವಾಗಿ ಹೆಚ್ಚು ಸಾಂಪ್ರದಾಯಿಕವಾದ ನಾಟಕಗಳು, ಬ್ರೆಕ್ಟ್ ಮಾದರಿಯ ಎಪಿಕ್ ರಂಗಭೂಮಿ, ಪಿಂಟರ್‌ನ ಮಾದರಿಯ ಪ್ರತಿಭಟನಾ ರಂಗಭೂಮಿ, ಅಸಂಗತ ನಾಟಕಗಳು, ಸಾಮಾಜಿಕ, ರಾಜಕೀಯ ಪ್ರಜ್ಞೆಯ ನಾಟಕಗಳು ಇತ್ಯಾದಿ – ಹೀಗಾಗಿ ಇಲ್ಲಿ ಸೆಲೆಕ್ಟೆಡ್ ರಿಯಲಿಸಂ, ಸರ್‍ರಿಯಲಿಸಂ, ಸಿಂಬಲಿಸಂ, ಅಬ್ಸರ್ಡ್, ಫಂಕ್ಷನಲ್, ಎನ್ವಿರನ್‌ಮೆಂಟಲ್ ಮುಂತಾಗಿ ಹತ್ತು ಹಲವು ಪಂಥಗಳು, ಯುರೋಪಿನಲ್ಲಿ ಇಲ್ಯೂಷನ್ ಆಫ್ ರಿಯಾಲಿಟಿಗೆ ಪ್ರತಿಕ್ರಿಯಾತ್ಮಕವಾಗಿ ಹುಟ್ಟಿಕೊಂಡುವೆಲ್ಲಾ ಅಂತಹ ಸಂದರ್ಭ ಪರಿಸರ ಇಲ್ಲದೆಯೂ ಪ್ರಯೋಗವಾಗುತ್ತಿವೆ". ಈ ಎಲ್ಲ ಗೊಂದಲಗಳಿರುವಾಗ "ನಾಳಿನ ರಂಗಭೂಮಿಯ ಸ್ಪಷ್ಟ ಚಿತ್ರ ಈ ವಿಚಾರವಿನಿಮಯ, ಚರ್ಚೆಗಳಿಂದ ಮೂಡಲಿಲ್ಲ ಎಂದು ಹೇಳಬೇಕಾಗುತ್ತದೆ". ಹೀಗೆ ರಂಗಚಿಂತನೆಯ ಸಮಗ್ರನೋಟದ ಸಂದರ್ಭವನ್ನಿಟ್ಟುಕೊಂಡು ಇಂದಿನ ರಂಗಭೂಮಿಯ ಸನ್ನಿವೇಶವನ್ನು ವಸ್ತುನಿಷ್ಠವಾಗಿ ಚರ್ಚಿಸಿದ್ದಾರೆ ಎನ್ನಬಹುದು.

ಮುಂದಿನ ಪ್ರಬಂಧದಲ್ಲಿ 'ಆಧುನಿಕ ಕನ್ನಡ ನಾಟಕ ಸಾಹಿತ್ಯದಲ್ಲಿ ಪೌರಾಣಿಕ ಮತ್ತು ಐತಿಹಾಸಿಕ ವಸ್ತು ಪರಿಕಲ್ಪನೆ'ಯನ್ನು ಕುರಿತು ಚರ್ಚಿಸಲಾಗಿದೆ.

ಐದನೆಯ ಲೇಖನ ಜೆರ್ರಿ ಗ್ರೊಟೊವಸ್ಕಿಯನ್ನು ಕುರಿತದ್ದು. ಈತ ಪೋಲೆಂಡ್‌ನ ಒಬ್ಬ ಪ್ರತಿಭಾವಂತ ರಂಗಕರ್ಮಿ. 1933 ಮತ್ತು 1999ರ ಮಧ್ಯೆ ಜೀವಿಸಿದ್ದ ವ್ಯಕ್ತಿ ಇವನು. 'ಐವತ್ತರ ದಶಕದ ನಂತರ ವಿಶ್ವದ ಗಮನ ಸೆಳೆದ ವ್ಯಕ್ತಿಯೆಂದರೆ ಪೋಲಿಷ್ ನಿರ್ದೇಶಕ, ಅಧ್ಯಾಪಕ, ರಂಗಶಾಸ್ತ್ರಜ್ಞ ಜೆರ್ರಿ ಗ್ರೊಟೊವಸ್ಕಿ'.

ಈತನು ತಾನು ನಡೆಸಿದ ಪ್ರಯೋಗಗಳಲ್ಲಿ ನಟನನ್ನು ರಂಗಭೂಮಿಯ ಕೇಂದ್ರದಲ್ಲಿ ಪ್ರತಿಷ್ಠಾಪಿಸಿದ. ಇವನು ಹೋಲಿ ಆಕ್ಟರ್, ರಿಕ್ತ ರಂಗಭೂಮಿ ಮತ್ತು ಪರಾ ರಂಗಭೂಮಿ ಎಂಬ ವಿಶಿಷ್ಟ ಪರಿಕಲ್ಪನೆಗಳನ್ನು ಕೊಟ್ಟಿದ್ದಾನೆ. 'ಇವನಿಗೆ ಸಾಹಿತ್ಯದ ಹಿಡಿತದಿಂದ ಮುಕ್ತವಾದ ಸ್ವಾಯತ್ತ ರಂಗಭೂಮಿಯ ಬಗ್ಗೆ ಆಸಕ್ತಿ'. ಇರುವ ಎಲ್ಲಾ ಕಲೆಗಳನ್ನೂ ಸೇರಿಸಿಕೊಂಡು ಗೋಜಲು ಗೋಜಲಾಗಿದೆ ಎಂದು ತನಗೆ ಕಂಡ ರಂಗಭೂಮಿಯನ್ನು, ಯಾವೆಲ್ಲದರಿಂದ ಬಿಡುಗಡೆಗೊಳಿಸಬಹುದು ಎಂದು ಇವನು ಯೋಚಿಸಿದ.

ಗ್ರೊಟೋವ್‌ಸ್ಕಿ ಕಟ್ಟಿಕೊಟ್ಟ ಒಂದು ಸ್ವಾರಸ್ಯಕರ ಪರಿಕಲ್ಪನೆ ಎಂದರೆ 'ಅತೀತ ರಂಗಭೂಮಿ'ಯದು. ಪ್ರದರ್ಶನಕಾರರು ಮತ್ತು ಪ್ರೇಕ್ಷಕರ ನಡುವಿನ ಸೀಮಾರೇಖೆ ಅಳಿಯುವ ಅಳಿಯುವ ರಂಗಭೂಮಿಯ ಸನ್ನಿವೇಶ ಇದು. ಇದರ ಅಂತಿಮ ಉದ್ದೇಶ 'ನಟರು ಮತ್ತು ಪ್ರೇಕ್ಷಕರು ಧಾರ್ಮಿಕ ಅನುಭವಕ್ಕೆ ಸಮನಾದ ಅನುಭವದಲ್ಲಿ ಭಾಗಿಯಾಗುವುದು". ಮುಂದೆ ಗ್ರೊಟೋವ್‌ಸ್ಕಿ 'ರಂಗಭೂಮಿ ಪರಿಕಲ್ಪನೆ'ಯನ್ನೇ ವಿಸರ್ಜಿಸಲು ಮುಂದುವರಿಯುತ್ತಾನೆ. ಈಗಲೂ ಪ್ರಪಂಚದಾದ್ಯಂತ ಬೇರೆ ಬೇರೆ ಕಡೆ ಅತೀತ ರಂಗಭೂಮಿಯ ಶೋಧ, ಬೋಧನೆ ಮುಂದುವರಿಯುತ್ತಿವೆ.

"1975ರ ನಂತರ ಗ್ರೊಟೋವ್‌ಸ್ಕಿಯ ಆಸಕ್ತಿ ಹೊಸ ಸಂಶೋಧನೆ ಕಡೆಗೆ ಹರಿಯಿತು. ಆತ ಜಪಾನ್, ಭಾರತ, ಹಾಯಿತಿ, ಮೆಕ್ಸಿಕೊ, ಆಫ್ರಿಕಾ ಮತ್ತಿತರ ಪ್ರದೇಶಗಳ ವಿಧಿಯಾಚರಣೆ ಪ್ರದರ್ಶನಗಳನ್ನು ಅಧ್ಯಯನ ಮಾಡಿದ. ಅಲ್ಲಿನ ಅನುಭವಗಳನ್ನು ಹಿಂದೆ ತಾನು ಮಾಡಿದ ಕಾರ್ಯಗಳನ್ನು ಉತ್ತಮಪಡಿಸಲು ಸಂಸ್ಕಾರಗೊಳಿಸಲು ಬಳಸಿದ. ವಿಧಿಯಾಚರಣೆಯ ಬಹುಮುಖಿ ಸಂಸ್ಕೃತಿಯ ಪರಿಶೋಧನೆ. ಈ ಹೊಸ ಮಜಲನ್ನು 'ಮೂಲ ರಂಗಭೂಮಿ' ಎಂದು ಕರೆದ.

ರಂಗಭೂಮಿಯನ್ನು ಕುರಿತು ಆಸಕ್ತಿಯುಳ್ಳವರು ಅವಶ್ಯವಾಗಿ ಕುರಿತೋದಲೇಬೇಕಾದ ವ್ಯಕ್ತಿ ಗ್ರೊಟೋವ್‌ಸ್ಕಿ.

***

ಈ ಕೃತಿಯ ಎರಡನೇ ಭಾಗದಲ್ಲಿ ಎರಡು ಭಾಗಗಳಿವೆ. 'ರಂಗಭೂಮಿ ಮತ್ತು ಸೌಂದರ್ಯಪ್ರಜ್ಞೆ'ಯನ್ನು ಕುರಿತ ಲೇಖನಗಳು ಮೊದಲನೆಯ

ಭಾಗದಲ್ಲಿದ್ದರೆ, ಕರುಳಿನಲ್ಲಿರುವ ಮೆದುಳಿನ ಬಗೆಗಿನ ('ಕಣ್ಣರಿಯದೊಡೇಂ ಕರುಳರಿಯದೇ') ಲೇಖನ ಎರಡನೆಯ ಭಾಗದಲ್ಲಿದೆ.

ಇಲ್ಲಿ ಮೊದಲನೆಯ ಅಧ್ಯಾಯವು ಸೌಂದರ್ಯಾನುಭವವನ್ನು ಕುರಿತು ಬರೆಯಲ್ಪಟ್ಟದ್ದು. ಸೌಂದರ್ಯ ಎಂದರೆ ಏನು ಎಂಬ ಪ್ರಶ್ನೆಯನ್ನು ಎತ್ತಿಕೊಂಡು ಸೌಂದರ್ಯದ ಬಗೆಗಿನ ಮೂಲ ವಿಚಾರಗಳು, ವ್ಯಾಖ್ಯಾನಗಳನ್ನು ಚರ್ಚಿಸಲಾಗಿದೆ. ಮೋಹಕವಾಗಿರುವುದು ಸುಂದರ, ನಿಶ್ಚಿತ ಆಕಾರವನ್ನು ಹೊಂದಿದ್ದರೆ ಸುಂದರ, ಪ್ರಕೃತಿಯ ಅನುಕರಣೆಯಾಗಿದ್ದರೆ ಸುಂದರ, ಮಾಧ್ಯಮದ ಬಳಸುವಿಕೆಯಿಂದ ಸೃಷ್ಟಿಯಾಗಿದ್ದರೆ ಸುಂದರ, ಸತ್ಯವನ್ನೂ ಪ್ರಕೃತಿಯ ಆತ್ಮವನ್ನೂ ಆದರ್ಶವನ್ನೂ ಸಾರ್ವತ್ರಿಕತೆಯನ್ನೂ ಸೂಚಿಸುವುದು ಸುಂದರ, ಭ್ರಾಂತಿಯನ್ನುಂಟು ಮಾಡುವ ಹಾಗಿದ್ದರೆ ಅದು ಸುಂದರ, ಉತ್ತಮ ಸಾಮಾಜಿಕ ಫಲಗಳನ್ನು ಕೊಡುವಂತಹುದು ಸುಂದರವಾದುದು, ಒಂದು ಭಾವನೆಯನ್ನು ವ್ಯಕ್ತಗೊಳಿಸುವ ಹಾಗಿದ್ದರೆ ಅದು ಸುಂದರ, ಸೌಂದರ್ಯ ಎಂಬುದು ಆನಂದದಾಯಕ, ಒಂದು ನಿಶ್ಚಿತ ಭಾವಕ್ಕೆ ಉತ್ತೇಜನಕಾರಿಯಾಗಿದ್ದರೆ ಅದು ಸುಂದರ, ತಲ್ಲೀನತೆಯುಂಟುಮಾಡುವ ಹಾಗಿದ್ದರೆ ಅದು ಸುಂದರ...... ಹೀಗೆ ಅನೇಕ ವ್ಯಾಖ್ಯೆಗಳು. ಕೃಷ್ಣಯ್ಯನವರು ಹೇಳುವಂತೆ, "'ಸೌಂದರ್ಯ ಎನ್ನುವುದು ಅನಿರ್ವಚನೀಯವಾದ ಥಳಥಳಿಸಿ ಸುಳಿದಾಡುವ ಒಂದು ನೆರಳು. ಅಂತಹ ಅಸ್ಪಷ್ಟ ನೆರಳಿನ ಮೇರೆಯನ್ನು ನಿಶ್ಚಯಿಸಲು ಯಾವ ನಿರೂಪಣೆಯಿಂದಲೂ ಸಾಧ್ಯವಿಲ್ಲ' ಎಂದು ಗಯಟೆ ಹೇಳಿದ ಮಾತು ಇಂದಿಗೂ ಅರ್ಥಪೂರ್ಣವಾಗಿಯೇ ಇದೆ".

ಸೌಂದರ್ಯಮೀಮಾಂಸೆಯಲ್ಲಿ ಕೇಳಲಾಗುವ ಇನ್ನೊಂದು ಪ್ರಶ್ನೆ ಅಂದರೆ, ಸೌಂದರ್ಯ ವಸ್ತುನಿಷ್ಠವೋ ವ್ಯಕ್ತಿನಿಷ್ಠವೋ ಎಂಬುದು. ಬಹಳ ಚರ್ಚೆಯ ನಂತರ 'ಸೌಂದರ್ಯ ಕೇವಲ ವಸ್ತುವಿನಲ್ಲೇ ಇಲ್ಲ, ಅಥವಾ ಕೇವಲ ಮನಸ್ಸಿನಲ್ಲೇ ಇಲ್ಲ. ಸೌಂದರ್ಯಾನುಭವವಾಗಲು ವಸ್ತು ಮತ್ತು ಮನಸ್ಸು ಎರಡೂ ಅಗತ್ಯ. ಈ ದೃಷ್ಟಿಯಿಂದ ವಸ್ತುನಿಷ್ಠ ಅಥವಾ ಮನೋನಿಷ್ಠ ಎಂಬ ಶಬ್ದ ಅರ್ಧಸತ್ಯ ಮಾತ್ರ. ಇವೆರಡೂ ಪರಸ್ಪರ ಪೂರಕವಾದಾಗಲೇ ಸಂಪೂರ್ಣ. ಆಗ ಸೌಂದರ್ಯಾನುಭವ ಸಾಧ್ಯ' ಎಂಬ ತೀರ್ಮಾನಕ್ಕೆ ಬರಲಾಗಿದೆ.

ಮುಂದಿನ ಲೇಖನ 'ಕಲೆ ಮತ್ತು ಸೌಂದರ್ಯ' ಎಂಬ ಶೀರ್ಷಿಕೆಯನ್ನುಳ್ಳದ್ದು. ಇದರಲ್ಲಿ ಕುಶಲಕಲೆ – ಶುದ್ಧಕಲೆ, ಕಲೆಗೂ

ಸೌಂದರ್ಯಕ್ಕೂ ಇರುವ ಸಂಬಂಧ, ಅರವಿಂದರ ಪರಿಕಲ್ಪನೆಯಾದ ಚತುರ್ಮುಖ ಸೌಂದರ್ಯ(ಕಲೆಗೆ ಸಂಬಂಧಿಸಿದಂತೆ), ಸತ್ಯಂ, ಶಿವಂ, ಸುಂದರಂ ಕಲ್ಪನೆ – ಇವುಗಳನ್ನು ಚರ್ಚಿಸಲಾಗಿದೆ.

ಮೂರನೆಯ ಲೇಖನ 'ಅನುಕರಣದಿಂದ ಅಭಿವ್ಯಕ್ತಿಯವರೆಗೆ'. ಇದರಲ್ಲಿ ಅನುಕರಣ ಸಿದ್ಧಾಂತ, ವಾಸ್ತವತಾವಾದ ಸಿದ್ಧಾಂತ, ಸ್ಪಿನೋಜ, ಕ್ಯಾಂಟ್, ಫ್ರೆಡರಿಕ್ ಷಿಲರ್, ಹೆಗೆಲ್, ಷೋಪೆನ್ ಹಾರ್, ಷ್ಲೀಯೆರ್ ಮಾಷರ್, ಕ್ರೋಚೆ ಮುಂತಾದವರ ಕಲಾವಿಷಯಕ ಸಿದ್ಧಾಂತಗಳನ್ನು ಚರ್ಚಿಸಲಾಗಿದೆ.

'ರೂಪಕ ಜಗತ್ತು' ಎಂಬ ಲೇಖನದಲ್ಲಿ ನಾಟಕದಲ್ಲಿರುವ ರೂಪಕ ಜಗತ್ತನ್ನು ಕುರಿತು ಚಿಂತನೆ ಮಾಡಲಾಗಿದೆ. ಎಸ್.ಡಬ್ಲ್ಯೂ.ಡಾಸನ್ ಎಂಬ ಚಿಂತಕನ ವಿಚಾರಗಳನ್ನು ಇಲ್ಲಿ ಕೃಷ್ಣಯ್ಯನವರು ವಿವರಿಸುತ್ತಾರೆ.

"ಕಾವ್ಯದಲ್ಲಿ ರೂಪಕಾಲಂಕಾರ ಬರುತ್ತದೆ. ನಾಟಕದಲ್ಲೂ ಅದಕ್ಕೆ ಸಮಾನವಾದ ರೂಪಕಾಲಂಕಾರವಿಲ್ಲವೇ ಎಂಬುದು ಪ್ರಶ್ನೆ. ನಾವು 'ಎ' ಎಂಬ ಪಾತ್ರ ಮಾತನಾಡುವುದನ್ನು ಕೇಳುತ್ತೇವೆ, ನೋಡುತ್ತೇವೆ. 'ಬಿ' ಪಾತ್ರದ ಮಾತನ್ನೂ ಗಮನಿಸುತ್ತೇವೆ. ಅವರಿಬ್ಬರ ಮಾತುಕತೆಯ ಪರಿಣಾಮವಾಗಿ ನಾವು ಊಹಿಸುವುದು ಗ್ರಹಿಸುವುದು ಬೇರೊಂದೇ ಅರ್ಥವನ್ನು, ಮೂರನೆಯದನ್ನು. ಎರಡು ಪಾತ್ರಗಳ ಮೂಲಕ, ಅವರ ಮಾತುಗಳನ್ನು ಬೆಸೆದು ನಾಟಕಕಾರ ಏನನ್ನೋ ಹೇಳುತ್ತಿದ್ದಾನೆ. ಸಂಗೀತದ ಸಾಂಗತ್ಯದಲ್ಲಿನ ಸ್ವರಗಳಂತೆ. ಸ್ವರಮೇಳದ ಮೂಲಕ ಸಾಂಗತ್ಯಾನುಭವ.

ಕೃಷ್ಣಯ್ಯನವರು ಗಮನಿಸುವಂತೆ ರೂಪಕ ಜಗತ್ತು ಎಂಬುದು ಕಾವ್ಯ, ನಾಟಕಗಳಿಗೆ ಮಾತ್ರವಲ್ಲ, ಸಂಗೀತಕ್ಕೂ ಅಮೂರ್ತವಾಗಿಯೂ ಅನ್ವಯವಾಗುತ್ತದೆ.

ನಾಟಕದ ಜಗತ್ತು ಹೇಗೆ ರೂಪಕದ ಜಗತ್ತು ಎಂಬುದನ್ನು ಕೃಷ್ಣಯ್ಯನವರು ಇನ್ನಷ್ಟು ಸ್ವಾರಸ್ಯಕರವಾಗಿ ವಿವರಿಸುತ್ತಾರೆ. ..... "ಪ್ರದರ್ಶಿತ ನಾಟಕ ಪ್ರೇಕ್ಷಕರಾದ ನಮಗೂ ಹೊರಜಗತ್ತಿಗೂ ಸೇತುವೆಯಾಗಿ ಕಲಾತ್ಮಕ ಸಂಬಂಧವನ್ನು ಬೆಸೆಯುತ್ತದೆ. ಆದ್ದರಿಂದ ನಾಟಕ ಜಗತ್ತು ರೂಪಕ ಜಗತ್ತು. 'ರೂಪಕ' ಶಬ್ದವೇ ನಾಟಕವನ್ನು ಕುರಿತದ್ದು. ಆ ಸಂಬಂಧವನ್ನು ಸೂಚಿಸುತ್ತದೆ. ಕೇವಲ ಅಲಂಕಾರವನ್ನಲ್ಲ. ನಾಟಕದಲ್ಲಿನ ಇಂತಹ ಸಮಾನಾಂತರ ಬೆಸುಗೆಯ

ಅನುಭವವನ್ನು ವಿವರಿಸಲು ಶಂಕುಕನು ರಸಾನುಭವ ವಿವರಣೆ ಸಂದರ್ಭದಲ್ಲಿ ನೀಡುವ 'ಚಿತ್ರತುರಗ ನ್ಯಾಯ'ವನ್ನು ನೆನಪು ಮಾಡಿಕೊಳ್ಳಬಹುದು....ಇದೇ ಸಂಬಂಧ ನಾಟಕದಲ್ಲಿನ ಪಾತ್ರಕ್ಕೂ ನಟನಿಗೂ ಇರುವುದು. ಹಾಗೇ ನಾಟಕಕ್ಕೂ ಹೊರಜಗತ್ತಿಗೂ ಇರುವುದು. ಪ್ರದರ್ಶಿತ ನಾಟಕ ಹೊರಜಗತ್ತಿನ ಅಂದರೆ ಜೀವನದ ಸಂಬಂಧವನ್ನು ರೂಪಕದಂತೆ ಅನಭವಕ್ಕೆ ತರುತ್ತದೆ". ಕೃಷ್ಣಯ್ಯನವರ ಈ ವಿಚಾರಗಳು ನಾಟಕದ ಸೌಂದರ್ಯ ಮೀಮಾಂಸೆಗೆ ಸಂಬಂಧಿಸಿವೆ.

ಮುಂದಿನ ಲೇಖನ 'ಸಂರಚನೆ ಮತ್ತು ರೂಪ'. ಇದರಲ್ಲಿ ಲೇಖಕರು ಒಂದು ಕುತೂಹಲಕರ ಪ್ರಶ್ನೆಯನ್ನು ಕೇಳುತ್ತಾರೆ. ಉತ್ತರವನ್ನೂ ಕೊಡುತ್ತಾರೆ. "ಕಲೆಗೆ ಸಂಬಂಧಿಸಿದ ಒಂದು ಗುಣ, ಅಗತ್ಯ ಅನಿವಾರ್ಯ ಗುಣ, ಅದಿಲ್ಲದೆ ಕಲೆಗೆ ಅಸ್ತಿತ್ವವಿಲ್ಲ ಎನ್ನುವಂತಹ ಗುಣ ಯಾವುದಾದರೂ ಇದೆಯೆ? ಯಾವ ಗುಣ ಎಲ್ಲ ವಸ್ತುಗಳಿಗೂ ಸಮಾನವಾಗಿದ್ದು ನಮ್ಮಲ್ಲಿ ಭಾವೋದ್ದೀಪನಕ್ಕೆ ಕಾರಣವಾಗುತ್ತದೆ? ಅಜಂತಾದ ಭಿತ್ತಿಚಿತ್ರಗಳು, ಚಾಲುಕ್ಯ ವಾಸ್ತು ಮತ್ತು ಶಿಲ್ಪಗಳು, ಹೊಯ್ಸಳ ಮದನಿಕಾ ವಿಗ್ರಹಗಳು, ಕೆ.ಕೆ.ಹೆಬ್ಬಾರರ ಚಿತ್ರಗಳು, ವೆಂಕಟಪ್ಪನವರ ಉಬ್ಬು ಶಿಲ್ಪ ಫಲಕಗಳು– ಇವುಗಳಿಗೆಲ್ಲಾ ಸಮಾನವಾದ ಗುಣ ಯಾವುದು? ರೂಪ. (ಕಲೆಯಲ್ಲಿ ರೂಪ ಅಂದರೆ ಹೊರ ಆಕಾರವಲ್ಲ. ಭಾವನೆಗಳು ಸಂಘಟಿತವಾಗಿ ನಮ್ಮನ್ನು ಒಂದು ವಿಶಿಷ್ಟ ಅನುಭವದ ಸ್ಥಿತಿಗೆ ತರುವ ವಿಧಾನಕ್ಕೆ ರೂಪ ಎನ್ನುವುದು...ವೈವಿಧ್ಯವನ್ನು ಒಂದುಗೂಡಿಸುವ ನಿಯಮವೇ ರೂಪ.) ಸುಸಾನ್ ಕೆ. ಲ್ಯಾಂಗರ್ 'ಅರ್ಥವತ್ತಾದ ರೂಪ' ಶಬ್ದ ಬಳಸುತ್ತಾರೆ.....ಎಲ್ಲ ದೃಶ್ಯ ಕಲೆಗಳಿಗೂ ಸಮಾನವಾದ ಅಂಶವೆಂದರೆ ಈ ಅರ್ಥವತ್ತಾದ ರೂಪವೆ. ನಾಟಕವು ಪ್ರದರ್ಶನ ಕಲೆಯಾದರೂ ಅದಕ್ಕೂ ಅನ್ವಯಿಸುತ್ತದೆ. ಸಂಗೀತದ ಒಂದು ರಚನೆಗೂ ಅನ್ವಯವಾಗುತ್ತದೆ. ಕ್ರೋಚೆ ಅಭಿವ್ಯಕ್ತಿಗೆ ಸಂಬಂಧಿಸಿದಂತೆ ಹೇಳುವಲ್ಲಿ ಒಂದು ಕಲಾಕೃತಿಯ ಅಭಿವ್ಯಕ್ತಿ ಅದರ ರೂಪದ ಅವಿಭಾಜ್ಯ ಭಾಗ ಎಂದನು. ಅಂದರೆ ಅಭಿವ್ಯಕ್ತಿಗೆ ಅನುಗುಣವಾಗಿ ರೂಪ ಮೈ ಪಡೆಯುತ್ತದೆ".

ಪ್ರತಿಭೆ, ಸಾಧಾರಣೀಕರಣ ಮತ್ತು ಕಲಾನುಭವಗಳನ್ನು ಕುರಿತು ಲೇಖನಗಳಿವೆ.

ಇನ್ನೊಂದು ಅಪರೂಪದ ಲೇಖನವೆಂದರೆ "ಸಂಜ್ಞಾಶಾಸ್ತ್ರ ಮತ್ತು ರಂಗಭೂಮಿ". "ಸಂಭಾಷಣೆ, ರಂಗಸಜ್ಜಿಕೆ, ಅಂಗಸನ್ನೆ (ಗೆಶ್ಚರ್ಸ್), ಉಡುಪು

ವಸ್ತ್ರಾಲಂಕಾರ, ಪ್ರಸಾಧನ, ನಟನ ಶಾರೀರ, ಮತ್ತು ಇಂತಹ ಬಹುಸಂಖ್ಯೆಯ ಅಂಶಗಳು ತಮ್ಮ ತಮ್ಮ ರೀತಿಯಿಂದಲೆ ನಾಟಕ ಪ್ರದರ್ಶನದಲ್ಲಿ ಅರ್ಥಸೃಷ್ಟಿಗೆ ಕಾರಣವಾಗುತ್ತವೆ. ಪ್ರತಿಯೊಂದು ಅಂಶವನ್ನೂ, ಒಟ್ಟು ದೃಶ್ಯದ ಅವಿಭಾಜ್ಯ ಭಾಗದ ಒಂದು ಸಂಜ್ಞೆ ಅನ್ನಬಹುದು(ಸೈನ್). ಘಟನೆ, ಕ್ರಿಯೆಗಳ ಭಾಗವಾದ ಸಂಜ್ಞೆ ಎನ್ನಬಹುದು. (ಸಂಜ್ಞೆ ಎಂದರೇನು? ಎಂಬ ಬಗ್ಗೆ ಸರಳವಾದ ವಿವರಣೆ ಇದೆ. ಸಂಜ್ಞೆ ಯಾವುದೇ ಒಂದು ವಸ್ತು, ಅರ್ಥ, ಕಲ್ಪನೆಗೆ ಬದಲಿಯಾಗಿ ನಿಲ್ಲುವಂಥದು, ಇರುವಂಥದು. 'ಎನಿಥಿಂಗ್ ವ್ಹಿಚ್ ಸ್ಟ್ಯಾಂಡ್ಸ್ ಫಾರ್ ಸಮ್‌ಥಿಂಗ್'.)

ಈ ಅಪರೂಪದ ಲೇಖನದಲ್ಲಿ ಕೃಷ್ಣಯ್ಯನವರು ನಾಟಕವನ್ನು ಅರ್ಥಮಾಡಿಕೊಳ್ಳಲು ಸಂಜ್ಞಾಶಾಸ್ತ್ರದಿಂದ ಉಪಯುಕ್ತ ಮಾಹಿತಿ ಒದಗುತ್ತದೆ ಎಂದು ಹೇಳುತ್ತಾ, ನಾಟಕದಲ್ಲಿ ಹದಿಮೂರು ಬಗೆಯ ಸಂಜ್ಞಾವ್ಯವಸ್ಥೆಗಳು ಉದ್ಯುಕ್ತವಾಗಿರುವುದನ್ನು ಗುರುತಿಸುತ್ತಾರೆ. ಇದರಲ್ಲಿ ಪದ, ಶಬ್ದ, ಪಠ್ಯ ಪಠನ, ಮುಖಭಾವ, ಅಂಗಸನ್ನೆ. ಪ್ರಸಾಧನ, ಕೇಶಾಲಂಕಾರ, ರಂಗಸಜ್ಜಿಕೆ, ಉಡುಪು, ಬೆಳಕು, ಸಂಗೀತ..... ಮುಂತಾದ ಎಲ್ಲವೂ ಸೇರುತ್ತವೆ. ನಾಟಕವನ್ನು ಪರಿಣಾಮಕಾರಿಯಾಗಿಸುವುದರಲ್ಲಿ ಈ ಅರಿವು ಸಹಾಯಕವಾಗಿದೆ.

ರಂಗಾಸಕ್ತರು ಓದಲೇಬೇಕಾದ ಲೇಖನ ಇದು.

ಈ ಗ್ರಂಥದ ಕೊನೆಯ ಲೇಖನ ಕುತೂಹಲಕಾರಿಯಾದುದು. ಇದು 'ಕಣ್ಣರಿಯದೊಡೇಂ ಕರುಳರಿಯದೇ' ಎಂಬ ಶೀರ್ಷಿಕೆ ಹೊಂದಿದೆ. ಸಾಮಾನ್ಯವಾಗಿ ನಾವು ಗಾದೆಮಾತಿನಂತೆ ಬಳಸುವ ಈ ಮಾತು (ಆಂಗ್ಲ ಭಾಷೆಯ 'ಗಟ್ ಫೀಲಿಂಗ್ಸ್' ಎಂಬ ನುಡಿಗಟ್ಟನ್ನು ನೆನಪಿಸುವ ಗಾದೆಮಾತಿದು) ಜನ್ನನ ಯಶೋಧರ ಚರಿತೆಯಲ್ಲಿ ಪ್ರಸ್ತಾಪವಾದದ್ದನ್ನು ಲೇಖಕರು ಪ್ರಸ್ತಾಪಿಸುತ್ತಾ, ನಾವು ಈವರೆಗೆ ಇದನ್ನು ರೂಪಕಾತ್ಮಕವಾಗಿಯೇ ಅರ್ಥ ಮಾಡಿಕೊಳ್ಳುತ್ತಾ ಬಂದಿದ್ದೇವೆ, ಆದರೆ ಇತ್ತೀಚಿನ ಸಂಶೋಧನೆಗಳು ಬೇರೆಯದನ್ನೇ ಹೇಳುತ್ತವೆ ಎಂಬ ವಿಷಯದ ಕಡೆಗೆ ನಮ್ಮ ಗಮನ ಸೆಳೆದಿದ್ದಾರೆ. ರಿಚರ್ಡ್ ಷೆಷ್ನರ್ ಎಂಬ ವಿದ್ವಾಂಸನು ಕರುಳು ಮತ್ತು ಭಾವಗಳ ಸಂಬಂಧಕ್ಕೆ ವಿಭಿನ್ನವಾದ ಆಯಾಮವನ್ನು ನೀಡಿರುವುದನ್ನು ಪರಿಚಯಿಸಿದ್ದಾರೆ. ನೋಟಕ್ಕೂ ಆಸ್ವಾದನೆಗೂ ಇರುವ ಸೂಕ್ಷ್ಮ ವ್ಯತ್ಯಾಸ, ಕರುಳಿಗೂ ಭಾವಕ್ಕೂ ಇರುವ ಸಂಬಂಧ, ಶಬ್ದಶಃ ಹೊಟ್ಟೆಯಲ್ಲಿ ಕರುಳಿರುವುದು, ಕರುಳಿನ

ಮೆದುಳನ್ನು 'ಎಂಟೆರಿಕ್ ನರ್ವೆಸ್ ಸಿಸ್ಟಮ್' ಎಂದು ಕರೆಯುವುದು ಈ ಮುಂತಾದ ಅಪರೂಪದ ವಿವರಗಳನ್ನು ಇಲ್ಲಿ ನೀಡಲಾಗಿದೆ.

## ಆಲೋಕನ

'ಆಲೋಕನ' ಕೃತಿಯು 2006ರಲ್ಲಿ ಪ್ರಕಟಗೊಂಡ ಪ್ರಬಂಧ ಸಂಕಲನ. ಇದರಲ್ಲಿ ಸಾಹಿತ್ಯ ಮತ್ತು ಕಲಾ ವಿಷಯಗಳನ್ನು ಕುರಿತ ಪ್ರಬಂಧಗಳಿವೆ.

ಕೃಷ್ಣಯ್ಯನವರು ಎಷ್ಟು ತಾಳ್ಮೆ, ಅಧ್ಯಯನದ ವಿಸ್ತಾರ ಮತ್ತು ಆಸಕ್ತಿಗಳಿಂದ ವಿಷಯಗಳನ್ನು ಆಲೋಕಿಸುತ್ತಾರೆ ಎಂಬುದಕ್ಕೆ ಈ ಸಂಕಲನದ ಮೊದಲನೆಯ ಲೇಖನವು ಉದಾಹರಣೆಯಾಗಿದೆ. ವಿ. ಸೀತಾರಾಮಯ್ಯನವರ ಸಾಹಿತ್ಯಾಲೋಕನವು ಈ ಪ್ರಬಂಧದ ವಸ್ತು. 41 ಪುಟಗಳ ಸುದೀರ್ಘ ಲೇಖನವಿದು. ಈ ಲೇಖನದ ಮೊದಲ ಇಪ್ಪತ್ತೊಂಬತ್ತು ಪುಟಗಳು ಕನ್ನಡದಲ್ಲಿ ಸಾಹಿತ್ಯಾಲೋಕನವು (ಬುಕ್ ರೆವ್ಯೂ)ಬೆಳೆದುಬಂದ ಬಗೆ ಮತ್ತು ಈ ಬರವಣಿಗೆಯ ಚರಿತ್ರೆಯನ್ನು ಗಮನಿಸಿದೆ. ಈ ಭಾಗ 26 ಪುಟಗಳಷ್ಟು ದೀರ್ಘವಾಗಿದೆ. ''ವಿಮರ್ಶಾ ಲೇಖನಕ್ಕಿಂತ ಪುಸ್ತಕ ವಿಮರ್ಶೆ ವಿಭಿನ್ನ ಎಂದು 'ಆಲೋಕ', 'ಆಲೋಕನ', 'ಅವಲೋಕನ' ಶಬ್ದಗಳ ಬಳಕೆ ರೂಢಿಗೆ ಬಂದಂತೆ ತೋರುತ್ತದೆ. ಆಲೋಕನ, ಅವಲೋಕನವೆಂದರೆ ನೋಡುವುದು, ಪರಿಭಾವಿಸುವುದು ಎಂದರ್ಥ.

'ವಿ.ಸೀ.: 'ಪಾಶ್ಚಾತ್ಯ ನಾಟಕ ವಿವೇಚನೆಗಳು', 'ಜಿ. ವೆಂಕಟಸುಬ್ಬಯ್ಯನವರ 'ಪರಾಮರ್ಶನ', ಬಿ.ಸಿ.ರಾಮಚಂದ್ರ ಅವರ ಪ್ರತಿಭಾ ಸಂದರ್ಶನ', 'ಪ್ರಭುಶಂಕರ ಅವರ ಲಹರಿ' – ಇವುಗಳನ್ನು ಕುರಿತು ಲೇಖನಗಳನ್ನು ಬರೆಯಲಾಗಿದೆ.

'ಅ.ರಾ.ಮಿತ್ರ ಅವರ ಸಮಗ್ರ ಲಲಿತಪ್ರಬಂಧಗಳು' ಲೇಖನದಲ್ಲಿ 'ಒಂದೊಂದೂ ಕೈಯೊಳಗಿನ ಸಿಂಧುವಾದ' ಒಟ್ಟು ಎಪ್ಪತ್ತೊಂಬತ್ತು ಪ್ರಬಂಧಗಳಿವೆ ಎಂದು ಕೃಷ್ಣಯ್ಯನವರು ಹೇಳುತ್ತಾರೆ. ಪ್ರಬಂಧಕಲೆಯು ಬೆಳೆದುಬಂದ ಮತ್ತು ಜೀವನಕ್ಕೂ ಪ್ರಬಂಧಕ್ಕೂ ಇರುವ ಸಂಬಂಧವನ್ನು ಕುರಿತು ಪಕ್ಷಿನೋಟ ಬೀರಿದ ನಂತರ ಮಿತ್ರ ಅವರ ಪ್ರಬಂಧಲೋಕಕ್ಕೆ ಪ್ರವೇಶಿಸುತ್ತಾರೆ.

'ಮಿತ್ರ ಅವರು ಕೇವಲ ಪ್ರಬಂಧಕಾರರು ಮಾತ್ರವಲ್ಲ, ಅವರ ವಿದ್ವತ್ತಿನ ನೆಲಹಾಸು ವಿಸ್ತಾರವಾದದ್ದು'. ಮಿತ್ರ ಅವರ ಉಳಿದ ಕೃತಿಗಳ ಕಿರುಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ.

ಮುಂದೆ ಪ್ರಬಂಧದ ಸ್ವರೂಪವನ್ನು ಕುರಿತು ವಿವರಿಸಲಾಗಿದೆ. ಹಾಸ್ಯಪ್ರಬಂಧಕಾರನ ನೋಟವನ್ನು ವಕ್ರಕನ್ನಡಿಯ ದರ್ಶನ ಎಂದು ಮಾರ್ಮಿಕವಾಗಿ ಗುರುತಿಸಲಾಗಿದೆ. 'ಪಂಡಿತನ ಸಂಕಟ' ಪ್ರಬಂಧದಲ್ಲಿ ಪಂಡಿತನೊಬ್ಬನ ಸಾಂಸಾರಿಕ ತಾಪತ್ರಯಗಳನ್ನು ವ್ಯಾಕರಣದ ಪರಿಭಾಷೆಯಲ್ಲಿ ಚಮತ್ಕಾರಿಕವಾಗಿ ವಿವರಿಸಲಾಗಿದೆ. ಕೃಷ್ಣಯ್ಯನವರು

ಹೀಗೆ ವಿವರಿಸಿದ್ದಾರೆ – 'ನಗೆಯ ಮರೆಯಲ್ಲಿ ಒಬ್ಬ ಅಥವಾ ಒಂದು ಕಾಲದ ಎಲ್ಲ ಕನ್ನಡ ಪಂಡಿತರ ಸಂಸಾರ ತಾಪತ್ರಯಗಳ ಚಿತ್ರವೂ ಮೂಡುತ್ತದೆ.' ಸಾಹಿತ್ಯ ವಿಮರ್ಶೆ ಮಾಡುವಾಗ ಇತರ ಕಲೆಗಳ ಸೌಂದರ್ಯಮೀಮಾಂಸೆಯ ಪರಿಭಾಷೆಯನ್ನು ಬಳಸುವುದು ಕೃಷ್ಣಯ್ಯನವರು ರೂಢಿ ಮಾಡಿಕೊಂಡಿರುವ ಒಂದು ಸುಂದರ ವಿಶಿಷ್ಟ ಅಭ್ಯಾಸ. ಇಲ್ಲಿ ಹೀಗೆ ಬರೆಯುತ್ತಾರೆ – "ಮಿತ್ರ ಅವರ ಪ್ರಬಂಧ ರಚನಾ ವಿನ್ಯಾಸವನ್ನು ಗಮನಿಸಿದರೆ ವರ್ಣಚಿತ್ರ ಕಲಾಕೃತಿ ನೆನಪಿಗೆ ಬರುತ್ತದೆ.......ವರ್ಣಚಿತ್ರಗಳಲ್ಲಿ ಬಣ್ಣ ರೇಖೆಗಳ ಸೃಷ್ಟಿಸುವ ಮೈವಳಿಕೆ, ರೂಪಿಕೆ, ಅಭಿರಚನೆ, ಸಂಕೇತಗಳು, ಅವುಗಳ ಹದ, ಹಾಳತ ಸಾಂಗತ್ಯಗಳ ಸೌಂದರ್ಯ, ಚಿತ್ರದ ಸತ್ವ, ತಿರುಳು, ಅರ್ಥಗಳಷ್ಟೇ ಮಹತ್ವ ಪಡೆಯುತ್ತವೆ. ಸಂಗೀತದ ಒಂದು ರಚನೆಯೂ ಅಂತೆ. ಒಟ್ಟು ಭಾವಾನುಭವದಷ್ಟೇ ಅಲ್ಲಲ್ಲಿನ ಪಲುಕುಗಳು, ಸ್ವರದ ಹೊರಳುಗಳು, ಗಮಕಗಳು, ಸ್ವರಸಂಚಾರದಿಂದ ನಿರ್ಮಾಣಗೊಳ್ಳುವ ಸ್ವರವಾಸ್ತು ಆಸ್ವಾದನೀಯವಾಗುತ್ತದೆ. ಮಿತ್ರ ಅವರ ಪ್ರಬಂಧಗಳ ವಿನ್ಯಾಸ, ಮಾತುಗಾರಿಕೆಯ ಮೈವಳಿಕೆಗಳೇ ಚಿತ್ತಾಕರ್ಷಕವಾಗುತ್ತವೆ"

'ಮಿತ್ರ ಪ್ರಬಂಧಕಲೆ ಜೇಡನ ನೂಲಿನಿಂದಲೇ ಆನೆಕಾಲಿನ ಹಗ್ಗ ಹೊಸೆಯುವ ಬಗೆ' ಎಂಬ ಕೃಷ್ಣಯ್ಯನವರ ಮಾತು ಮಿತ್ರ ಅವರ ಪ್ರಬಂಧಗಳ ಬಗ್ಗೆ ಸಾಕಷ್ಟನ್ನು ಹೇಳುತ್ತದೆ.

ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ ಅವರ 'ಸಾಹಿತ್ಯ ಸನ್ನಿಧಿ'ಯನ್ನು ಕುರಿತು ಒಂದು ಲೇಖನವಿದೆ.

ಟಿ.ಎನ್.ಮಹದೇವಯ್ಯ ಅವರ 'ಕಾಗೆ' ಮತ್ತು 'ಗಿರಣಿಗಳು' ಲೇಖನದಲ್ಲಿ ಪ್ರಾರಂಭದಲ್ಲಿ ಯಾವುದು ಸುಂದರ, ಯಾವುದು ಅಸುಂದರ ಎಂಬ ಚರ್ಚೆ ಇದೆ. "ನವೋದಯದಲ್ಲಿ ಒಂದು ನಿಲುವಾಗಿ ಕಂಡ ಆದರೆ ಶತಶತಮಾನಗಳಿಂದ ಬಂದಿರುವ ದೃಷ್ಟಿ ಇದು ಸುಂದರ, ಇದು ಅಲ್ಲ, ಇದು ಕಾವ್ಯಗಳಲ್ಲಿ ಅಭಿವ್ಯಕ್ತಿಯೋಗ್ಯ ಇದು ಅಲ್ಲ ಎಂಬುದು, ಏಕಾಗಬಾರದು ಎಂಬುದಕ್ಕೆ ಎಡೆಗೊಟ್ಟಿದೆ. ಕೋಗಿಲೆ, ಮಯೂರ, ಹೂಬಿಟ್ಟ ಮರ, ನಿಸರ್ಗ ದೃಶ್ಯಗಳು ಇವೇ ಏಕೆ ಸುಂದರ? ಒಂದು ಸೆಗಣಿಯ ಗುಪ್ಪೆ ಏಕೆ ಸುಂದರ ಅಲ್ಲ ಎಂದು ಪ್ರಶ್ನಿಸುತ್ತಿದ್ದಾರೆ. ಅದರಿಂದಾಗಿ ಯಾವುದನ್ನು ಅಸುಂದರ, ರಸಾಭಾಸ ಅನ್ನುತ್ತಿದ್ದರೊ ಅಂತಹ ವಿಷಯಗಳನ್ನೆ ಕುರಿತು ಆಂಟಿ ಈಸ್ಥಟಿಕ್ ಚಳುವಳಿಯೂ ಇತ್ತೀಚಿನ ದಶಕಗಳಲ್ಲಿ ಪ್ರಾರಂಭವಾಗಿದೆ".

ಈ ಹಿನ್ನೆಲೆಯಲ್ಲಿ ಟಿ.ಎನ್.ಮಹದೇವಯ್ಯನವರ ಕವಿತೆಗಳ ವಿಮರ್ಶೆಯನ್ನು ಇಲ್ಲಿ ಮಾಡಲಾಗಿದೆ. ಈ ಲೇಖನ ಬರೆಯುವ ಕಾಲಕ್ಕೆ(2001) ಈ ಕವನಗಳು ಎಪ್ಪತ್ತು ವರ್ಷ ಹಿಂದಿನವು! "ಕೋಗಿಲೆಗೆ ಬದಲು ಕಾಗೆ, ನಿಸರ್ಗಕ್ಕೆ ಬದಲು ಗಿರಣಿ ದೃಶ್ಯ. ಎಪ್ಪತ್ತು ವರ್ಷಗಳ ಹಿಂದೆಯೇ ಹೀಗೆ ಬರೆದರಲ್ಲ, ಇಂತಹ ದೃಷ್ಟಿ ಇತ್ತಲ್ಲ ಎಂಬುದೂ ಆಶ್ಚರ್ಯ ತಂದಿತು" ಎನ್ನುತ್ತಾರೆ. ಕೃಷ್ಣಯ್ಯನವರ ವಿಮರ್ಶೆಯಲ್ಲಿ ಕಲಾದೃಷ್ಟಿಯು ಉಸಿರಾಟದಷ್ಟು ಸಹಜವಾಗಿ ಸುಳಿಯುತ್ತದೆ ಎಂಬುದಕ್ಕೆ ಈ ಲೇಖನ ಸಾಕ್ಷಿ.

'ಮುಕ್ತಮನಸ್ಸಿನ ಕವಿ', 'ಕೆ.ಎಸ್.ನಿಸಾರ್ ಅಹಮದ್ ಮುಚ್ಚು ಅಂಗಡಿಯನ್ನು', 'ಸಿ.ವಿ.ವತ್ಸಲಾದೇವಿ ಅವರ ವ್ಯೂಹ ಮತ್ತು ಇತರ ಕಥೆಗಳು', ಕನ್ನಡ ಸಂಸ್ಕೃತಿಯ ಅಧ್ಯಯನ(ಐದು ಪ್ರಶ್ನೆಗಳು) ಎಂಬ ಲೇಖನಗಳಿವೆ.

'ಜನಪ್ರಿಯ ಕಲೆ' ಎಂಬ ಲೇಖನದಲ್ಲಿ ಮನನಯೋಗ್ಯ ವಿಚಾರಗಳಿವೆ. "ಇಪ್ಪತ್ತನೆ ಶತಮಾನದ ಕೊನೆಯ ದಶಕದವರೆಗೆ ತಾತ್ತ್ವಿಕ ಸೌಂದರ್ಯಮೀಮಾಂಸೆಯಲ್ಲಿ ಜನಪ್ರಿಯ ಕಲೆಗಳ ಬಗ್ಗೆ ಗಂಭೀರ ಚರ್ಚೆಯಾಗಲಿಲ್ಲ", ಆದರೆ ಈಗ ಆ ಚರ್ಚೆ ತುಂಬ ನಡೆಯುತ್ತಿದೆ.

ಯುರೋಪ್‌ನಲ್ಲಿ "ಕ್ಯಾಂಟ್‌ನ ನಂತರ ನೈಜ ಕಲೆಯನ್ನು ಅದರ ಸೌಂದರ್ಯ ಗುಣಗಳಿಗಾಗಿಯೇ ಆಸ್ವಾದಿಸಬೇಕೆಂಬ ಭಾವನೆ ಬೆಳೆಯಿತು. ಆತ ಕಲೆಯ ಆಸ್ವಾದನೆ– ಡಿಸಿನ್ಟೆರೆಸ್ಟೆಡ್‌ನೆಸ್–ಸ್ವಾರ್ಥರಹಿತ ಅಥವಾ ಅನಾಸಕ್ತ

ಪರಿಭಾವನೆಯಿಂದ ಮಾತ್ರ ಸಾಧ್ಯ ಎಂದ". ನಮ್ಮ ಮಮ್ಮಟ ಕೂಡ "ಕಲಾಸ್ವಾದನೆಯ ಕಾಲದಲ್ಲಿ ಲೌಕಿಕ ಭಾವನೆಗಳನ್ನು, ವೈಯಕ್ತಿಕ ಭಾವನೆಗಳನ್ನು ದೂರೀಕರಿಸುವುದರಿಂದ ರಸಾನುಭವ, ಆನಂದ ಉಂಟಾಗುತ್ತದೆ ಎಂದಿದ್ದಾನೆ" .... "ಹೆಗೆಲ್ ಸಹ ಕಲೆ ವ್ಯಕ್ತಿ ಪ್ರತಿಭೆಯ ಸೃಷ್ಟಿ ಎಂದ. ಉತ್ತಮ ಅಭಿರುಚಿಯಿದ್ದಲ್ಲಿ ಕಲೆಯನ್ನು ಗ್ರಹಿಸಲು, ಆಸ್ವಾದಿಸಲು ಶಕ್ಯ ಎಂಬ ಭಾವನೆ ಉಂಟಾಗಿತ್ತು. ಈ ಹಿನ್ನೆಲೆಯಲ್ಲಿ ಜನಪ್ರಿಯ ಕಲೆ ಎಂದರೇನು, ಅದಕ್ಕೂ ಸಮೂಹ ಕಲೆಗೂ ಏನು ವ್ಯತ್ಯಾಸ ....... ಈ ಮುಂತಾದ ವಿಷಯಗಳನ್ನಿಟ್ಟುಕೊಂಡು ಚರ್ಚಿಸಲಾಗಿದೆ. ಒಟ್ಟಿನಲ್ಲಿ ಜನಪ್ರಿಯ ಕಲೆಯನ್ನು ಕುರಿತು ಬೀಸು ಹೇಳಿಕೆಗಳನ್ನು ಕೊಡುವ ಮುಂಚೆ ಈ ಲೇಖನವನ್ನು ಓದಬೇಕು ಅನ್ನಿಸುವಂತೆ ಬರೆಯಲಾಗಿದೆ.

'ದೃಶ್ಯಕಲೆಯ ಒಲವು–ನಿಲವು'ಗಳನ್ನು ಕುರಿತು ಒಂದು ಲೇಖನ ಇದೆ.

'ರೋಡಿನ್‌ನ ಶಿಲ್ಪಕಲೆ' ಎಂಬ ಲೇಖನದಲ್ಲಿ ಆಧುನಿಕ ಶಿಲ್ಪಕಲೆಯ ಜನಕ, ಯುಗಪ್ರವರ್ತಕ ಮಹಾನ್ ಶಿಲ್ಪಿ ಎಂದು ಖ್ಯಾತನಾದ ಫ್ರಾನ್ಸಿನ ಆಗಸ್ಟೆ ರೋಡಿನ್‌ನ ಶಿಲ್ಪಕಲೆಯ ಪರಿಚಯವಿದೆ.

'ಕುವೆಂಪು ಸಾಹಿತ್ಯ ಚಿತ್ರ ಸಂಪುಟ'ಕ್ಕೆ 2004ರಲ್ಲಿ ಬರೆದ ಪ್ರಸ್ತಾವನೆ ಇಲ್ಲಿ ಸೇರಿದೆ.

'ಕಾರಂತರ ಕಲಾಸಾಹಿತ್ಯ' ಎಂಬ ಲೇಖನದಲ್ಲಿ ಭಾರತೀಯ ಚಿತ್ರಕಲೆ, ಕಲೆಯ ದರ್ಶನ, ಕರ್ನಾಟಕದಲ್ಲಿ ಚಿತ್ರಕಲೆ, ಭಾರತೀಯ ಶಿಲ್ಪಕಲೆ ಮತ್ತು ಕಲಾಪ್ರಪಂಚ ಎಂಬ ನಾಲ್ಕು ಕಾರಂತವಿರಚಿತ ಕಲಾವಿಷಯಕ ಕೃತಿಗಳ ಪರಿಚಯವಿದೆ. ಕಾರಂತರ ಕಲಾವಿಷಯಕ ಮಾತುಗಳು ಅವರ ಪುಸ್ತಕಗಳಿಗಿಂತ ಆಸಕ್ತಿದಾಯಕ ಎಂಬ ಸ್ವಾರಸ್ಯಕರ ವಿಚಾರವನ್ನು ಸಹ ಈ ಲೇಖಕರು ಪ್ರಸ್ತಾಪಿಸುತ್ತಾರೆ.

********

## ಕಲಾ ಸಂಸ್ಕೃತಿ

2012ರಲ್ಲಿ ಸಪ್ನಾ ಬುಕ್ ಹೌಸ್ ಪ್ರಕಟಿಸಿದ ಕೃಷ್ಣಯ್ಯನವರ ಕಲಾವಿಷಯಕ ಪ್ರಬಂಧಗಳ ಸಂಕಲನ 'ಕಲಾ ಸಂಸ್ಕೃತಿ'. 194 ಪುಟಗಳ ಈ

ಕೃತಿಯನ್ನು ದಿ.ಆರ್.ಎಂ.ಹಡಪದ್ ಅವರ ನೆನಪಿಗೆ ಅರ್ಪಿಸಿದ್ದಾರೆ. ಕಲೆಯನ್ನು ಕುರಿತು ಉದಯವಾಣಿ ವಿಶೇಷ ಸಂಚಿಕೆ, ಅನ್ವೇಷಣೆ, ಲೋಚನ ಮುಂತಾದ ಪತ್ರಿಕೆಗಳಿಗೆ ಬರೆದ ಲೇಖನಗಳು, ಲಲಿತಕಲಾ ಅಕಾಡೆಮಿಗೆ ಬೇರೆ ಬೇರೆ ಸಂದರ್ಭದಲ್ಲಿ ಬರೆದ ಲೇಖನಗಳು, ಹೊಸತು ಪತ್ರಿಕೆಯ ವಾರ್ಷಿಕ ಸಂಚಿಕೆಗಾಗಿ ಬರೆದ ಲೇಖನಗಳು ಇಲ್ಲಿ ಸೇರಿವೆ.

'ಭಾರತೀಯ ಚಿತ್ರಕಲೆಯಲ್ಲಿ ಶೃಂಗಾರ ಲಹರಿ' ಎಂಬ ಲೇಖನದಲ್ಲಿ ಮೊದಲಿಗೆ ಶೃಂಗಾರರಸವನ್ನು ಕುರಿತ ವಿವರಣೆ ಇದೆ. "ಶೃಂಗಾರದ ವೈಶಿಷ್ಟ್ಯವೆಂದರೆ ಆಲಸ್ಯ, ಜುಗುಪ್ಸೆಯಂತಹ ಒಂದೆರಡನ್ನು ಬಿಟ್ಟರೆ ಉಳಿದ ರಸಗಳ ಸ್ಥಾಯಿ-ಸಂಚಾರಿ ಭಾವಗಳೆಲ್ಲ ಇದಕ್ಕೆ ಪೋಷಕವಾಗಬಲ್ಲುವು. ಆದ್ದರಿಂದ ಶೃಂಗಾರವು ತಾನೇ ತಾನಾಗಿ ಎಲ್ಲವನ್ನೂ ಒಳಗೊಂಡು ಮೆರೆಯುವ ರಸರಾಜ ಎನಿಸಿಕೊಂಡಿದೆ. ಭೋಜರಾಜ ಶೃಂಗಾರ ಒಂದೇ ಆಸ್ವಾದನೀಯವಾದ್ದರಿಂದ ಕೇವಲ ಅದನ್ನೆ ರಸವೆನ್ನುವುದು ಎನ್ನುತ್ತಾನೆ. ರಸಿಕನನ್ನು ಅನುಭವದ 'ಶೃಂಗ'ಕ್ಕೆ ಮುಟ್ಟಿಸುವ ಕಾರಣ ಅದಕ್ಕೆ ಶೃಂಗಾರವೆಂದು ಹೆಸರು ಎನ್ನುತ್ತಾನೆ...............ಶೃಂಗಾರದ ಸ್ಥಾಯಿ ರತಿ. ರತಿಯೆಂದರೆ ಸ್ಥೂಲವಾಗಿ ಆಕರ್ಷಣೆ ಸೆಳೆತ. ಆದ್ದರಿಂದ ಇದನ್ನು ಉಜ್ವಲ ವೇಷಾತ್ಮಕ ಎನ್ನುವರು......."

ಶೃಂಗಾರದ ಬಗೆಗಿನ ಈ ವಿವರಣೆಯನ್ನು ಮುಂದುವರಿಸುತ್ತಾ ಕೃಷ್ಣಯ್ಯನವರು ".....ಭಾರತದಲ್ಲಿ ಲೋಕವ್ಯವಹಾರವೆಲ್ಲವೂ ಧರ್ಮದ, ಆಧ್ಯಾತ್ಮದ ತಳಹದಿಯ ಮೇಲೆಯೇ ನಿಂತಿದೆಯಲ್ಲವೇ. ಮಧ್ಯ ಯುಗಾಂತರದ ಭಕ್ತಿ ಪಂಥಗಳ ಪ್ರಭಾವ ಹರಡಿತು. ರಸಗಳ ಚರ್ಚೆಯಲ್ಲೂ 'ಭಕ್ತಿ' ಎಂಬುದು ಕಾಣಿಸಿತು. ಕೆಲವರು ಅದನ್ನು ಪ್ರತ್ಯೇಕವಾದ ರಸ ಎಂದರು.......ಭಕ್ತಿ ಶೃಂಗಾರದ ಒಂದು ಭೇದವೆಂದೇ ಹಲವರು ಸಮರ್ಥಿಸಿದರು. ಅದರಲ್ಲೂ ಪರಮಾತ್ಮನನ್ನು ಪ್ರಿಯ, ಪ್ರಿಯೆ ಎಂದು ಭಾವಿಸಿ, ಪರಮ ಪ್ರೇಮರೂಪವಾದ ಮನೋವೃತ್ತಿಯನ್ನು ತಾಳುವುದು, ಪರಮಾತ್ಮನಿಗಾಗಿ ನಲ್ಲೆಯಂತೆ ಹಂಬಲಿಸುವುದು ಮಧುರ ಭಕ್ತಿ. ಇದು ಹರಡಿದಂತೆ ಶೃಂಗಾರದ ಸಕಲ ಚೇಷ್ಟೆ ಅವಸ್ಥೆಗಳೂ ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ಸ್ವೀಕಾರಾರ್ಹವಾದವು. ಶ್ರೀ ಕೃಷ್ಣ ಭಕ್ತಿ ಇದರ ಕೆಂದ್ರ. ರಾಧೆಗೆ ಶ್ರೀ ಕೃಷ್ಣನಲ್ಲಿದ್ದ ಭಾವ ಇಂಥದು.......ಮಧ್ಯಯುಗಾಂತರ

ಭಾರತದಲ್ಲಿ ಭಕ್ತಿಕಾವ್ಯ ಜನಪ್ರಿಯವಾದಂತೆ, ಭಾರತೀಯ ಚಿತ್ರಕಲೆಯೂ ಸಮಾಜಕ್ಕೆ ಹಿಡಿದ ಕನ್ನಡಿಯಾಯಿತು".

ಶೃಂಗಾರರಸವನ್ನು ಕುರಿತ ಈ ಪೀಠಿಕೆಯೊಂದಿಗೆ ಲೇಖಕರು ಭಾರತದ ಬೇರೆ ಬೇರೆ ಚಿತ್ರಶೈಲಿಗಳಲ್ಲಿ ಈ ರಸವು ಚಿತ್ರಿತವಾಗಿರುವ ಕ್ರಮವನ್ನು ವಿವರಿಸುತ್ತಾರೆ. ಚಿತ್ರಗ್ರಂಥಗಳು, ಮೊಘಲ ಶೈಲಿ, ರಾಜಾಸ್ಥಾನೀ ಮತ್ತು ಪಹಾಡಿ ಶೈಲಿ, ಮೇವಾರ್ ಶೈಲಿ, ಬುಂದಿ, ಕಿಷನ್‌ಗರ್ ಶೈಲಿ, ಜೈಪುರ ಶೈಲಿ, ಬಾಸೋಲಿ ಶೈಲಿ, ಕಾಂಗ್ರಾ ಶೈಲಿ – ಇವುಗಳಲ್ಲಿ ಶೃಂಗಾರವು ಚಿತ್ರಿತವಾಗಿರುವ ಬಗೆಯ ವರ್ಣನೆ. ಇದೆ. ಅಲ್ಲದೆ ಶೃಂಗಾರವನ್ನು ವಸ್ತುವಾಗಿ ಉಳ್ಳ ಕಾವ್ಯಗಳು, ಗ್ರಂಥಗಳ ವಿವರಣೆಯೂ ಇದೆ. ಜೊತೆಗೆ, ಭರತನು ಹೇಳುವ ನಾಯಕ – ನಾಯಿಕಾ ಭೇದ, ರಾಗಮಾಲಾ ಪರಿಕಲ್ಪನೆ, ಬಾರಾಮಾಸ ಕಲ್ಪನೆ ಇವು ಸಹ ಚಿತ್ರಗಳಿಗೆ ವಸ್ತುವಾಗಿವೆ. ಹೇಗೆ 'ಭಾರತೀಯ ಚಿತ್ರ ಕಲೆಯ ಶ್ರೀಮಂತಿಕೆ ಅಪಾರ, ವೈವಿಧ್ಯಮಯವಾಗಿದೆ ಮತ್ತು ಹೇಗೆ ಶೃಂಗಾರವೊಂದೇ ಅಸಂಖ್ಯ ಕಲಾವಿದರ ಕಲ್ಪನೆ ಕೆರಳಿಸಿದೆ, ಸುಂದರ ಕಲಾಕೃತಿ ರಚನೆಗೆ ಸ್ಫೂರ್ತಿ ನೀಡಿದೆ' ಎಂಬುದನ್ನು ಈ ಲೇಖನದಲ್ಲಿ ಕೃಷ್ಣಯ್ಯನವರು ವಿವರಿಸಿದ್ದಾರೆ.

'ಕರ್ನಾಟಕದ ಚಿತ್ರಕಲಾ ಪರಂಪರೆ' ಎಂಬ ಲೇಖನದಲ್ಲಿ ಕೃಷ್ಣಯ್ಯನವರು ಪ್ರಸ್ತಾವನೆ ನೀಡುತ್ತಾ ಒಂದು ಆಸಕ್ತಿದಾಯಕ ವಿಷಯವನ್ನು ಪ್ರಸ್ತಾಪಿಸಿದ್ದಾರೆ......."ಕಾಲ ಮತ್ತು ಇತಿಹಾಸ, ಲಲಿತಕಲೆಗಳ ವಿಷಯದಲ್ಲಿ ಒಂದು ಸಂಪೂರ್ಣ ಆವರ್ತನವನ್ನು ಪೂರೈಸಿದೆ ಎನ್ನಬಹುದು. ಪ್ರಾಗೈತಿಹಾಸಿಕ ಕಲೆ, ಐತಿಹಾಸಿಕ ಕಲೆಯ ವಿವಿಧ ಘಟ್ಟಗಳು, ಆಧುನಿಕ ಕಾಲದ ಕಲಾದೃಷ್ಟಿಗಳನ್ನು ಗಮನಿಸಿದಾಗ ಪ್ರಾದಿಮ ಮಾನವನ ಕಲೆಯ ಸಹಜ ಸರಳತೆ, ಸಾಂಕೇತಿಕತೆಯೇ ವಿಕಾಸದ ಹಾದಿಯಲ್ಲಿ ಸಾಗುತ್ತ ಸಂಕೀರ್ಣತೆಯ ವಿವಿಧ ರೂಪ ತಳೆದು ಮತ್ತೆ ಆಧುನಿಕ ಕಾಲದಲ್ಲಿ ಆ ಹಿಂದಿನ ಸರಳತೆ, ಸಾಂಕೇತಿಕತೆಯ ಮಹತ್ವವನ್ನು ಅರಿತಂತೆ ಕಾಣುತ್ತದೆ.......ವೃತ್ತಕ್ಕೆ ಆರಂಭ ಅಂತ್ಯಗಳಿಲ್ಲ. ಚಿತ್ರಕಲೆಯ ಅಧ್ಯಯನ ಪರಿಶೀಲನೆಯಲ್ಲಿ ಕಾಲದೃಷ್ಟಿಯಿಂದ ವಿಂಗಡಿಸುವುದು ಕೇವಲ ಅಧ್ಯಯನದ ಅನುಕೂಲಕ್ಕಾಗಿ ಮಾತ್ರ. ಕರ್ನಾಟಕ ಪರಂಪರೆ ಇದಕ್ಕೆ ಹೊರತಲ್ಲ.

ಕರ್ನಾಟಕದ ಭೌಗೋಳಿಕ ಪ್ರದೇಶ ಅದರ ವಿಸ್ತಾರ ಸೀಮೆಗಳು ಇತಿಹಾಸದುದ್ದಕ್ಕೂ ಬದಲಾಗುತ್ತ ಬಂದಿವೆ. ಚಿತ್ರಕಲೆಯಲ್ಲಿ ಹೊಸಪ್ರಭಾವ,

ಹೊಸದೃಷ್ಟಿ ಕಾಣಿಸಿಕೊಂಡ ಪ್ರದೇಶಗಳು ಇಂದು ಕರ್ನಾಟಕದಲ್ಲಿ ಇಲ್ಲ. ಹಾಗೆಂದು ಇಂದಿನ ಭೌಗೋಳಿಕ ಮಿತಿಯನ್ನು ಪರಿಶೀಲನೆಯ ಮಿತಿಯಾಗಿ ಆಧರಿಸಿ ಇಷ್ಟು ಮಾತ್ರವೆ ಕರ್ನಾಟಕದ ಪರಂಪರೆ ಎನ್ನುವಂತಿಲ್ಲ. ಇಲ್ಲಿ ಅಂತಹ ಲಕ್ಷ್ಮಣರೇಖೆ ಅವಾಸ್ತವವಾಗುತ್ತದೆ ಎಂದು ಗಮನಿಸಿದರೆ ಸಾಕು".

ಕರ್ನಾಟಕ ಚಿತ್ರಕಲೆಯ ಹಿನ್ನೆಲೆ ಹೀಗಿದೆ. – "ಭಾರತದಲ್ಲಿ ಉತ್ತರಪ್ರದೇಶ, ಮಹಾರಾಷ್ಟ್ರ ಮತ್ತು ಕರ್ನಾಟಕಗಳಲ್ಲಿ ಆದಿವಾಸಿ ಚಿತ್ರಕಲೆಯನ್ನು ಶಿಲಾಶ್ರಯಗಳಲ್ಲಿ ಕಾಣಬಹುದು. ಕರ್ನಾಟಕದಲ್ಲಿ ಬಳ್ಳಾರಿ, ರಾಯಚೂರು, ಬೆಳಗಾವಿ, ಚಿತ್ರದುರ್ಗ, ಕೋಲಾರಗಳಲ್ಲಿ ಆದಿವಾಸಿ ಚಿತ್ರಗಳು ಕಂಡುಬಂದಿವೆ. ಕ್ರಿ.ಪೂ.10,000 ವರ್ಷದಿಂದ ಕ್ರಿ.ಪೂ.1000–200ರ ಬೃಹತ್ ಶಿಲಾಯುಗದವರೆಗೂ, ಇಲ್ಲಿನ ಚಿತ್ರಗಳು ಬೇರೆ ಬೇರೆ ಕಾಲಗಳಲ್ಲಿ ರಚಿತವಾಗಿವೆ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ". ಈ ಚಿತ್ರಗಳ ವಿವರಗಳು ಪ್ರಾದಿಮ ಮಾನವರ ಬದುಕಿನ ಮೇಲೆ ಬೆಳಕು ಚೆಲ್ಲುತ್ತವೆ. "ಮಾಂತ್ರಿಕ ಅಥವಾ ಪುರೋಹಿತ ವ್ಯಕ್ತಿ, ಬೆನ್ನಿಗೆ ಬಾಣ ನಾಟಿರುವ ಜಿಂಕೆ, ಸಂಭೋಗಕ್ರಿಯೆ, ಬಹುಶಃ ಬೇಟೆಗೆ ಹೋಗುವ ಮೊದಲಿನ ಸಾಮೂಹಿಕ ನೃತ್ಯ, ಆಹಾರ ಒದಗಿಸುವ ಪ್ರಾಣಿಗಳು ಇವೆಲ್ಲ ಮಾಂತ್ರಿಕ ಕಟ್ಟಲೆಗಳ ಆಚರಣೆಗಳನ್ನು ತಿಳಿಸುತ್ತವೆ. ಮನುಷ್ಯ ರಚನೆಯಲ್ಲಿನ ವೈವಿಧ್ಯ ವಿಕಾಸವನ್ನು ಬಂಡೆಯಾಸರೆಯ ಚಿತ್ರಗಳಲ್ಲಿ ಕಾಣಬಹುದು. ಇವು ಸೃಜನಶೀಲತೆಯ ಮೊದಲ ಹೆಜ್ಜೆಗಳು."

ಪ್ರಾದಿಮ ಕಲೆಯನ್ನು ವಿವರಿಸಿದ ನಂತರ ಕೃಷ್ಣಯ್ಯನವರು ಚಿತ್ರಕಲಾ ಇತಿಹಾಸವನ್ನು ಗಮನಿಸುತ್ತಾರೆ.

"ಭಾರತೀಯ ಚಿತ್ರಕಲೆಯ ಇತಿಹಾಸವನ್ನು ಸಾಮಾನ್ಯವಾಗಿ ಅಜಂತಾ ಚಿತ್ರಕಲೆಯಿಂದ ಪ್ರಾರಂಭಿಸುವುದು ರೂಢಿ. (ಕ್ರಿ.ಪೂ.ಒಂದನೇ ಶತಮಾನದಿಂದ ಕ್ರಿ.ಶ.ಏಳನೇ ಶತಮಾನದ ಕಲೆ ಅದು.) ಆಳಿದ ರಾಜರುಗಳು ಹಾಗೂ ವಾಸ್ತು ಮತ್ತು ಶಿಲ್ಪಕಲೆಯ ಪ್ರಭಾವವನ್ನು ಗಮನಿಸಿ ಇದರಲ್ಲಿ ಕರ್ನಾಟಕದ ಕೊಡುಗೆಯೂ ಇರಬಹುದು ಎಂದು ಊಹಿಸಲಾಗಿದೆ. ಅಂತಿಮ ಘಟ್ಟದ ಅಜಂತಾ ಪರಂಪರೆಯೇ ಮುಂದುವರೆದು ಬಾದಾಮಿ ಎಲ್ಲೋರಗಳಲ್ಲಿ ವಿಕಾಸ ಹೊಂದುತ್ತಾ, ಕಾಲೋಚಿತ ಬದಲಾವಣೆಗಳನ್ನು ಹೊಂದಿ ಸ್ಥಳೀಯ ಕಲಾಶೈಲಿಗಳನ್ನು ಮೈಗೂಡಿಸಿಕೊಳ್ಳುತ್ತಾ ಕರ್ನಾಟಕ ಪರಂಪರೆಯಾಗಿ ಉತ್ತರ

ಮತ್ತು ದಕ್ಷಿಣ ಭಾರತಗಳಲ್ಲಿ ಇತಿಹಾಸದುದ್ದಕ್ಕೂ ಪ್ರಭಾವ ಬೀರಿರುವುದನ್ನು ಕಾಣಬಹುದು.

'ಕಲೆ ಮತ್ತು ಪ್ರಾಯೋಗಿಕ ವಿಮರ್ಶೆ' ಎಂಬ ಲೇಖನದಲ್ಲಿ ಪ್ರಾರಂಭದಲ್ಲಿ ಶಿವರಾಮ ಕಾರಂತ, ವಿ.ಸಿ., ಅ.ನ.ಕೃ. ಕಲಾವಿಮರ್ಶೆಯಲ್ಲಿ ತೊಡಗಿದ್ದನ್ನು ಪ್ರಸ್ತಾಪಿಸಲಾಗಿದೆ.

ಕಲೆಯ ಪ್ರಾಯೋಗಿಕ ವಿಮರ್ಶೆಯ ಸಂದರ್ಭದಲ್ಲಿ ಕೃಷ್ಣಯ್ಯನವರು ಹೇಳಿರುವ ಈ ಕೆಳಗಿನ ಮಾತುಗಳು ತುಂಬ ಉಪಯುಕ್ತವಾದವು. ಆ ಮಾತುಗಳು ಹೀಗಿವೆ.

"ಒಂದು ಕಲಾಕೃತಿಯನ್ನು ಅದು ರೇಖಾಚಿತ್ರವಾಗಿರಲಿ, ಜಲವರ್ಣ, ತೈಲಚಿತ್ರ, ಗ್ರಾಫಿಕ್ ರಚನೆಯಾಗಿರಲಿ ಅಥವಾ ಶಿಲ್ಪಕೃತಿಯಾಗಿರಲಿ ವಸ್ತುನಿಷ್ಠವಾಗಿ ವಿಶ್ಲೇಷಣೆ ಮಾಡುವ ದೃಷ್ಟಿಯಿಂದ ಸ್ಥೂಲವಾಗಿ ವಿಂಗಡಿಸಿ ಸೂಚಿಸಬಹುದು. ಇದು ನೋಡುವ ವಿಶ್ಲೇಷಿಸುವ ಕ್ರಮವೇ ಹೊರತು ಇದಿಷ್ಟೇ ವಿಮರ್ಶೆಯ ವಿಧಾನವಲ್ಲ. ಆದರೂ ಈ ವಿಂಗಡನಾ ಕ್ರಮ ಒಂದು ಸಮಗ್ರ ನಿಲುವು ತಳೆಯಲು ನೆರವಾಗುತ್ತದೆ.

ಒಂದು ಕೃತಿಯನ್ನು ಪ್ರಥಮ ಹಂತದಲ್ಲಿ ಮೂರು ದೃಷ್ಟಿಯಿಂದ ವಿಂಗಡಿಸಬಹುದು.

1. ವಿಚಾರ–ಚಿಂತನೆ

2. ಅನುಭೂತಿ– ಭಾವಸ್ಪಂದನೆ

3. ತಂತ್ರ – ಶೈಲಿ

'ಈ ಮೂರೂ ದೃಷ್ಟಿಯಿಂದ ಮಾಡುವ ವಿವೇಚನೆ ವಸ್ತುನಿಷ್ಠ ಮೌಲ್ಯವನ್ನು ಪಡೆದು ಕಲಾವಿದನಿಗೆ, ಕಲಾಕೃತಿಗೆ ವಿಮರ್ಶೆಯಲ್ಲಿ ಆಗಬಹುದಾದ ತಪ್ಪುಗಳನ್ನು ನಿವಾರಿಸುತ್ತದೆ. ಕಲಾವಿದನ ಸಾಧನೆಯನ್ನೋ ವೈಫಲ್ಯವನ್ನೋ ನಿರ್ಧರಿಸಲು ನೆರವಾಗುತ್ತದೆ'. ಮೇಲಿನ ವಿಶ್ಲೇಷಣೆಗೆ ಪೂರಕವಾಗುವಂತೆ ಲಿಯೋನಾರ್ಡೊ ಡಾ ವಿಂಚಿಯ ಲಾಸ್ಟ್ ಸಪ್ಪರ್, ಪೀಟರ್ ಬ್ರೂಗೆಲ್‌ನ ಲ್ಯಾಂಡ್ ಆಫ್ ಕಾಕೈನ್, ಪಾಲ್ ಕ್ಲೀ ಎಂಬ ಕಲಾವಿದನ ರೆಫ್ಯೂಜ್ ಚಿತ್ರಗಳ ಪ್ರಾಯೋಗಿಕ ವಿಮರ್ಶೆ ಇದೆ.

ಕಲಾ ವಿಮರ್ಶೆ ಮಾಡಬಯಸುವವರು ಓದಲೇಬೇಕಾದ ಲೇಖನ ಇದು.

ಡಿ.ವಿ.ಜಿ.ಯವರ ಸೌಂದರ್ಯಮೀಮಾಂಸೆ ಲೇಖನದಲ್ಲಿ ಆಚಾರ್ಯ ತೀ.ನಂ.ಶ್ರೀ. ಹಾಗೂ ಕನ್ನಡ ಕೈಪಿಡಿಗಳಿಗಿಂತ ಮುಂಚೆ ಸೌಂದರ್ಯಮೀಮಾಂಸೆಯ ವಿಚಾರದಲ್ಲಿ ಡಿ.ವಿ.ಜಿ. ಅವರ ಲೇಖನಗಳೇ ಕಲಾಸಕ್ತರಿಗೆ ಆಧಾರವಾಗಿದ್ದವು ಎಂಬ ಕುತೂಹಲಕರ ವಿಚಾರವನ್ನು ಕೃಷ್ಣಯ್ಯನವರು ಪ್ರಸ್ತಾಪಿಸುತ್ತಾರೆ.

"ಸೌಂದರ್ಯಮೀಮಾಂಸೆಯು ಪಾಶ್ಚಾತ್ಯರಲ್ಲಿ ತತ್ತ್ವಶಾಸ್ತ್ರದ ಒಂದು ಅಂಗವಾಗಿ ಬೆಳೆಯಿತು.......ಕಳೆದ ಶತಮಾನದಲ್ಲಿ ಹ್ಯಾವೆಲ್, ಪರ್ಸಿಬೌನ್, ಕ್ರಾಮರಿಷ್, ಆನಂದ ಕುಮಾರಸ್ವಾಮಿ ಮುಂತಾದ ಕಲಾ ವಿಮರ್ಶಕರು ವಿದ್ವಾಂಸರು ಭಾರತದ ಚಿತ್ರ, ಶಿಲ್ಪಗಳ ಪರಿಚಯ ಮಾಡಿಕೊಡುತ್ತ, ಭಾರತೀಯ ಜೀವನ ತತ್ತ್ವಗಳ ಹಿನ್ನೆಲೆಯಲ್ಲಿ ಸೌಂದರ್ಯ ಮತ್ತು ಕಲೆಗಳ ವೈಶಿಷ್ಟ್ಯವನ್ನು ನಿರೂಪಿಸಿದಾಗ, ಭಾರತೀಯ ಅಲಂಕಾರ ಶಾಸ್ತ್ರ, ಕಾವ್ಯಮೀಮಾಂಸೆಯ ಹಿನ್ನೆಲೆಯನ್ನೂ, ಸೌಂದರ್ಯಕಲ್ಪನೆಯನ್ನೂ, ರಸಾನುಭವ ಮುಂತಾದ ರಸಸಿದ್ಧಾಂತದ ಮಹತ್ತ್ವ ಮತ್ತು ವೈಶಿಷ್ಟ್ಯವನ್ನು ವಿವರಿಸಿ ಪರಿಚಯವಾದಾಗ ಪಾಶ್ಚಾತ್ಯರಲ್ಲಿಯೂ ಸೌಂದರ್ಯ, ಕುರೂಪ, ವಿರೂಪಗಳ ದೃಷ್ಟಿಯಲ್ಲಿ ವಿಸ್ತಾರವಾದ ಅರ್ಥ ಕಂಡುಬರತೊಡಗಿತು."

.....ಜ್ಞಾನ ಬೇರೆ, ಅನುಭವ ಬೇರೆ. ಸೌಂದರ್ಯ ಸಂವೇದನೆಗೆ ಸಂಬಂಧಪಟ್ಟದ್ದು: ಬುದ್ಧಿ, ತರ್ಕ, ಜ್ಞಾನಕ್ಕೆ ಅಲ್ಲ ಎಂಬುದು ಖಚಿತ.

ಈ ಹಿನ್ನೆಲೆಯೊಂದಿಗೆ ಪ್ರಾರಂಭಿಸುವ ಕೃಷ್ಣಯ್ಯನವರು ಮುಂದೆ ಡಿ.ವಿ.ಜಿ. ಅವರ ಚಿಂತನೆಯನ್ನು ಪರಿಚಯಿಸುತ್ತಾರೆ.

ಡಿ.ವಿ.ಜಿ. ಅವರು ಸೌಂದರ್ಯವನ್ನು ಅರ್ಥೈಸುವುದು ಹೀಗೆ.

"ಒಂದು ವಸ್ತುವಿನ ಅಥವಾ ಸಂಗತಿಯ ಯಾವ ಗುಣವಿಶೇಷವು ನಮ್ಮ ಮನಸ್ಸನ್ನು ಆ ವಸ್ತುವಿನೊಳಕ್ಕೆ ಸೆಳೆದು ಅಲ್ಲಿ ನೆಲೆಗೊಳಿಸಿ, ಅದರ ಅನುಭವದಲ್ಲಿ ನಾವು ಮೈಮರೆಯುವಂತೆ ಮಾಡುತ್ತದೆಯೋ ಆ ಗುಣಶಕ್ತಿಯು ಸೌಂದರ್ಯ. ಅದೇ ಸ್ವಾರಸ್ಯ. ಸೌಂದರ್ಯದ ಪೂರ್ಣಾನುಭವವೇ ಅನಂದ. ಅನುಭವಿಸವವನೂ ಅನುಭವಿಸಲ್ಪಟ್ಟದ್ದೂ ಬೇರೆ ಬೇರೆ ವಸ್ತುಗಳೆನಿಸುವುದು

ಹೋಗಿ, ಅದೂ ತಾನೂ ಒಂದೇ ಎನಿಸುವಂತೆ ಕೂಡಿಕೊಂಡು, ಇನ್ನಾವುದರ ಬಯಕೆಯೂ ಇನ್ನಾವುದರ ನೆನಪೂ ಉಳಿಯದೇ ಹೋದಾಗ ಅವನಿರುವ ಸ್ಥಿತಿ ಆನಂದದ್ದು (ಭಾರತೀಯ ಕಾವ್ಯ ಮೀಮಾಂಸೆಯ 'ಸದ್ಯಃ ಪರ ನಿವೃತಯೇ' ಸ್ಥಿತಿ)......ವೇದಾಂತಮತದಲ್ಲಿ ಸತ್ಯವೂ ಸೌಂದರ್ಯವೂ ಪ್ರತ್ಯೇಕ ಪ್ರತ್ಯೇಕಗಳಲ್ಲ. ಎರಡೂ ಒಟ್ಟಿಗೆ ಆತ್ಮ ಚೈತನ್ಯದಲ್ಲಿ ಅಂತರ್ಗತಗಳಾಗುತ್ತವೆ. ಆತ್ಮದ ಒಂದು ಲಕ್ಷಣ ಸತ್; ಇನ್ನೊಂದು ಚಿತ್ ಎಂಬ ಜ್ಞಾನಶಕ್ತಿ, ಆದ್ದರಿಂದಲೇ ಪರಮಾತ್ಮ ವಸ್ತುವನ್ನು 'ಸಚ್ಚಿದಾನಂದ'ವೆಂದು ಹೇಳಿರುವುದು....."

ಸೌಂದರ್ಯದ ಚರ್ಚೆಯಲ್ಲಿ ಡಿ.ವಿ.ಜಿ.ಯವರು ಸೌಂದರ್ಯ ತ್ರಿಕೂಟವೆಂಬ ಪರಿಕಲ್ಪನೆಯನ್ನು ಬಳಸುತ್ತಾರೆ. ಇಲ್ಲಿ ಮೂರು ಬಗೆಯ ಸೌಂದರ್ಯಗಳ ಪ್ರಸ್ತಾಪವಿದೆ.

1. ಸೃಷ್ಟಿ ಸೌಂದರ್ಯ
2. ಕಲಾ ಕಲ್ಪಿತ ಸೌಂದರ್ಯ
3. ಜೀವ ಸಂಸ್ಕಾರ ಸೌಂದರ್ಯ

ಇವುಗಳಲ್ಲಿ ಒಂದನೆಯದು ಗುಡಿಯ ಹೊರಗಿನ, ಗುಡಿಗೆ ಹಿನ್ನೆಲೆಯಾಗಿರುವ ಪ್ರಕೃತಿ ವೈಭವ. ಎರಡನೆಯದು 'ಗುಡಿಯ ಒಳಗಿನ ಮನುಷ್ಯ ಕಲಾಪ್ರಭಾವ. ಗೋಪುರದ ಸಮವಾಯ ಶಿಲ್ಪ. ವಿಗ್ರಹಗಳ ಪೃಥಗಂಶ ಶಿಲ್ಪ'. ಮೂರನೆಯದು ಈ ತೆರದ ಪರಿಸರ ಮಹಿಮೆಯಿಂದ ಹುಟ್ಟತಕ್ಕದ್ದು. 'ಅದು ಜೀವ–ದೈವ ಸಮಾಗಮರೂಪವಾದದ್ದು, ತನಗಿಂತ ಮೇಲಿನದೊಂದುಂಟು; ತಾನು ಬಲ್ಲ ಪ್ರಪಂಚಕ್ಕಿಂತ ದೊಡ್ಡದೊಂದುಂಟು ಎಂಬುದನ್ನು ಮನುಷ್ಯ ಗ್ರಹಿಸಿ, ಆಶೆಯಿಂದ ಆ ದೊಡ್ಡದರ ಕಡೆಗೆ ಕೈಚಾಚುತ್ತಾನೆ....... ಹೀಗೆ ಜೀವನಯಾತ್ರೆಯೂ ತೆರೆದ ಕಣ್ಣುಳ್ಳಾತನಿಗೆ ಸೌಂದರ್ಯೋಪಾಸನೆಯಾಗುತ್ತದೆ". ಇದು ಡಿ.ವಿ.ಜಿ.ಯವರ ಸೌಂದರ್ಯಮೀಮಾಂಸೆ.

ಕೃಷ್ಣಯ್ಯನವರು ಡಿ.ವಿ.ಜಿ.ಯವರ ಚಿಂತನೆಯ ವಿಮರ್ಶೆಯನ್ನು ಹೀಗೆ ಮಾಡುತ್ತಾರೆ. "ಪಾಶ್ಚಾತ್ಯ ಭಾರತೀಯ ದೃಷ್ಟಿಗಳ ಸಮನ್ವಯ ಇಲ್ಲಿದೆ. ಶಿಷ್ಟಕಲೆ, ಪ್ರಾದಿಮ ಕಲೆ, ಜಾನಪದ ಕಲೆಗಳ ಪರಿಶೀಲನೆಯಿಂದ ಮೂಡಬಹುದಾಗಿದ್ದ

ಸಮಗ್ರ ವಿವೇಚನೆ ಇಲ್ಲಿಲ್ಲ. ಆದರೂ ಅವು ಈ ಸ್ಥೂಲ ಪರಿಕಲ್ಪನೆ ಹಾಗೂ ವಿವರಣೆಯಲ್ಲಿ ಅಂತರ್ಗತವಾಗಬಹುದು".

'ಅಮೂರ್ತತೆ ಮತ್ತು ಅಮೂರ್ತ ಕಲೆ' ಎಂಬ ಲೇಖನದಲ್ಲಿ ಅಮೂರ್ತಕಲೆಯನ್ನು ಕುರಿತು ಸಾಮಾನ್ಯವಾಗಿ ಜನರಲ್ಲಿರುವ ಅವಜ್ಞೆ, ತಿರಸ್ಕಾರಗಳನ್ನು ದೂರ ಮಾಡುವ ಪ್ರಯತ್ನ ಮಾಡಲಾಗಿದೆ. ಅಮೂರ್ತಕಲೆಯನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕು ಎಂಬುದನ್ನು ಅರ್ಥ ಮಾಡಿಸುವ ಪ್ರಯತ್ನ ಇಲ್ಲಿದೆ. ಅಮೂರ್ತತೆ ಎಂದರೇನು ಎಂಬುದನ್ನು ಮೊದಲು ವಿವರಿಸಿಕೊಳ್ಳಲಾಗಿದೆ. "ಅಮೂರ್ತಕ್ಕೆ ಎರಡು ಬಗೆಯ ಅರ್ಥಗಳಿವೆ. ಒಂದು : ಚಿನ್ಮಾತ್ರ ಗೋಚರ, ಕೇವಲ ಭಾವನಾರೂಪವಾದದ್ದು: ಆಕಾರ ರೂಪ ರಹಿತವಾದದ್ದು: ಮನಸ್ಸಿನಲ್ಲಿ ಸುಳಿಯುವ ಭಾವಗಳು ಇತ್ಯಾದಿ. ಸಾಹಿತ್ಯದಲ್ಲಿ ಹೆಚ್ಚು ರೂಢಿಯಲ್ಲಿರುವ ಅರ್ಥ ಇದು. (ಅಮೂರ್ತ ಅಥವಾ) ಯಾಬ್‌ಸ್ಟ್ರ್ಯಾಕ್ಟ್ ಎಂಬುದಕ್ಕೆ ಇನ್ನೊಂದು ಬಗೆಯ ಅರ್ಥವೂ ಇದೆ; ತಿರುಳು, ಸಂಗ್ರಹ, ಸಾರಾಂಶ, ಗೋಷ್ವಾರೆ, ಬೇರ್ಪಡಿಸು, ಎತ್ತಿ ತೆಗೆ ಎಂಬ ಅರ್ಥಗಳು. ಸಾಮಾನ್ಯವಾಗಿ ಸಾಹಿತ್ಯದಲ್ಲಿ ಈ ಶಬ್ದದ ಬಳಕೆ ಇಲ್ಲ. ವಾಣಿಜ್ಯ ವ್ಯವಹಾರಗಳಲ್ಲಿ ಉಂಟು.

ಕಲೆಯಲ್ಲಾದಾರೋ ಮೇಲಿನ ಎರಡೂ ಅರ್ಥಗಳೂ ಇವೆ. ಅಮೂರ್ತವಾದುದಕ್ಕೆ ಮೂರ್ತರೂಪ ಕೊಡುವುದು ಮತ್ತು ಮೂರ್ತವಾದದ್ದರ ಅಂದರೆ ದೃಗ್ಗೋಚರ ವಸ್ತುವಿನ ವಾಸ್ತವ ರೂಪ-ಆಕಾರವನ್ನು ತೆಗೆಯುತ್ತ, ನಾಶ ಪಡಿಸುತ್ತ ಸೂಚ್ಯವಾಗಿಯೋ ಅಲ್ಲವೋ ಅದರ ತಿರುಳು, ಅದರ ಕೇವಲ ರೂಪವನ್ನು ಮಾತ್ರ ಉಳಿಸುವುದು. ಈ ಎರಡರ ಅಂತರದಲ್ಲಿ ಬಗೆಬಗೆಯ ಪ್ರಮಾಣದಲ್ಲಿ ನಡೆಸಿದ ಪ್ರಯೋಗಗಳೂ, ಪರಿಣಾಮಗಳೂ ರಚನೆಗಳಲ್ಲಿ ಸೇರುತ್ತವೆ. ಅಮೂರ್ತಕಲೆಯಲ್ಲಿ ಈ ಅರಿವು ಅಗತ್ಯ". ಇದು ತೀರಾ ಆಧುನಿಕ ವಿಷಯವೇನಲ್ಲ, ಪ್ಲೇಟೋನ ಕಾಲದಿಂದಲೂ ಇದರ ಚರ್ಚೆ ಇದೆ.

ಮುಂದೆ ಅಮೂರ್ತಕಲೆಯ ಆಸ್ವಾದನೆಯ ಬಗ್ಗೆ ವಿವರಗಳಿವೆ. "ಅಮೂರ್ತಕಲೆಯ ಅರ್ಥ ಪರಿಭಾವನೆ, ಆಸ್ವಾದನೆಯಲ್ಲಿದೆ.....ಅಮೂರ್ತ ಚಿತ್ರ ಒಗಟಿನಂತೆ ಭಾಸವಾಗುವುದು ಸಹಜ. ಏಕೆಂದರೆ ಜೀವನವೂ ಈ ಸೃಷ್ಟಿಯೂ ಒಗಟೇ. ಕಲಾವಿದ ತಾನು ನಿಸರ್ಗದಲ್ಲಿ ಕಂಡ ರೂಪವರ್ಣ ವಿನ್ಯಾಸಗಳನ್ನು ತೋರುವುದಕ್ಕೆ ಅವುಗಳ ಸೃಷ್ಟಿಯ ಹಂತಗಳನ್ನು ತೋರುತ್ತಾನೆ. ಮೇಲು

ಮೇಲಿನ ರೂಪಕ್ಕಿಂತ ಅವುಗಳ ಆಂತರ್ಯಕ್ಕಿಳಿಯುವುದನ್ನು ಕಲಿಸುತ್ತಾನೆ". ಅಮೂರ್ತಕಲೆಗೆ ಉದಾಹರಣೆಯಾಗಿ ವಿವಿಧ ಬಗೆಯ ಸ್ತ್ರೀ ಶಿಲ್ಪಗಳನ್ನು ರಚಿಸಿದ ಹೆನ್ರಿಮೂರ್, ಕಪ್ಪುಸೂರ್ಯನನ್ನು ರಚಿಸಿದ ಆರ್.ಎಂ.ಹಡಪದ್, ನಿಸರ್ಗ ರೂಪಗಳನ್ನು ಆಧರಿಸಿ ಅಮೂರ್ತ ರೂಪಗಳನ್ನು ರಚಿಸಿದ ಮಾಂಡ್ರಿಯನ್, ತನ್ನ ಮೊಸಾಯಿಕ್ ರಚನಾ ವಿನ್ಯಾಸದಿಂದ ಅಮೂರ್ತಕಲೆಗೆ ಅಪಾರ ಕೊಡುಗೆ ನೀಡಿದ ಪಾಲ್ ಕ್ಲೀ ಇವರ ರಚನೆಗಳನ್ನು ಇಲ್ಲಿ ವಿವರಿಸಲಾಗಿದೆ. ಒಟ್ಟಿನಲ್ಲಿ ಕೊನೆಯಲ್ಲಿ ಕೃಷ್ಣಯ್ಯನವರು ಹೇಳುವಂತೆ "ಸೃಷ್ಟಿಯ ಅನಂತತೆಯ ಅನುಭವದಲ್ಲಿ ಅಮೂರ್ತಕಲೆಯೂ ಒಂದು ಭಾಗ. ರಸೋವೈಸಃ ಎನ್ನುವಲ್ಲಿ ಇದು ಹೊರಗೆ ಉಳಿಯುವುದಿಲ್ಲ".

'ವಿವಿಧ ಕಲೆಗಳ ನಡುವಣ ಸಂಬಂಧ' ಎನ್ನುವ ಲೇಖನದಲ್ಲಿ ಪ್ರಾರಂಭದಲ್ಲಿ ಕೃಷ್ಣಯ್ಯನವರು "ಏಕೋ ಏನೋ ಇತಿಹಾಸದುದ್ದಕ್ಕೂ ಕಾಣಬರುತ್ತಿದ್ದ ಆ (ಲಲಿತ ಕಲೆಗಳ ನಡುವಿನ) ಕೊಂಡಿ ಈ ಶತಮಾನದಲ್ಲಿ ಕಳಚಿದೆ" ಎಂಬ ವಿಷಯವನ್ನು ಪ್ರಸ್ತಾಪಿಸುತ್ತಾರೆ.

ಭಾರತೀಯ ಕಾವ್ಯಮೀಮಾಂಸಕರು ಎಲ್ಲ ಕಲೆಗಳ ತಿರುಳೂ ಒಂದೇ, ಅದು ರಸ ಎಂಬ ಅಭಿಪ್ರಾಯವನ್ನು ಹೊಂದಿದವರು. 'ಆಧುನಿಕ ಕಲಾ ವಿಮರ್ಶಕರು, ಸೌಂದರ್ಯ ಮೀಮಾಂಸಕರು ಕಲೆಯ ತಿರುಳಿನಷ್ಟೇ ಶರೀರಕ್ಕೂ ಅಂದರೆ ಮಾಧ್ಯಮಕ್ಕೂ ಮಹತ್ವ ನೀಡುತ್ತಾರೆ.

ಈ ಕೃತಿಯಲ್ಲಿ ಕಲೆಯಲ್ಲಿನ ಮುಖ್ಯ ವಿಷಯವಾದ 'ಸಂಯೋಜನೆ', ಪ್ರಾಚೀನ ಪಾಶ್ಚಾತ್ಯ ಮತ್ತು ಚೈನಾ ಜಪಾನ್ ರೇಖಾ ಚಿತ್ರಗಳು, ದೃಶ್ಯಕಲೆಯ ಒಲವು ನಿಲುವುಗಳು, ಕಲೆಯ ಸಂಕೀರ್ಣತೆ ಈ ವಿಷಯಗಳನ್ನು ಕುರಿತ ಲೇಖನಗಳಿವೆ. ಅನುಬಂಧದಲ್ಲಿ ಅಮೂರ್ತ ಚಿತ್ರಕಲೆಯ ಮೂರು ಪ್ರಾಯೋಗಿಕ ವಿಮರ್ಶಾಬರಹಗಳನ್ನು ಸೇರಿಸಲಾಗಿದೆ. ಒಟ್ಟಿನಲ್ಲಿ ಕಲಾವಿದರು, ಕಲಾಸಕ್ತರು ಓದಲೇಬೇಕಾದ ಕೃತಿ ಇದು.

******

## ಸಾಹಿತ್ಯ ಕಲೆ

ಈ ಕೃತಿಯು 2015ರಲ್ಲಿ ಅಂಕಿತ ಪುಸ್ತಕದಿಂದ ಪ್ರಕಟಗೊಂಡದ್ದು. ಕೃಷ್ಣಯ್ಯನವರು ಬರೆದ ಸಾಹಿತ್ಯಕಲೆಯನ್ನು ಕುರಿತ ಪ್ರಬಂಧಗಳ ಸಂಕಲನ ಇದು. " 'ಸಾಹಿತ್ಯ ಕಲೆ' ಎಂದಾಗ ಸಾಹಿತ್ಯವೆಂಬ ಕಲೆ ಎಂದೂ ಆಗುತ್ತದೆ. ಸಾಹಿತ್ಯ ಮತ್ತು ಲಲಿಕಲೆಗಳು ಎಂಬರ್ಥವು ಆಗುತ್ತದೆ..........ಸಾಹಿತ್ಯದಲ್ಲಿ ಆಸಕ್ತಿ ಇರುವವರು, ಕಲೆಗಳ ಬಗೆಗೂ ಆಸಕ್ತಿ ತೋರಿದರೆ, ಅವರಿಗೆ ಬೇರೊಂದು ಶ್ರೀಮಂತ ಅನುಭವ ಪ್ರಪಂಚ ತೆರೆದಿದೆ ಎಂದು ಮಾತ್ರ ಹೇಳಬಲ್ಲೆ" ಎಂದು ಕೃಷ್ಣಯ್ಯನವರು 'ಈ ಪುಸ್ತಕದ ಹಿನ್ನೆಲೆ' ಎಂಬ ತಮ್ಮ ಮಾತುಗಳಲ್ಲಿ ಹೇಳಿದ್ದಾರೆ. ಸಾಹಿತ್ಯ ವಿಷಯಕವಾದ ಹನ್ನೆರಡು ಪ್ರಬಂಧಗಳು ಮತ್ತು ಕಲೆಯ ವಿಷಯವನ್ನು ಕುರಿತ ಆರು ಟಿಪ್ಪಣಿಗಳನ್ನು ಒಳಗೊಂಡ ಕೃತಿ ಇದು. ಅನುಬಂಧದಲ್ಲಿ ಕೃಷ್ಣಯ್ಯನವರ ಬಗೆಗೆ ಡಾ.ಪಿ.ವಿ.ನಾರಾಯಣ ಅವರು ಬರೆದ ಲೇಖನ ಇದೆ ಮತ್ತು ಕೃಷ್ಣಯ್ಯನವರ ಜೀವನ ಪಥ ಮತ್ತು ಸಾಹಿತ್ಯ ಪಥಗಳ ಸಂಕ್ಷಿಪ್ತ ವಿವರಗಳಿವೆ.

'ಕಟ್ಟೀಮನಿ ಅವರ ಚಾರಿತ್ರಿಕ ಕಾದಂಬರಿಗಳ ಸ್ವರೂಪ' ಎಂಬ ಲೇಖನದಲ್ಲಿ ಪ್ರಾರಂಭದಲ್ಲಿ ಪಾಶ್ಚಾತ್ಯ ಚಾರಿತ್ರಿಕ ಕಾದಂಬರಿಯ ಬೆಳವಣಿಗೆಯನ್ನು ವಿವರಿಸಲಾಗಿದೆ. ಸ್ಕಾಟ್, ಕೂಪರ್, ಟಾಲ್‌ಸ್ಟಾಯ್ ಅವರ ಕಾದಂಬರಿರಚನೆಯ ರೀತಿ, ಆಲ್‌ಫ್ರೆಡ್ ವೀನಿ ಯ ವಿಧಾನ, ಫ್ಲಾಬರ್ಟ್‌ನ ಆಧುನೀಕರಣದ ಪ್ರಯತ್ನಗಳು ಇವುಗಳನ್ನು ವಿವರಿಸಲಾಗಿದೆ. (ಕೃಷ್ಣಯ್ಯನವರದೇ ಚಾರಿತ್ರಿಕ ಕಾದಂಬರಿ– ಸಮೀಕ್ಷೆ ಎಂಬ ಲೇಖನಮಾಲೆಯನ್ನು ಗಮನಿಸಬಹುದು.)

"ಕನ್ನಡದಲ್ಲಿ ಇದುವರೆಗೆ ಬಂದಿರುವ ಚಾರಿತ್ರಿಕ ಕಾದಂಬರಿಗಳಲ್ಲಿ ಬಹುಪಾಲು ಪಾಶ್ಚಾತ್ಯ ಚಾರಿತ್ರಿಕ ಕಾದಂಬರಿಗಳ ಬೆಳವಣಿಗೆಯ ಹಿನ್ನೆಲೆಯಲ್ಲಿ ನೋಡಿದಾಗ ಸತ್ವಹೀನವಾಗಿ ಕಾಣುತ್ತವೆ. ಆದರೂ ಚಾರಿತ್ರಿಕ ಕಾದಂಬರಿಯ ಕೆಲವಾದರೂ ಲಕ್ಷಣಗಳು ಅವುಗಳಲ್ಲಿ ಕಂಡುಬರುತ್ತವೆ" ಎಂದು ಗುರುತಿಸುತ್ತಾರೆ.

ಬಸವರಾಜ ಕಟ್ಟೀಮನಿಯವರ ಸಮರಭೂಮಿ(ನರಗುಂದ ಬಂಡಾಯ), ಪೌರುಷ ಪರೀಕ್ಷೆ, ಸಂಗೊಳ್ಳಿ ರಾಯನಾಯಕ ಈ ಮೂರು ಕಾದಂಬರಿಗಳ

ವಿಮರ್ಶೆ ಇಲ್ಲಿದೆ. "ಮೇಲಿನ ಮೂರು ಕಾದಂಬರಿಗಳಲ್ಲಿ ಕಟ್ಟೀಮನಿಯವರು ಸಂಸ್ಥಾನಗಳ ಸ್ವಾತಂತ್ರ್ಯಕ್ಕೆ ಚ್ಯುತಿ ಬಂದ ಸಂದರ್ಭದ ವಸ್ತುವನ್ನು ಆರಿಸಿಕೊಂಡಿರುವುದು ಗಮನಾರ್ಹ. ಆ ಮೂಲಕ ಇಂಗ್ಲೀಷರು, ಟಿಪ್ಪೂ ಇವರ ಧೋರಣೆಗಳಿಗೆ ವಿರುದ್ಧವಾಗಿ ಜನಸಾಮಾನ್ಯರ ದೇಶಾಭಿಮಾನ, ಸ್ವಾತಂತ್ರ್ಯಪ್ರೇಮ, ಆತ್ಮಗೌರವದ ಬದುಕನ್ನು ಬದುಕುವ ಇಚ್ಛಾಶಕ್ತಿಯನ್ನು ಚಿತ್ರಿಸಿರುವುದು ಗಮನಾರ್ಹ" ಎಂದು ಕೃಷ್ಣಯ್ಯನವರು ತಮ್ಮ ವಿಮರ್ಶೆಯಲ್ಲಿ ಹೇಳುತ್ತಾರೆ.

ಅಯ್ಯರ್ ಅವರು ರಚಿಸಿದ ಸಣ್ಣಕಥೆ, ಕೈಲಾಸಂ ಸ್ಮರಣೆ ಮತ್ತು ಮೃಚ್ಛಕಟಿಕವನ್ನು ಕುರಿತು ಒಂದು ಲೇಖನ ಇದೆ.

'ಕೆ.ಪಿ.ಪೂರ್ಣಚಂದ್ರ ತೇಜಸ್ವಿ' ಲೇಖನದಲ್ಲಿ ಕೃಷ್ಣಯ್ಯನವರು ತೇಜಸ್ವಿ ಮತ್ತು ಬಿ.ಜಿ.ಎಲ್. ಸ್ವಾಮಿಯವರ ವ್ಯಕ್ತಿತ್ವದಲ್ಲಿರುವ ಹೋಲಿಕೆಗಳನ್ನು ಗಮನಿಸುತ್ತಾರೆ. ಇದು ತುಂಬ ಸೂಕ್ತವಾದ ಹೋಲಿಕೆ ಅನ್ನಿಸುತ್ತದೆ. "ನವೋದಯ, ನವ್ಯ, ನವ್ಯೋತ್ತರ ಸಾಹಿತ್ಯಗಳ ಅವಧಿಯಲ್ಲಿ ಬರೆದರೂ ಸಂಪೂರ್ಣ ಭಿನ್ನವಾದ ಮೌಲ್ಯಗಳ ದೃಷ್ಟಿ ಮತ್ತು ಅಭಿವ್ಯಕ್ತಿಯ ಮಾರ್ಗವನ್ನು ಕಂಡುಕೊಂಡು ಪ್ರತ್ಯೇಕವಾಗಿ ನಿಲ್ಲುತ್ತಾರೆ ತೇಜಸ್ವಿ" ಎಂಬ ಇವರ ಮಾತು ಎಲ್ಲರೂ ಒಪ್ಪುವಂಥದ್ದು. ಮೂರು ದಶಕಗಳಲ್ಲಿ ತೇಜಸ್ವಿಯವರು ರಚಿಸಿದ ವಿವಿಧ ಕೃತಿಗಳ ಸಂಕ್ಷಿಪ್ತ ವಿಮರ್ಶೆ ಇಲ್ಲಿದೆ.

'ತೇಜಸ್ವಿ ಸಾಹಿತ್ಯ ಮತ್ತು ಕಲೆ' ಎಂಬ ಲೇಖನದಲ್ಲಿ 'ಕಲೆ' ಎಂಬ ಶಬ್ದವನ್ನು ವಿಶೇಷ ಸಂದರ್ಭದಲ್ಲಿ ಬಳಸಲಾಗಿದೆ. ............ ಒಂದು ಸಾಹಿತ್ಯ ಕೃತಿಯನ್ನು ಕಲೆಯ ದೃಷ್ಟಿಯಿಂದ ಪರಿಶೀಲಿಸುವುದು ಅಂದಾಗ ಅದರ ಅಂತಃಸತ್ವ, ಚಿಂತನೆ, ಆಂತರಿಕ ಉದ್ದೇಶಗಳು ಅಭಿವ್ಯಕ್ತಿ ಕ್ರಿಯೆಯಲ್ಲಿ ಪಡೆಯುವ ರೂಪ ಅಥವಾ ಅಭಿವ್ಯಕ್ತಿ ಸ್ವರೂಪ ಎಂಬರ್ಥದಲ್ಲಿ ಸ್ವೀಕರಿಸಬೇಕಾಗುತ್ತದೆ. ಇಲ್ಲಿ ತೇಜಸ್ವಿಯವರ ಸಾಹಿತ್ಯ ರಚನೆಯನ್ನು ಪಾಲ್‌ಕ್ಲೀ ಎಂಬ ಚಿತ್ರಕಲಾವಿದನ ಅಮೂರ್ತಕಲೆಗೆ ಹೋಲಿಸಿ ಕೃಷ್ಣಯ್ಯನವರು ವಿಮರ್ಶೆ ಮಾಡಿದ್ದಾರೆ. ಕಲಾವಿಮರ್ಶೆಯ ಪರಿಕರಗಳನ್ನು ಸಾಹಿತ್ಯವಿಮರ್ಶೆಯಲ್ಲಿ ಬಳಸುವುದು ಕೃಷ್ಣಯ್ಯನವರಿಗೇ ವಿಶಿಷ್ಟವಾದ ವಿಧಾನ.

'ಹೊಸಗನ್ನಡ ಕಾವ್ಯದಲ್ಲಿ ವಿನೋದ' ಎಂಬ ಲೇಖನದಲ್ಲಿ ಪ್ರಾರಂಭದಲ್ಲಿ ಕೃಷ್ಣಯ್ಯನವರು ನಗೆಯ ಮೂಲಚೂಲಗಳನ್ನು ಗಂಭೀರವಾಗಿ ಚರ್ಚಿಸಿದ್ದಾರೆ. 'ನಗುವಿಗೆ ಯಾವುದೇ ಬಗೆಯ ಜೈವಿಕ ಉದ್ದೇಶಗಳೂ ಇದ್ದಂತೆ ತೋರವುದಿಲ್ಲ. ಅದೊಂದು ಲಕ್ಷುರಿ ರಿಫ್ಲೆಕ್ಸ್. ನಗುವಿನ ಭಾವನಾತ್ಮಕ ಕಾರಣಗಳು, ಮನೋವೈಜ್ಞಾನಿಕ ಕಾರಣಗಳು ಮುಂತಾದವನ್ನು ವಿವರಿಸುತ್ತಾರೆ. ನವೋದಯ ಮತ್ತು ನವ್ಯ ಸಾಹಿತ್ಯದಲ್ಲಿ ಕಾಣಬರುವ  ವಿನೋದದ ಅಂಶಗಳನ್ನು ಅನೇಕ ಉದಾಹರಣೆಗಳನ್ನಿಟ್ಟುಕೊಂಡು ವಿವರಿಸುತ್ತಾರೆ. ಜೊತೆಗೆ ಈ ನಡುವೆ ಬದುಕಿನ ಒತ್ತಡಗಳಿಂದಾಗಿ ಹಾಸ್ಯ ಮನೋಭಾವವು ಹಿಂಜರಿಯುತ್ತಿರುವುದರ ಬಗ್ಗೆ ವಿಷಾದವನ್ನು ಸಹ ವ್ಯಕ್ತಪಡಿಸುತ್ತಾರೆ.

'ಕನ್ನಡದಲ್ಲಿ ಪ್ರವಾಸ ಸಾಹಿತ್ಯ' ಎಂಬ ಲೇಖನದಲ್ಲಿ ಪೀಠಿಕೆಯಲ್ಲಿ ಮನುಷ್ಯ ಏಕೆ ಪ್ರವಾಸ ಮಾಡುತ್ತಾನೆ ಎಂಬ ಪ್ರಶ್ನೆಯನ್ನು ಎತ್ತಿಕೊಂಡು ಕುವೆಂಪು, ಜಿ,ಎಸ್.ಶಿವರುದ್ರಪ್ಪ, ಜಾರ್ಜ್ ಮೂರ್, ಫ್ರಾನ್ಸಿಸ್ ಬೇಕನ್ ಮುಂತಾದವರು ಈ ಕುರಿತು ಹೇಳಿರುವ ಹೇಳಿಕೆಗಳನ್ನು ಉಲ್ಲೇಖಿಸುತ್ತಾರೆ. ಆರ್.ಎಲ್.ಸ್ಟೀವನ್‌ಸನ್ನನ ಮಾತು ಇವರಿಗೆ ಅಂತಿಮ ಎಂದು ತೋರಿದೆ. "ನನ್ನ ಮಟ್ಟಿಗೆ ಹೇಳುವುದಾದರೆ, ಎಲ್ಲಿಗಾದರೂ ಹೋಗಬೇಕೆಂದು ಪ್ರವಾಸ ಮಾಡುವುದಿಲ್ಲ. 'ಹೋಗು'ವುದು ನನಗೆ ಮುಖ್ಯ. ಪ್ರವಾಸಕ್ಕಾಗಿ ಪ್ರವಾಸ ಮಾಡುತ್ತೇನೆ. ಚಲಿಸುವುದು, ಹೋಗುವುದು ಮಹತ್ವದ್ದಾಗಿದೆ".

ಈ ಸ್ವಾರಸ್ಯಕರ ಪ್ರಸ್ತಾವನೆಯೊಂದಿಗೆ ಪ್ರವಾಸ ಸಾಹಿತ್ಯದ ರೀತಿ ರೂಪಗಳನ್ನು ಹಿನ್ನೆಲೆಯನ್ನು ಸಾಕಷ್ಟು ವಿವರಣಾತ್ಮಕವಾಗಿ ಪರಿಚಯಿಸುತ್ತಾರೆ. ನಂತರ ಅಮೆರಿಕವನ್ನು ಕುರಿತು ಕನ್ನಡದಲ್ಲಿ ಬಂದ ಕೆಲವು ಪ್ರವಾಸ ಕಥನಗಳಲ್ಲಿ ಕೆಲವು ಭಿನ್ನ ದೃಷ್ಟಿಕೋನವುಳ್ಳ ಪ್ರವಾಸ ಕಥನಗಳನ್ನು ಕುರಿತು ಚರ್ಚೆ ಮಾಡುತ್ತಾರೆ. ಬಿ.ಜಿ.ಎಲ್.ಸ್ವಾಮಿಯವರ 'ಅಮೆರಿಕದಲ್ಲಿ ನಾನು', ಡಾ.ಎಚ್.ಕೆ,ರಂಗನಾಥ್ ಅವರ 'ಪರದೇಶಿಯಾದಾಗ', ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ 'ಅಮೆರಿಕದಲ್ಲಿ ಗೊರೂರು', ಎ.ಎನ್.ಮೂರ್ತಿರಾಯರ 'ಅಪರ ವಯಸ್ಕನ ಅಮೆರಿಕಾ ಯಾತ್ರೆ', ವಿನಾಯಕರ 'ಇಂದಿಲ್ಲ ನಾಳೆ', ಸುಶೀಲ ಕೊಪ್ಪರ ಅವರ 'ಪಡುವಣ ಪತ್ರಮಾಲೆ', ಜಿ.ಎಸ್.ಶಿವರುದ್ರಪ್ಪನವರ 'ಅಮೆರಿಕಾದಲ್ಲಿ ಕನ್ನಡಿಗ', ಕೃಷ್ಣಾನಂದ ಕಾಮತರ 'ನಾನೂ ಅಮೆರಿಕೆಗೆ ಹೋಗಿದ್ದೆ', ಡಾ.ಪ್ರಭುಶಂಕರ ಅವರ 'ಅಮೆರಿಕಾದಲ್ಲಿ ನಾನು, ಶಾಂತಿ',

ಎಚ್.ಎಲ್.ನಾಗೇಗೌಡರ 'ನಾ ಕಂಡ ಪ್ರಪಂಚ' ಮತ್ತು ಹೊ.ಶ್ರೀನಿವಾಸಯ್ಯನವರ 'ಜಯಶ್ರೀ ಕಂಡ ಜಗತ್ತು' – ಈ ಪ್ರವಾಸ ಕಥನಗಳ ಕುರಿತು ವಿಮರ್ಶೆ ಇದೆ. "ಪ್ರವಾಸ ಸಾಹಿತ್ಯದಲ್ಲಿ ಅಂಕಿ ಅಂಶ ನೋಟ ದಾಖಲೆಗಳಿಗಿಂತ ಅನುಭವವನ್ನು ಅನುಭವವಾಗಿಯೇ ಮುಟ್ಟಿಸುವ ಕಥನ ಕಲೆಯುಳ್ಳ ಕೃತಿಗಳು ಉನ್ನತ ಮಟ್ಟದ್ದಾಗುತ್ತವೆ" ಎಂಬ ಮಾತು ಗಮನೀಯವಾದದ್ದು.

'ಕನ್ನಡ ಸಾಹಿತ್ಯದಲ್ಲಿ ಚರಿತ್ರೆ ಮತ್ತು ಪುರಾಣ' ಎಂಬ ಲೇಖನದಲ್ಲಿ ಕನ್ನಡ ಸಾಹಿತ್ಯದಲ್ಲಿ ಕಂಡು ಬರುವ ಪೌರಾಣಿಕ ಮತ್ತು ಐತಿಹಾಸಿಕ ಪ್ರಜ್ಞೆಗಳನ್ನು ಕುರಿತು ಪರಿಶೀಲಿಸಲಾಗಿದೆ.

ಶಾಸ್ತ್ರೀಯ ಸಂಗೀತದಲ್ಲಿ ಸಾಹಿತ್ಯ ಎಂಬ ಲೇಖನವು ಕಲಾಸಕ್ತರಲ್ಲಿ ಕುತೂಹಲ ಹುಟ್ಟಿಸುತ್ತದೆ. "ನಾವು ಬಳಸುವ ಶಬ್ದಗಳಿಗೆ ಅರ್ಥವಲ್ಲದೆ ಶ್ರವ್ಯ ಆಕಾರಗಳೂ ಇರುತ್ತವೆ. ಉಚ್ಚರಿತವಾದಾಗ ಅವುಗಳ ಶ್ರವ್ಯ ಆಕಾರ, ಅರ್ಥಕ್ಕಿಂತ ಭಿನ್ನವಾದ ಮಾಧುರ್ಯ ಅನುಭವಕ್ಕೆ ಬರುತ್ತದೆ. ಈ ಮಾಧುರ್ಯಕ್ಕೆ ಸ್ವರಾಕ್ಷರಗಳು ಮತ್ತು ವ್ಯಂಜನಗಳ ಕ್ರಮ, ಪುನರಾವೃತ್ತಿ ಇತ್ಯಾದಿ ಕಾರಣ ಇರಬಹುದು....... ಸಂಗೀತ ಕೃತಿಯೊಂದರ ರಚನೆಯಲ್ಲಿನ ಶಬ್ದಗಳ ಶ್ರವ್ಯ ಆಕಾರಕ್ಕೆ ಮಿತಿಯಿಲ್ಲ. ಸಂಗೀತಗಾರ ಇದನ್ನು ಬಲ್ಲ. ಅನಂತ ಶಬ್ದಭಂಡಾರದಿಂದ ಸಂಗೀತ ರಚನಕಾರ, ವಾಗ್ಗೇಯಕಾರ ತನಗೆ ಬೇಕಾದ ಶ್ರವ್ಯ ಆಕಾರಗಳುಳ್ಳ ಶಬ್ದಗಳನ್ನೆ ಆರಿಸಿಕೊಳ್ಳುತ್ತಾನೆ. ಸಂಗೀತ ರಚನೆಯಲ್ಲಿ ವಿವಿಧ ಅಳತೆ, ಆಕಾರ, ಉಚ್ಚಾರಣೆಗಳುಳ್ಳ ಶಬ್ದಗಳು ಅಗತ್ಯವನ್ನು ಪೂರೈಸುವಲ್ಲಿ ಮುಖ್ಯ". ಈ ವಿಷಯವು ಸಂಗೀತಪ್ರಿಯರಿಗೆ ಮುಖ್ಯವಾದ ವಿಷಯವಾಗುತ್ತದೆ. ಸಂಗೀತಗಾರರಿಗೆ ಶಬ್ದದ ಸಾಹಿತ್ಯ ದೃಷ್ಟಿಯ ಅರ್ಥಕ್ಕಿಂತ ಅದರ ಶ್ರವ್ಯ ಆಕಾರ ಮುಖ್ಯ. ಈ ಕಾರಣದಿಂದಾಗಿ ಸಂಗೀತಗಾರರಿಗೆ ಸಾಹಿತ್ಯ ಮತ್ತು ಶಬ್ದದ 'ಅರ್ಥ'ಗಳು ಅರ್ಥಹೀನ ಅನ್ನಿಸಬಹುದು. ಕೃಷ್ಣಯ್ಯನವರು ಉದಾಹರಣೆಯೊಂದರ ಮೂಲಕ ಈ ವಿಷಯವನ್ನು ಸ್ಪಷ್ಟ ಪಡಿಸುತ್ತಾರೆ. "ಆ ಕಾರಣವೇ ಬಿಥೋವನ್ ತನ್ನ ಪ್ರಕಾಶಕ ಸರಳ ಶಬ್ದವೊಂದನ್ನು ತೆಗೆದು ಅದೇ ಅರ್ಥವನ್ನು ಇನ್ನೂ ಶ್ರೀಮಂತವಾಗಿ ಹೇಳುವ ಕಾವ್ಯಮಯ ಶಬ್ದವನ್ನು ಹಾಕಿದ್ದಕ್ಕೆ ಆಕ್ಷೇಪಿಸಿದ್ದು. ಪ್ರಕಾಶಕನಿಗೆ ಶಬ್ದದ ಶ್ರವ್ಯ ಆಕಾರದ ಕಲ್ಪನೆ ಇರಲಿಲ್ಲ. ಶಬ್ದದ ಸಂಗೀತ ಮೌಲ್ಯದ ಅರಿವು ಇರಲಿಲ್ಲ".

ಶಾಸ್ತ್ರೀಯ ಸಂಗೀತದಲ್ಲಿ ಸಾಹಿತ್ಯದ ಸ್ಥಾನವೇನು? ಈ ಬಗ್ಗೆ ವಾಮನರಾವ್ ದೇಶಪಾಂಡೆಯವರು ತಮ್ಮ ಒಂದು ಲೇಖನದಲ್ಲಿ ಕೊಟ್ಟಿರುವ ಸೊಗಸಾದ ಉದಾಹರಣೆಯೊಂದನ್ನು ಲೇಖಕರು ಇಲ್ಲಿ ಉಲ್ಲೇಖಿಸಿದ್ದಾರೆ – "ವಿಮಾನ ಗಗನಕ್ಕೆ ಹಾರಲು ಒಂದು ನಿಲ್ದಾಣ ಅಗತ್ಯ. ವಿಮಾನ ನಿಲ್ದಾಣವೂ ಆಕರ್ಷಣೀಯ. ಉಪಾಹಾರ ಗೃಹ, ಅಂಗಡಿಗಳು, ಶೌಚಗೃಹ, ವಿಶ್ರಾಂತಿ ಕೊಠಡಿ ಇತ್ಯಾದಿಗಳಿಂದ ಉಪಯುಕ್ತ. ಆದರೆ ವಿಮಾನದ ಉದ್ದೇಶ ಹಾರಾಟ. ಮುಕ್ತ ಆಕಾಶದಲ್ಲಿ ಸಂಚಾರ: ವಿಮಾನ ನಿಲ್ದಾಣದಲ್ಲೆ ಆಕರ್ಷಿತವಾಗಿ ಉಳಿಯುವುದಲ್ಲ. ಶಾಸ್ತ್ರೀಯ ಸಂಗೀತದಲ್ಲಿ ಸಾಹಿತ್ಯದ ಕಾರ್ಯವೂ ಅಷ್ಟೆ, ಸಾಹಿತ್ಯವೇ ಗುರಿಯಲ್ಲ, ಅದೊಂದು ಭೂಮಿಕೆ, ಅಲ್ಲಿಂದ ಮುಂದಕ್ಕೆ ಸಂಗೀತ ಕ್ಷೇತ್ರದಲ್ಲಿ ಮುಕ್ತ ಹಾರಾಟ". ಈ ಶಕ್ತ ಉದಾಹರಣೆ ನೀಡಿ ಲೇಖಕರು ಹೀಗೆ ಮುಂದುವರಿಯುತ್ತಾರೆ – "ಸಾಹಿತ್ಯದಲ್ಲಾದರೆ ಕವಿ ಶಬ್ದಾರ್ಥವನ್ನು ಆಧರಿಸಿ ಶಬ್ದ ಪ್ರತಿಮೆಗಳನ್ನು ಸೃಷ್ಟಿಸುತ್ತಾನೆ. ಸಂಗೀತಗಾರ ಶ್ರವ್ಯ ಪ್ರತಿಮೆಗಳ ನಿರ್ಮಾಣಕ್ಕೆ ತೊಡಗಿದಂತೆ, ಸ್ವರ–ಲಯಗಳೇ ಪ್ರಧಾನವಾಗಿ ಸಾಹಿತ್ಯದ ಅರ್ಥ ಮರೆಯಾಗಿಬಿಡುತ್ತದೆ ......ಆದ್ದರಿಂದಲೇ ಸಾಹಿತ್ಯ ಯಾವುದೇ ಭಾಷೆಯಲ್ಲಿರಲಿ ರಸಿಕ ತಲ್ಲೀನನಾಗಿ ಅನುಭವಿಸುತ್ತಾನೆ". ನಮಗೆ ಗೊತ್ತಿಲ್ಲದ ಭಾಷೆಯ ಸಾಹಿತ್ಯವನ್ನು ಸವಿಯಲು ಸಾಧ್ಯವಿಲ್ಲ ಎಂಬುದನ್ನು ನೆನೆದಾಗ ಇಲ್ಲಿನ ತರ್ಕ ನಮಗೆ ಅರ್ಥವಾಗುತ್ತದೆ. ಒಟ್ಟಿನಲ್ಲಿ 'ಸಂಗೀತ ಮೌಲ್ಯ ಅನ್ವೇಷಣೆಯಲ್ಲಿ ಸಾಹಿತ್ಯ ಚಿಮ್ಮುಹಲಗೆ ಮಾತ್ರ, ಅನಂತರ ನಾದ ಪ್ರಪಂಚದಲ್ಲಿ ವಿಹಾರ' ಎಂಬುದನ್ನು ಈ ಲೇಖನ ಸ್ಪಷ್ಟಗೊಳಿಸುತ್ತದೆ.

ಮುಂದಿನ ಲೇಖನ 'ಪಾಶ್ಚಾತ್ಯ ಶಾಸ್ತ್ರೀಯ ಸಂಗೀತ : ಡಾ.ರಾಜಾರಾಮಣ್ಣ'. ಇದರಲ್ಲಿ ಖ್ಯಾತ ಅಣುವಿಜ್ಞಾನಿ ಡಾ.ರಾಜಾ ರಾಮಣ್ಣ ಅವರು ಪಿಯಾನೋ ವಾದನದಲ್ಲಿ ಪರಿಣಿತರಾಗಿದ್ದು. ಇವರ ವಾದನವನ್ನು ನಾಲ್ವಡಿ ಕೃಷ್ಣರಾಜ ಒಡೆಯರು ಮೆಚ್ಚಿದ್ದು, ಲಂಡನ್‌ನ ಟ್ರಿನಿಟಿ ಸಂಗೀತ ಕಾಲೇಜಿನಲ್ಲಿ ಸಂಗೀತಾಭ್ಯಾಸಕ್ಕೆ ಸ್ಕಾಲರ್‌ಷಿಪ್ ದೊರೆತದ್ದು, ಅರಸರೂ ಆರ್ಥಿಕ ನೆರವಿನ ಆದೇಶ ನೀಡಿದ್ದು. ಆದರೆ ಯುದ್ಧ ಪ್ರಾರಂಭವಾಗಿದ್ದರಿಂದ ಮತ್ತು ಒಡೆಯರ ನಿಧನದಿಂದ ರಾಜಾರಾಮಣ್ಣ ಅವರ ಆಸೆ ಕೈಗೂಡದೆ ಹೋದದ್ದು, ಮುಂದೆ ಸಂಗೀತ ಉಪಾಧ್ಯಾಯರಿಂದಲೇ ಹೋಮಿಬಾಬಾ ಅವರ

ಪರಿಚಯವಾಗಿದ್ದು, ಸಂಗೀತಗಾರರಾಗಬೇಕಿದ್ದ ರಾಜಾರಾಮಣ್ಣ ಭೌತವಿಜ್ಞಾನಿ, ಅಣುವಿಜ್ಞಾನಿಯಾದದ್ದು ಈ ಮನಮುಟ್ಟುವ ವಿವರಗಳನ್ನು ನೀಡಿದ್ದಾರೆ.

ರಾಜಾರಾಮಣ್ಣ ಅವರು 'ದಿ ಸ್ಟ್ರಕ್ಚರ್ ಆಫ್ ಮ್ಯೂಸಿಕ್ ಇನ್ ರಾಗ ಅಂಡ್ ವೆಸ್ಟರ್ನ್ ಸಿಸ್ಟಮ್ಸ್' ಎಂಬ ಕೃತಿ ರಚಿಸಿದ್ದಾರೆ. ಈ ಗ್ರಂಥದಲ್ಲಿ 16ನೇ ಶತಮಾನದ ಸಂಗೀತ ಶಾಸ್ತ್ರಕಾರ ವೆಂಕಟಮುಖಿಯ ಚಿಂತನೆಗಳಿಗೂ ಆಧುನಿಕ ಪಾಶ್ಚಾತ್ಯ ಸಂಗೀತಕ್ಕೂ ಹೋಲಿಕೆ ಇರುವುದನ್ನು ಕಂಡು, ರಾಜಾರಾಮಣ್ಣ ವೆಂಕಟಮುಖಿಯನ್ನು ಅತ್ಯಂತ ಆಧುನಿಕ ಎನ್ನುತ್ತಾರೆ. ಈ ಗ್ರಂಥವು 'ಕರ್ಣಾಟಕ ಸಂಗೀತವನ್ನು ವೈಜ್ಞಾನಿಕ ದೃಷ್ಟಿಯಿಂದಲೂ ವಿವರಿಸುವ ಅಪೂರ್ವ ಕೃತಿ' ಎಂದು ಎಂ.ಎಚ್.ಕೃಷ್ಣಯ್ಯನವರು ಗುರುತಿಸುತ್ತಾರೆ.

ಪ್ರೊ.ಕೆ,ಎಂ.ಸೀತಾರಾಮಯ್ಯ ಅವರ ವರ್ಜಿಲ್ ಕವಿಯ 'ಈನಿಯೆಡ್' ಮಹಾಕಾವ್ಯದ ಕನ್ನಡ ಗದ್ಯಾನುವಾದಕ್ಕೆ, 2006ರಲ್ಲಿ ಕೃಷ್ಣಯ್ಯನವರು ಬರೆದ ಹಿನ್ನುಡಿ ಇಲ್ಲಿ 'ಪಾಶ್ಚಾತ್ಯ ಪ್ರಾಚೀನ ಮಹಾಕಾವ್ಯಗಳು' ಎಂಬ ಹೆಸರಿನಿಂದ ಇಲ್ಲಿ ಸೇರಿದೆ. ಸುದೀರ್ಘವಾದ ಈ ಲೇಖನವು ಪಾಶ್ಚಾತ್ಯ ಕಾವ್ಯಗಳನ್ನು ಕುರಿತು ತಿಳಿಯಬಯಸುವವರಿಗ ಅತ್ಯಂತ ಉಪಯುಕ್ತವಾದ ಲೇಖನ.

'ನವೋದಯ ಕಲೆ'ಯನ್ನು ಕುರಿತು ಇಲ್ಲೊಂದು ಲೇಖನ ಇದೆ.

ಇದು ಚಿತ್ರಕಲೆಯನ್ನು ಕುರಿತ ಲೇಖನ. ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕುವೆಂಪು ಅವರು ಸ್ವಾತಂತ್ರ್ಯ ಪೂರ್ವದಲ್ಲಿ ರಚಿತವಾದ ಸಾಹಿತ್ಯವನ್ನು ನವೋದಯ ಸಾಹಿತ್ಯ ಎಂದು ಸೂಕ್ತವಾಗಿ ಕರೆದದ್ದನ್ನು ಕೃಷ್ಣಯ್ಯನವರು ಪ್ರಸ್ತಾಪಿಸುತ್ತಾರೆ. ನಂತರ ಚಿತ್ರಕಲೆಯನ್ನು ಕುರಿತು ಈ ಮಾತುಗಳನ್ನು ಹೇಳಿದ್ದಾರೆ – "ಪಾಶ್ಚಾತ್ಯ ಶಿಕ್ಷಣ, ಪಾಶ್ಚಾತ್ಯ ಚಿಂತನ ಪ್ರಭಾವಗಳ ಹಿನ್ನೆಲೆಯಲ್ಲಿ, ಸಮಾಜ ಬದಲಾಗುತ್ತ ಅರಮನೆ, ರಾಜರ ಆಸ್ಥಾನ, ಶ್ರೀಮಂತರ ವಾಡೆ, ಅಲಂಕಾರಿಕ ದೃಷ್ಟಿಗಳಿಂದ ಹೊರಳಿ, ಮಧ್ಯಮವರ್ಗ ಮುನ್ನೆಲೆಗೆ ಬರುತ್ತಿದ್ದ ಹಿನ್ನೆಲೆಯಲ್ಲಿ, ರೂಪುಗೊಂಡು ಪ್ರಕಟವಾದ ಕಲೆ 'ನವೋದಯದ ಕಲೆ'. ಕೆ.ವೆಂಕಟಪ್ಪ, ಕೆ,ಕೆ,ಹೆಬ್ಬಾರ್ ಮುಂತಾದ ಕಲಾವಿದರ ಚಿತ್ರಕಲೆಯ ಸ್ವರೂಪವನ್ನು ವಿವರಿಸುತ್ತಾರೆ. "ಹಿರಿಯ ಕಲಾವಿದರ ರಚನೆಗಳು ಬಹುವಾಗಿ ವಾಸ್ತವವಾದೀ ಅಕಾಡೆಮಿಕ್ ಶೈಲಿಯವು......ವರ್ಣಪ್ರಜ್ಞೆ, ಮಾಧ್ಯಮ ಪ್ರಜ್ಞೆಯನ್ನು ಇರುವ ಅವಕಾಶದಲ್ಲೇ ಮೆರೆದಿದ್ದಾರೆ. ಮುಂದಿನ ಹಂತದ ಪ್ರಯೋಗಗಳಿಗೆ ನವೋದಯ ಕಲೆ ಒಳ್ಳೆಯ

ಭೂಮಿಕೆ ಒದಗಿಸಿತು". ಚಿತ್ರಕಲೆಯ ಪರಿಭಾಷೆಯನ್ನು ಬಳಸಿಕೊಂಡು ಕೃಷ್ಣಯ್ಯನವರು ಬರೆಯುವ ವಿಮರ್ಶೆಯು ಅವರಿಗೆ ಕಲೆಯ ಬಗ್ಗೆ ಇರುವ ಶ್ರದ್ಧೆ ಮತ್ತು ಆಸಕ್ತಿಗಳನ್ನು ತೋರಿಸುತ್ತದೆ.

ಆಧುನಿಕ ತಂತ್ರಜ್ಞಾನವನ್ನು ಬಳಸುವ ಕಲೆಗಳಾದ ವಿಡಿಯೊಕಲೆ ಮತ್ತು ವಿಡಿಯೊ ಸ್ಥಾಪನಾಕಲೆಗಳ ಬಗ್ಗೆ ಇಲ್ಲಿ ಒಂದು ಲೇಖನ ಇದೆ. ಸಿನಿಮಾ ವೀಕ್ಷಣೆ ಮತ್ತು ವಿಡಿಯೊ ಕಲೆಯ ವೀಕ್ಷಣೆಯ ಅನುಭವದಲ್ಲಿರುವ ವ್ಯತ್ಯಾಸ ಹಾಗೂ ವಿಡಿಯೊ ಕಲೆಯ ಸೌಂದರ್ಯಶಾಸ್ತ್ರದ ರೀತಿನೀತಿಗಳನ್ನು ಕುರಿತು ಚರ್ಚೆ ಮಾಡಲಾಗಿದೆ.

ಪ್ರಾದಿಮ ಮಾನವ ಕಲೆ, ಕಲೆ ಮತ್ತು ಪರಿಕರ ಮಾಧ್ಯಮ, ಗಣಕ ಕಲೆ/ಡಿಜಿಟಲ್ ಕಲೆ ಮತ್ತು ಪ್ರಿಂಟ್ಸ್, ವಿ.ಬಾಲು ಅವರ ಕೊಲಾಜ್ ಕಲೆ, ಕಲೆ : ಪರಂಪರೆ ಮತ್ತು ವಿಜ್ಞಾನ, ಸ್ವೀಕರಣ ಕಲೆ, ಚರ್ಮ ಪ್ರಸಾಧನ ಕಲೆ ಈ ಕುರಿತು ಕೃಷ್ಣಯ್ಯನವರು ಬರೆದಿರುವ ಟಿಪ್ಪಣಿಗಳನ್ನು ಸೇರಿಸಿಕೊಳ್ಳಲಾಗಿದೆ.

ಅನುಬಂಧ 1ರಲ್ಲಿ ಪಿ.ವಿ.ನಾರಾಯಣ ಅವರು ಬರೆದಿರುವ 'ಕಲೆಗಳ ಸಂಬಂಧ ತಂತು' ಎಂ.ಎಚ್.ಕೃಷ್ಣಯ್ಯ ಎಂಬ ಲೇಖನ ಇದೆ. ಇದರಲ್ಲಿ "ಎಲ್ಲ ಲಲಿತಕಲೆಗಳ ಬಗೆಗಿನ ಪ್ರಮುಖ ಕೃತಿಗಳನ್ನೂ ಅವುಗಳ ತಾತ್ವಿಕತೆಯನ್ನೂ ಒಳಮುಟ್ಟಿ ಓದಿ ಅವುಗಳ ನಡುವಿನ ಸಂಬಂಧದ ಸ್ವರೂಪವನ್ನೂ ಕಂಡುಕೊಂಡಿರುವ ಕೃಷ್ಣಯ್ಯನವರು ಬರವಣಿಗೆಗೆ ತೊಡಗಿದಾಗ ಅವರ ಚಿತ್ತವು ಸ್ವರ್ಗದಿಂದ ಮರ್ತ್ಯಕ್ಕೆ, ದೇಶವಿದೇಶಗಳಲ್ಲಿ ಓಲಾಡುತ್ತದೆ" ಎಂದು ನಾರಾಯಣ ಅವರು ಉದ್ಗರಿಸುತ್ತಾರೆ.

ಈ ಕೃತಿಯ ಕೊನೆಯಲ್ಲಿ ಎಂ.ಎಚ್.ಕೃಷ್ಣಯ್ಯನವರ ವ್ಯಕ್ತಿವಿವರಗಳನ್ನು ನೀಡಲಾಗಿದೆ.

***

## ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ

ಇದು ಕೃಷ್ಣಯ್ಯನವರ ಪ್ರಸಿದ್ಧ ಕೃತಿ. ಬಿಎ ಐಚ್ಛಿಕ ಕನ್ನಡ ವಿದ್ಯಾರ್ಥಿಗಳು, ಕನ್ನಡ ಎಂಎ ವಿದ್ಯಾರ್ಥಿಗಳು, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕನ್ನಡ ವಿಷಯವನ್ನು ಆರಿಸಿಕೊಂಡವರು ಮತ್ತು ಭಾಷಾಶಾಸ್ತ್ರದಲ್ಲಿ ಆಸಕ್ತಿ ಇರುವವರು ಖುಷಿಯಿಂದ

ಓದುವ ಪುಸ್ತಕ ಇದು. ಎಂಟು ಮರುಮುದ್ರಣಗಳನ್ನು ಈ ಕೃತಿ ಕಂಡಿರುವುದು ಇದರ ಜನಪ್ರಿಯತೆಗೆ ಸಾಕ್ಷಿ.

ಭಾಷೆ ಎಂದರೇನು ಎಂಬ ಪ್ರಶ್ನೆಯನ್ನು ಮೊದಲಿಗೆ ಎತ್ತಿಕೊಂಡು ಹಾಕೆಟ್ ಎಂಬಾತ ಹೇಳಿರುವ ಭಾಷೆಯ ಏಳು ಲಕ್ಷಣಗಳನ್ನು ನಿರೂಪಿಸುತ್ತಾರೆ. ದ್ವಿರೂಪ, ಉತ್ಪಾದಕತೆ, ಯಾದೃಚ್ಛಿಕತೆ, ಅಂತರ್‌ವಿನಿಮಯಕ್ಷಮತೆ, ವಿಶಿಷ್ಟತೆ, ಪರ್ಯಾಯ ಬಳಕೆ, ಮತ್ತು ಸಾಂಸ್ಕೃತಿಕ ಪ್ರಸರಣ ಇವು ಈ ಏಳು ಲಕ್ಷಣಗಳು. 'ಮನುಷ್ಯ ಭಾಷೆಯ ಎಲ್ಲ ಲಕ್ಷಣಗಳೂ ಯಾವುದೇ ಮನುಷ್ಯೇತರ ಜೀವಿಯ ಭಾಷೆಗೆ ಇಲ್ಲ' ಎಂಬ ವಿಶಿಷ್ಟ ಅಂಶವನ್ನು ಇಲ್ಲಿ ಹೇಳಿದ್ದಾರೆ.

ಭಾಷೆಯ ಹುಟ್ಟಿನ ಬಗೆಗೆ ಇರುವ ವಿವಿಧ ವಾದಗಳನ್ನು ಪರಿಚಯಿಸಿದ್ದಾರೆ. ಭಾಷಾವಿಜ್ಞಾನ ಬೆಳೆದು ಬಂದ ಬಗೆ, ಇದರಲ್ಲಿರುವ ವಿವರಣಾತ್ಮಕವಾದ ಭಾಷಾವಿಜ್ಞಾನ, ತೌಲನಿಕ ಭಾಷಾವಿಜ್ಞಾನ, ಐತಿಹಾಸಿಕ ಭಾಷಾವಿಜ್ಞಾನ ಎಂಬ ಮೂರು ಬಗೆಗಳನ್ನು ಪರಿಚಯಿಸಿದ್ದಾರೆ. ಪ್ರಪಂಚದಲ್ಲಿರುವ ವಿವಿಧ ಭಾಷಾ ವರ್ಗಗಳನ್ನು ಸ್ಫುಟವಾಗಿ ಪರಿಚಯಿಸಿದ್ದಾರೆ. ಭಾಷೆಯ ವಂಶಗಳನ್ನು ಗುರುತಿಸುವ ರೀತಿಗಳ ಬಗ್ಗೆ ತಿಳಿಸಿದ್ದಾರೆ.

ದ್ರಾವಿಡ ಭಾಷೆಗಳನ್ನು ಕುರಿತು ವಿಸ್ತೃತವಾದ ವಿವರಣೆ ಇದೆ. ಸಂಸ್ಕೃತದಿಂದ ಬೇರೆ ಬೇರೆ ಪ್ರಾಕೃತ ಭಾಷೆಗಳು ಹುಟ್ಟಲು ದ್ರಾವಿಡ ಭಾಷೆಗಳು ಪ್ರಭಾವ ಬೀರಿದವು ಎಂಬ ಕುತೂಹಲಕರ ವಿಚಾರ ಇಲ್ಲಿದೆ.

ಕನ್ನಡ ಭಾಷೆಯ ಪ್ರಾಚೀನತೆ ಎಂಬ ಲೇಖನವು ಕನ್ನಡ, ಕರ್ಣಾಟ ಪದಗಳ ಇತಿಹಾಸವನ್ನು ಶೋಧಿಸುತ್ತದೆ. ಇಲ್ಲಿ ಕರ್ಣಾಟ ಪದನಿಷ್ಪತ್ತಿ ಬಹು ಆಸಕ್ತಿದಾಯಕವಾಗಿದೆ. "'ಕರ್ಣಾಟ' ಶಬ್ದದಿಂದ ಕನ್ನಡ ಬಂದಿರಲಾರದು. ತಮಿಳ್ ದ್ರಾವಿಡವಾದ ಹಾಗೆ ಕನ್ನಡವೆ ಕರ್ಣಾಟವಾಗಿರಬೇಕು. ಅಂದರೆ ಕನ್ನಡ ಶಬ್ದದ ಸಂಸ್ಕೃತೀಕರಣ ಕರ್ಣಾಟ ಎನ್ನಬಹುದು. ಕರುನಾಡು> ಕರ್ನಾಡು> ಕರ್ಣಾಟ (ರೇಫ ಇದ್ದಾಗ ನ–ಣ ಆಗುತ್ತದೆ ಸಂಸ್ಕೃತದಲ್ಲಿ. ಪುನ್ನಾಡು ಪುನ್ನಾಟವಾಗಿದೆ. ತಮಿಳಿನಲ್ಲಿ ಕರುನಾಡು, ಕರುನಾಡರ್ ಶಬ್ದಗಳಿವೆ. ಕರ್+ನಾಡು+ ಅಗಂ > ಕರ್‌ನಾಡಗಂ ಕರ್ನಾಟಕ ಎಂದಾಗಿರಬಹುದೆಂದು ವಿದ್ವಾಂಸರು ಊಹಿಸಿದ್ದಾರೆ". ಇಂತಹ ಸ್ವಾರಸ್ಯಕರ ವಿವರಗಳು ಇಲ್ಲಿವೆ.

'ಭಾಷೆ ಪ್ರಾಣಿಯಿಂದ ಮನುಷ್ಯನನ್ನು ಬೇರ್ಪಡಿಸಿದರೆ ಬರಹ ಬರ್ಬರನಿಂದ ನಾಗರಿಕನನ್ನು ಬೇರ್ಪಡಿಸುತ್ತದೆ'. ಕನ್ನಡ ಲಿಪಿಯ ವಿಕಾಸವನ್ನು ಕುರಿತ ಲೇಖನದಲ್ಲಿ ಭಾರತದಲ್ಲಿ ಬ್ರಾಹ್ಮೀ ಲಿಪಿಯಿಂದ ಕನ್ನಡ, ತಮಿಳು ಮತ್ತು ದೇವನಾಗರಿ ಲಿಪಿಗಳು ವಿಕಾಸಗೊಂಡ ರೀತಿಯನ್ನು ವಿವರಿಸಲಾಗಿದೆ.

ಕನ್ನಡ ವರ್ಣಮಾಲೆ, ಭಾಷೆಯ ಅವಸ್ಥಾಂತರಗಳು, ಕನ್ನಡ ಮತ್ತು ಉಪಭಾಷೆಗಳು, ಭಾಷೆಯ ಬೆಳವಣಿಗೆ : ಭಾಷಾ ವ್ಯತ್ಯಾಸ, ಭಾಷೆಯ ಬೆಳವಣಿಗೆ, ಅನ್ಯಭಾಷಾ ಸ್ವೀಕರಣ, ಭಾಷೆಯ ಬೆಳವಣಿಗೆ : ದೇಶ್ಯ ಶಬ್ದಗಳು, ಗ್ರಂಥಭಾಷೆ – ಆಡುನುಡಿ ಇವುಗಳ ಬಗ್ಗೆ ಸೋದಾಹರಣ ವಿವರಣೆ ಇಲ್ಲಿದೆ.

ಇಷ್ಟೇ ಅಲ್ಲದೆ ವ್ಯಾಕರಣಾಂಶಗಳು : ನಾಮಪದ, ಸರ್ವನಾಮಗಳು, ಗುಣವಾಚಕ, ಸಂಖ್ಯಾವಾಚಕಗಳು, ಕ್ರಿಯಾಪದಗಳು, ಅವ್ಯಯಗಳು – ಈ ವಿಚಾರಗಳ ಬಗ್ಗೆ ಕೂಡ ಕನ್ನಡ, ಸಂಸ್ಕೃತ ಮತ್ತು ಉಳಿದ ದ್ರಾವಿಡ ಭಾಷೆಗಳ ಜೊತೆ ತೌಲನಿಕವಾಗಿ ವಿವರಿಸಲಾಗಿದೆ.

ಒಟ್ಟಿನಲ್ಲಿ ಪ್ರೊ.ಎಲ್.ಎಸ್.ಶೇಷಗಿರಿರಾವ್ ಅವರು ಈ ಗ್ರಂಥದ ಬೆನ್ನುಡಿಯಲ್ಲಿ ಹೇಳಿರುವಂತೆ (ಈ ಕೃತಿ) 'ಕನ್ನಡ ಭಾಷೆ ನಡೆದು ಬಂದ ದಾರಿಯನ್ನು ಹಂತ ಹಂತವಾಗಿ ಗುರುತಿಸುತ್ತದೆ. ಲಿಪಿ, ಶಬ್ದಸಂಪತ್ತು, ವ್ಯಾಕರಣ ಎಲ್ಲ ಅಂಗಗಳ ಬೆಳವಣಿಗೆಯನ್ನು ಶಾಸ್ತ್ರೀಯವಾಗಿ ಚಾರಿತ್ರಿಕ ದೃಷ್ಟಿಯಿಂದ ಪ್ರೊ.ಕೃಷ್ಣಯ್ಯ ವಿವರಿಸುತ್ತಾರೆ. ಅಡಕತನ, ಖಚಿತತೆ, ಸ್ಫುಟತ್ವ ಇವು ಪ್ರೊ.ಕೃಷ್ಣಯ್ಯನವರ ನಿರೂಪಣೆಯ ಗುಣಗಳು'.

ಅಂದರೆ, ಕನ್ನಡ ಅಧ್ಯಯನಾಕಾಂಕ್ಷಿಗಳು ತುಂಬ ಇಷ್ಟಪಟ್ಟು ಓದಬಹುದಾದ ಉಪಯುಕ್ತ ಕೃತಿ ಕೃಷ್ಣಯ್ಯನವರ ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ.

******

**ಕಾವ್ಯಭಾಷೆ**

ಇದು 1990ರಲ್ಲಿ ಕೃಷ್ಣಯ್ಯನವರು ರಚಿಸಿದ, ಅಂಕಿತ ಪುಸ್ತಕವು ಪ್ರಕಟಿಸಿದ ಕೃತಿ. ಇಪ್ಪತ್ತು ಇಪ್ಪತ್ತೈದು ವರ್ಷಗಳ ಹರಹಿನಲ್ಲಿ ಬರೆದ ಲೇಖನಗಳಲ್ಲಿ ಹನ್ನೆರಡನ್ನು ಇಲ್ಲಿ ಆರಿಸಿದೆ ಎನ್ನುವ ಲೇಖಕರು ಪ್ರಾರಂಭದ

'ಒಂದು ಮಾತು'ವಿನಲ್ಲಿ ಭಾಷೆ ಮತ್ತು ಅಭಿವ್ಯಕ್ತಿಯನ್ನು ಕುರಿತು ಮನನೀಯ ವಿಷಯವೊಂದನ್ನು ಹೇಳಿದ್ದಾರೆ – "ಭಾಷೆಯ ಸ್ವಭಾವ, ವರ್ತನೆ ವಿಚಿತ್ರ. ಭಾಷೆಗೆ ಬಿಚ್ಚಿಡುವ ಸಾಮರ್ಥ್ಯವೂ ಇದೆ, ಬಚ್ಚಿಡುವ ಸಾಮರ್ಥ್ಯವೂ ಇದೆ. ದಿನನಿತ್ಯದ ವ್ಯಾವಹಾರಿಕ ಸಂಪರ್ಕ–ಸಂವಹನದ ಮಾಧ್ಯಮವಾಗಿಯೂ, ಕಾವ್ಯದಲ್ಲಿ ಅಭಿವ್ಯಕ್ತಿಯ ಭಾಷೆಯಾಗಿಯೂ ವರ್ತಿಸುವಲ್ಲಿ ಅದರ ಸ್ವಭಾವದ, ಶಕ್ತಿಯ ಅರಿವಾಗುತ್ತದೆ. ಎಲ್ಲ ಕಲೆಗಳಲ್ಲೂ ಅಭಿವ್ಯಕ್ತಿಯೇ ವಿಶಿಷ್ಟ ಭಾಷೆಯಾಗುತ್ತದೆ. ವ್ಯಕ್ತ ರೇಖೆ ಬಣ್ಣಗಳಾಚೆ, ಮಾತು ಶಬ್ದಗಳಾಚೆ ಕಣ್ಣು ಹರಿಯಬೇಕು ಕೃತಿಯ ಅನುಭವಕ್ಕೆ. ಅನುಭವವೆಂಬುದೇ ಒಂದು ಪ್ರಕ್ರಿಯೆ. ಮನಗತವಾಗದೆ ಅರ್ಥ ದಕ್ಕುವುದಿಲ್ಲ".

ಈ ಪ್ರಸ್ತಾವನೆಯು ಇಲ್ಲಿನ ಕಾವ್ಯ ಮತ್ತು ಭಾಷೆ, ಕಾವ್ಯ ಮತ್ತು ಅಭಿವ್ಯಕ್ತಿ ಸಂಬಂಧಗಳನ್ನು ಕುರಿತು ಬರೆಯಲ್ಪಟ್ಟ ಲೇಖನಗಳಿಗೆ ಸೂಕ್ತವಾದ ಮುನ್ನುಡಿಯಾಗಿದೆ.

**'ಪಂಪ:** ಒಂದು ಮರುಪರಿಶೀಲನೆ – ಆದಿಪುರಾಣ' ಲೇಖನದಲ್ಲಿ ಮನೋವಿಜ್ಞಾನದ ದೃಷ್ಟಿಯ ಪರಿಶೀಲನೆ ಇದೆ. ಆದಿಪುರಾಣದಲ್ಲಿ ವೃಷಭನಾಥನು ವಿವಿಧ ಭವಗಳಲ್ಲಿ ಭೋಗದ, ಕಾಮದ ಬೇರೆ ಬೇರೆ ಅವಸ್ಥೆಗಳನ್ನು ಅನುಭವಿಸಿ ನಂತರ ವೈರಾಗ್ಯದ ಕಡೆಗೆ ಚಲಿಸುತ್ತಾನಲ್ಲವೆ. ಇಲ್ಲಿ ಲೇಖಕರು ಕಾಮದೊಡನೆ ವೈರಾಗ್ಯವೂ ಹೇಗೆ ವೃಷಭದೇವನ ಮನಸ್ಸಿನಲ್ಲಿ ಬೆಳೆಯುತ್ತಿತ್ತು ಎಂಬ ವಿಚಾರದ ಕಡೆಗೆ ಓದುಗರ ಗಮನ ಸೆಳೆಯತ್ತಾರೆ. "ಹಿಂದಿನ ಹತ್ತು ಭವಗಳಲ್ಲಿಯೂ ಕಾಣದಂತಹ ಭೋಗದ ಅತ್ಯುಚ್ಚ ಸ್ಥಿತಿಯಲ್ಲಿ ವೃಷಭದೇವನಿದ್ದಾನೆ. ಇದುವರೆಗೆ ಕಾಮದಾಹವೆಂಬುದು ಮೆಟ್ಟಲು ಮೆಟ್ಟಲಾಗಿ ಏರುತ್ತ ನೀಳಾಂಜನೆಯ ನಾಟ್ಯ ಸನ್ನಿವೇಶದಲ್ಲಿ ಶಿಖರಸ್ಥಿತಿಯನ್ನು ಮುಟ್ಟುತ್ತದೆ...... ಕಾಮದಾಹದಂತೆ ಮನಸ್ಸಿನ ಅಜ್ಞಾತ ವಲಯದಲ್ಲೇ ಹಣ್ಣಾಗುತ್ತ ಬಂದಿದ್ದ ವೈರಾಗ್ಯ ಪ್ರವೃತ್ತಿ ತಟಕ್ಕನೆ ಕಳಚಿ ಬೀಳುತ್ತದೆ. (ಲೇಖಕರು ಇಲ್ಲಿ ಅಡಿಟಿಪ್ಪಣಿಯಲ್ಲಿ ಮನೋವಿಜ್ಞಾನದ ಪಿತಾಮಹ ಫ್ರಾಯ್ಡನು ಜೀವಿಗಳಲ್ಲಿ ಕಾಮಪ್ರವೃತ್ತಿಯ ಜೊತೆ ಜೊತೆಗೇ ಸಾವಿನ ಮೂಲಪ್ರವೃತ್ತಿಯೂ –ಇದನ್ನು ಫ್ರಾಯ್ಡ್ ಡೆತ್ ಇನ್‌ಸ್ಟಿಂಕ್ಟ್ ಎಂದು ಕರೆದಿದ್ದಾನೆ– ಮೌನವಾಗಿ ಬೆಳೆಯುತ್ತಾ ಬರುತ್ತದೆ ಎಂದು ಹೇಳಿರುವುದನ್ನು ಪ್ರಸ್ತಾಪಿಸುತ್ತಾರೆ). ದೃಷ್ಟಿಯುದ್ಧ, ಜಲಯುದ್ಧ, ಮಲ್ಲಯುದ್ಧಗಳ ನಂತರ ಬಾಹುಬಲಿಗೆ ಉಂಟಾಗುವ ವೈರಾಗ್ಯದ

ಪ್ರಸ್ತಾಪವೂ ಇಲ್ಲಿದೆ. "ಮನುಷ್ಯನ ಸುಪ್ತಮಾನಸದಲ್ಲಿರುವ ಇದ್ ಮತ್ತು ಲಿಬಿಡೊಗಳಂತೆ ವೈರಾಗ್ಯವೂ ಒಂದು ಸುಪ್ತಮೂಲಪ್ರವೃತ್ತಿಯೇ ಅಥವಾ ಭೋಗ ತ್ಯಾಗ ಮತ್ತು ಅಹಂತ್ಯಾಗಗಳ ನಂತರದ ಸಹಜಸ್ಥಿತಿಯೇ, ಶಾಂತ ವಿರಾಗ ಸ್ಥಿತಿಯೇ ಎಂಬುದು ಕುತೂಹಲಕಾರಿ ವಿಷಯ ......... ಆದಿಪುರಾಣ ಒಂದು ಧರ್ಮದ ಪುರಾಣ ಮಾತ್ರವಾಗದೆ ಮಾನವ ಧರ್ಮಸೂಕ್ಷ್ಮಗಳ ಮಹಾಕಾವ್ಯವಾಗುತ್ತದೆ".

'ವಚನಗಳಲ್ಲಿ ರೂಪಕ ಚಿತ್ರಗಳು' ಎಂಬ ಲೇಖನದಲ್ಲಿ ಕೃಷ್ಣಯ್ಯನವರು ತಮ್ಮ ಪ್ರಿಯವಾದ ರೀತಿಯ ವಿಮರ್ಶೆ ಮಾಡಿದ್ದಾರೆ. ಅಂದರೆ ಸಾಹಿತ್ಯ ವಿಮರ್ಶೆಯಲ್ಲಿ ಸಾಹಿತ್ಯಾನುಭವವನ್ನು ಕಂಡರಿಸುವಾಗ ಬೇರೆ ಕಲೆಗಳ ಅನುಭವವನ್ನು ಅದರಲ್ಲಿ ಮಿಳಿತಗೊಳಿಸುವುದು. ಈ ಸಾಲುಗಳನ್ನು ನೋಡಿ – "ವಚನಗಳು ಸಾಹಿತ್ಯದ ಒಂದು ರೂಪ ಎಂದಾಗ ಅದರ ಮಾಧ್ಯಮ ಭಾಷೆ. ಭಾವನೆಗಳ ಅಭಿವ್ಯಕ್ತಿಗೆ ಪ್ರಯತ್ನಿಸುವಾಗಲೂ ಕವಿ ಇತರ ಕಲೆಗಳ ಸೀಮಾರೇಖೆಯನ್ನು ಮೆಟ್ಟುತ್ತಾನೆ. ಇದು ಕಾವ್ಯಕ್ಷೇತ್ರಕ್ಕೆ ವಿಶಿಷ್ಟವಾದದ್ದೇನೂ ಅಲ್ಲ. ಕಲಾವಿದರೂ ಅಷ್ಟೇ. ಇತರ ಮಾಧ್ಯಮಗಳ ಕ್ಷೇತ್ರಕ್ಕೂ ಕಾಲಿಟ್ಟು ತಂದ ವಸ್ತುವಿಶೇಷವನ್ನು, ರಚನೆಯ ಅಂಶಗಳನ್ನು ತಮ್ಮ ಅಭಿವ್ಯಕ್ತಿಗೆ ಪೂರಕವಾಗಿಸಿಕೊಳ್ಳುತ್ತಾರೆ. ಸಾಹಿತಿಯು ಶಿಲ್ಪ ಸಂಗೀತ ಮತ್ತು ನೃತ್ಯಕ್ಷೇತ್ರಗಳಿಗೆ ಲಗ್ಗೆ ಹಾಕಬಹುದು. ಚಿತ್ರಗಾರ ನಾಟಕೀಯ ಸನ್ನಿವೇಶಗಳನ್ನು ಬಳಸಿಕೊಳ್ಳಬಹುದು. ಮೂಲತಃ ಅನುಭವಗಳನ್ನು ತೀವ್ರವಾಗಿ ಮುಟ್ಟಿಸಲು ಈ ಪರಸ್ಪರ ಸೀಮೋಲ್ಲಂಘನ ಹಿಂದಿನಿಂದಲೂ ಬಂದಿದೆ".

ಈ ಹಿನ್ನೆಲೆಯೊಂದಿಗೆ ಲೇಖಕರು ವಚನಸಾಹಿತ್ಯದಲ್ಲಿ ವಿಷುಯಲ್ಸ್‌ಗಳನ್ನು ಬಳಸಿಕೊಂಡಿರುವ ಬಗೆಯನ್ನು ಅಧ್ಯಯನ ಮಾಡಲು ಉಪಕ್ರಮಿಸುತ್ತಾರೆ. 'ಅಮೂರ್ತವಾದ ಸಂವೇದನೆಗಳನ್ನು, ಅತೀಂದ್ರಿಯ ಅನುಭವಗಳನ್ನು ಇಂದ್ರಿಯಗ್ರಾಹ್ಯವಾಗಿ ನಿರೂಪಿಸಬೇಕಾದಾಗ ಪ್ರತಿಮಾ ವಿಧಾನದ ಮಹತ್ವ ಹೆಚ್ಚು. ಇವು ಕಾವ್ಯಕ್ರಿಯೆಯ ಒಂದು ಅಂಗವಾಗಿ ನಡೆಯುವಂತಹವು, ಆಗುವಂತಹವು'. ಲೇಖಕರು ಮುಂದುವರಿದು ಕಾವ್ಯ ಪಂಥಗಳ ಚಳುವಳಿಯ ಕಾರಣವಾಗಿ ಪ್ರತಿಮೆಗಳ ಪ್ರಯೋಗ ಪಾಶ್ಚಾತ್ಯರ ಕೊಡುಗೆಯೇನೋ ಎಂಬ ಭಾವನೆ ಇದೆಯಾದರೂ ಇದು ಭಾರತೀಯ ಸಂವೇದನೆಗೆ ಹೊಸದಲ್ಲ ಎಂದು ನಿರೂಪಿಸಿದ್ದಾರೆ. ಉದಾಹರಣೆಗಾಗಿ ನಮ್ಮ ಋಷಿಗಳು ನೀಡಿರುವ ಈಶ್ವರನ

ರೂಪಕಲ್ಪನೆಯನ್ನು ವಿವರಿಸುತ್ತಾರೆ. ನಿಸರ್ಗದ ಎಲ್ಲ ಶಕ್ತಿಗಳೂ ಸೇರಿ ಈಶ್ವರನ ಪ್ರತಿಮೆ ರೂಪುಗೊಂಡಿದೆ! ನವ್ಯರು ಹೇಳುವ ವಸ್ತುಪ್ರತಿರೂಪವೂ ಪ್ರತಿಮಾವಿಧಾನದ ಇನ್ನೊಂದು ವಿಧಾನ ಅನ್ನುವುದು ಕೃಷ್ಣಯ್ಯನವರ ಅಭಿಮತ.

'ಬಿ.ಎಂ.ಶ್ರೀ ಅವರ ಹೊಂಗನಸುಗಳು' ಲೇಖನದಲ್ಲಿ ಬಿ.ಎಂ.ಶ್ರೀಕಂಠಯ್ಯನವರ ಸ್ವತಂತ್ರ ಕವನಗಳ ಚರ್ಚೆ ಇದೆ. 'ಜೀವನಚರಿತ್ರಕಾರರಾಗಿ ಡಿ.ವಿ.ಜಿ.' ಲೇಖನವಿದೆ.

'ಶಂ.ಬಾ.ಜೋಷಿಯವರ ವಿಚಾರಸಾಹಿತ್ಯ : ಸ್ಥೂಲನೋಟ' ಲೇಖನದಲ್ಲಿ 'ಜೋಷಿಯವರು ವೇದ ಮಂತ್ರಗಳನ್ನು ವ್ಯಾಖ್ಯಾನಿಸುವಲ್ಲಿ ಪರಂಪರೆಯ ಅರ್ಥವನ್ನು ಬಲ್ಲವರಾಗಿದ್ದು ವೈಜ್ಞಾನಿಕ ಸತ್ಯದ ಅರಿವಿನ ಎಚ್ಚರಿಕೆಯನ್ನು ವ್ಯಕ್ತ ಪಡಿಸುತ್ತಾರೆ. ವಿಚಾರ ಮಂಡನೆಯಲ್ಲಿ ಸರಳ ಭಾಷೆಯನ್ನು ಬಳಸಿದರೂ, ಆ ಭಾಷೆ ತುಂಬ ಖಚಿತ ನಿಖರ. ಅವರ ಕನ್ನಡವು ಸಂಸ್ಕೃತ ಪರಿಭಾಷೆಯಂತೆ ಭಾಸವಾಗುತ್ತದೆ. ಅದರಿಂದ ತತ್‌ಕ್ಷಣಕ್ಕೆ ತೊಡಕು ಎನಿಸಿದರೂ ಆಲೋಚಿಸಿದ ನಂತರ ಎಷ್ಟು ಅರ್ಥಯುಕ್ತ ಎನಿಸುತ್ತದೆ'. 'ಅಗ್ನಿ ದಿವ್ಯ ಮತ್ತು ಅಸಂತೋಷವೇ ಏಳ್ಗೆಯ ಮೂಲ'. ವೇದಮಂತ್ರಗಳಲ್ಲಿ ಹೇಳಿರುವ ಉತ್ತಮ ವಿಚಾರಗಳನ್ನು ಇವತ್ತಿನ ಜೀವನಕ್ಕೆ ಅನ್ವಯಿಸಬಹುದು ಎಂಬ ಚಿಂತನೆ ಇಲ್ಲಿದೆ.

'ಗೀತೆಯಲ್ಲಿ ವೈಶ್ವಾನರ ಅಗ್ನಿಯ ಪ್ರಸ್ತಾಪವಿದೆ. ವೈಶ್ವಾನರ ಅಗ್ನಿ ವಿಶ್ವದ ಎಲ್ಲ ಜೀವಿಗಳಿಗೆ ಸಂಬಂಧಪಟ್ಟುದು. 'ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ' ಎನ್ನುತ್ತದೆ ಗೀತೆ. ವೈಶ್ವ ದೇವ. ಆತನ ಉಪಾಸನೆ ಪ್ರತಿಯೊಬ್ಬನ ಕರ್ತವ್ಯ. ಅದು ಅಗ್ನಿಯಲ್ಲಿ ಹಾಕುವ ಆಹುತಿಗಳ ಯಾಂತ್ರಿಕ ಆಚರಣೆಯಲ್ಲ. ಅಗ್ನಿ ಅಂತರಂಗದಲ್ಲಿ ಪ್ರತಿಷ್ಠಾಪನೆಯಾಗಬೇಕು: ಅಂತರಂಗದಲ್ಲಿ ಯಜ್ಞಕ್ರಿಯೆ. ಅಗ್ನಿ ಪೂಜೆ – ಯಜ್ಞ – ಎಂದರೆ ಅಂತರಂಗದಲ್ಲಿ ಜ್ಯೋತಿಯನ್ನು ಬೆಳಗಿಸಿಕೊಳ್ಳುವುದು. ಅದಕ್ಕಾಗಿ ಸ್ವಾಧ್ಯಾಯ, ಆಭ್ಯಸನ, ವಿಚಾರ ಮಂಥನ.'

ಬಿ.ಎ.ಸನದಿಯವರ ಕವಿ ಕಾವ್ಯ ಕಲ್ಪನೆ ಎಂಬ ಲೇಖನದಲ್ಲಿ ಗೌರೀಶ ಕಾಯ್ಕಿಣಿಯವರು ಮಾನವ್ಯ ಕವಿ ಎಂದು ಗುರುತಿಸುವ ಸನದಿಯವರ ಕಾವ್ಯಚಿಂತನೆಯ ಕುರಿತು ಬರೆಯಲಾಗಿದೆ.

'ಮಗನಿಗೊಂದು ಪತ್ರ' ಲೇಖನದಲ್ಲಿ ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರ 'ಮಗನಿಗೊಂದು ಪತ್ರ' ಕವನವನ್ನು ವಿಶ್ಲೇಷಿಸಲಾಗಿದೆ. ಈ ಕವಿತೆಯಲ್ಲಿ 'ವಿದೇಶಕ್ಕೆ ವೃತ್ತಿಯೋ ಮತ್ತೊಂದೋ ಕಾರಣದಿಂದ ಹೋದ ಮಗನ ಬಗ್ಗೆ ಒಬ್ಬ ವ್ಯಕ್ತಿಯ, ಒಬ್ಬ ತಂದೆಯ ಸೂಕ್ಷ್ಮ ಮನಸ್ಸಿನ ಹಲವು ಬಗೆಯ ಯಾತನೆಗಳ ಅನುಭವ ದಾಖಲಾಗಿದೆ'.

'ವಿಶ್ವ ಸುತ್ತಿದ ಜಾಣ ಷಣ್ಮುಖನಿಗಿಂತಲೂ ವಿಶ್ವಾತ್ಮಗ್ರಾಹಿ ಗಣಪತಿಯೆ ಮುಖ್ಯ. ಬಾಹ್ಯ ಪರ್ಯಟನೆ, ಹೊರಗಿನ ಬದುಕು ಎಲ್ಲ ಸರಿ. ಬ್ರಹ್ಮಾಂಡದ ಸತ್ವ ಅಣುವಿನಲ್ಲೂ ಇದೆ ಎಂಬ ಈ ನೆಲದ ನಂಬಿಕೆ – ಷಣ್ಮುಖ ಬ್ರಹ್ಮಾಂಡ ಸುತ್ತಿದ, ಗಣಪತಿ ತಂದೆ ತಾಯಿಗಳನ್ನು ಸುತ್ತಿದ, ತಂದೆತಾಯಿ, ತವರು ಪರಂಪರೆಯನ್ನೆ ಸೂಚಿಸುತ್ತದೆ. ಅಲ್ಲೆ ವಿಶ್ವಾತ್ಮ ಇದೆ. ವಿಶ್ವಾತ್ಮವನ್ನು ಒಳಗೇ ಗ್ರಹಿಸಬಹುದು. ನಮ್ಮ ವೇದ ಉಪನಿಷತ್ಕಾಲದ ಋಷಿಗಳ ಸಾಧನೆ ಈ ಬಗೆಯದು. ತನ್ನ ಸಂಸ್ಕೃತಿಯ ಪರಿಸರಕ್ಕೆ 'ಬಾ ಮಗೂ ಅಲ್ಲೆ ನಿಲ್ಲದೆ ಮತ್ತೆ ಹಿಂದಕ್ಕೆ' ಎಂಬುದು ಒಂದು ನೆಲೆ. ಅಲ್ಲೆ, ಹೊರಕ್ಕೆ ನಿಲ್ಲದೆ ಒಳಕ್ಕೆ ಎಂಬುದು ಇನ್ನೊಂದು ನೆಲೆಯ ಸಾಧನೆ. ತಂದೆಯ ಕರುಳ ಕರೆ ಅದನ್ನು ಸಾಧಿಸಿ ಇದನ್ನು ಸಾಧಿಸು ಎನ್ನುತ್ತದೆ. ಇದಕ್ಕಾಗಿ ಈ ಪರಿಸರಕ್ಕೆ ಈ ಪರಂಪರೆಗೆ ಹಿಂದಿರುಗು ಎನ್ನುತ್ತದೆ.

ವಿದೇಶಕ್ಕೆ ಹೋದ ಎಲ್ಲ ಮಕ್ಕಳ ತಂದೆ ತಾಯಂದಿರ ಮಿಡುಕಾಟಕ್ಕೆ ಈ ಕವನ ಒಂದು ಉದಾಹರಣೆ.

******

## ಐತಿಹಾಸಿಕ ಕಾದಂಬರಿ ಒಂದು ಸಮೀಕ್ಷೆ

ಇದು ಪ್ರಕಟಿತ ಲೇಖನರೂಪದಲ್ಲಿ ಉಳಿದ ಗ್ರಂಥರೂಪ ತಳೆಯದೆ ಇರುವ ಬರವಣಿಗೆ.

'ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯದಲ್ಲಿ ಕಾದಂಬರಿಯ ಜನಪ್ರಿಯತೆ'ಯನ್ನು ಗುರುತಿಸುತ್ತಾ ಲೇಖಕರು 'ಒಂದು ಕಡೆ ಫ್ರಾನ್ಸಿನ ರೊಮ್ಯಾನ್ಸ್ ಇನ್ನೊಂದು ಕಡೆ ಇಟಲಿಯ ನೊವೆಲಾ ಇವುಗಳ ಪ್ರಭಾವಕ್ಕೆ ಒಳಗಾಗಿ ಕಾದಂಬರಿ, ಮುಖ್ಯವಾಗಿ ಐತಿಹಾಸಿಕ ಕಾದಂಬರಿ ಹೇಗೆ ವಿಕಾಸ ಹೊಂದಿತು' ಎಂಬುದನ್ನು ಗಮನಿಸಿದ್ದಾರೆ.

'ಐತಿಹಾಸಿಕ ಕಾದಂಬರಿ ಇಂಗ್ಲಿಷ್‌ನಿಂದ ಬಂದದ್ದು'. ಭಾರತದಲ್ಲಿ ಐತಿಹಾಸಿಕ ಕಾವ್ಯಗಳಿದ್ದರೂ ನಾವು ಖಚಿತವಾದ ಅರ್ಥದಲ್ಲಿ ಐತಿಹಾಸಿಕ ಕಾದಂಬರಿ ಎಂದು ಕರೆಯುವ ಸಾಹಿತ್ಯ ಪ್ರಕಾರವು ಇಂಗ್ಲಿಷ್‌ನಿಂದ ಬಂದದ್ದು ಎಂದು ಲೇಖಕರು ವಿವರಿಸುತ್ತಾರೆ. ಸಂಸ್ಕೃತದ ಆಖ್ಯಾಯಿಕೆ ಮುಂತಾದವುಗಳಲ್ಲಿ 'ಅಲಂಕಾರ ಮಾಲೆಗೆ ಸಿಕ್ಕಿ ಇತಿಹಾಸ ನೆಲಸಮ'ವಾದದ್ದನ್ನು ನೋಡಬಹುದು. ಪದ್ಯದಲ್ಲೂ ಚರಿತೆ ಎಂದು ಕರೆಸಿಕೊಳ್ಳುವ ಐತಿಹಾಸಿಕ ಕಾವ್ಯಗಳಿವೆ. 'ಆಖ್ಯಾಯಿಕೆಗಳಾಗಲಿ ಚರಿತೆಗಳಾಗಲಿ ಐತಿಹಾಸಿಕ ಕಾದಂಬರಿಯಂತಹ ಒಂದು ಸಾಹಿತ್ಯ ಪ್ರಕಾರವನ್ನು ಬೆಳೆಸಲಿಲ್ಲ. ಅವುಗಳ ಪ್ರಭಾವ ಯಾವ ರೀತಿಯಲ್ಲು ಗದ್ಯ ಸಾಹಿತ್ಯದ ಮೇಲೆ ಆಗಲಿಲ್ಲ'.

'ಪುರಾಣ ಮಾತ್ರ ಇದ್ದ ಇತಿಹಾಸ ಇರದಿದ್ದ' ಗ್ರೀಕ್ ಜನರ ಸಾಹಿತ್ಯದಲ್ಲಿ ಐತಿಹಾಸಿಕ ಕೃತಿಗಳನ್ನು ಹೋಲುವ ಕೃತಿಗಳನ್ನು ಲೇಖಕರು ಪರಿಚಯಿಸುತ್ತಾರೆ. ಪ್ರಾಚೀನ ಗ್ರೀಕ್ ಮತ್ತು ಲ್ಯಾಟಿನ್ ಎರಡೂ ಸಾಹಿತ್ಯ ಪರಂಪರೆಗಳಲ್ಲೂ 'ಐತಿಹಾಸಿಕ ಕಾದಂಬರಿಯಂತಹ ಗದ್ಯಕೃತಿಗಳ ರಚನೆ ಸಾಧ್ಯವಿರಲಿಲ್ಲ' ಎಂಬ ಅಭಿಪ್ರಾಯಕ್ಕೆ ಬರುತ್ತಾರೆ.

ಇಂಗ್ಲೆಂಡ್‌ನಲ್ಲಿ ಮಧ್ಯಕಾಲದಲ್ಲಿ ಉತ್ಪ್ರೇಕ್ಷೆ ಮುಖ್ಯವಾಗಿದ್ದ ಅನೇಕ ರಮ್ಯಕಥೆಗಳು ಸೃಷ್ಟಿಯಾದದ್ದನ್ನು ಇಲ್ಲಿ ಉದಾಹರಣೆಗಳೊಂದಿಗೆ ವಿವರಿಸಲಾಗಿದೆ. "ಇಂಗ್ಲೆಂಡಿನಲ್ಲಿ ಕ್ರಿ.ಶ. 14, 15. 16ನೆಯ ಶತಮಾನಗಳಲ್ಲಿ ಕಾಣಿಸಿಕೊಂಡು ಜನಪ್ರಿಯವಾಗಿದ್ದ ರಮ್ಯ ಕಥಾ ಸಾಹಿತ್ಯ ಐತಿಹಾಸಿಕ ಕಾದಂಬರಿಯ ಉಗಮಕ್ಕೆ ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಕಾರಣವಾಗಿದೆ". ಜಾನ್ ಲಿಲಿಯ ಯುಫ್ಯೂಸ್ ಕೃತಿ, ಸರ್ ಫಿಲಿಪ್ ಸಿಡ್ನಿಯ ಆರ್ಕೆಡಿಯಾ ಕೃತಿಗಳು ಐತಿಹಾಸಿಕ ಕಾದಂಬರಿಯ ಮೇಲೆ ಪ್ರಭಾವ ಬೀರಿದವು. ಸಂವೇದನಾತ್ಮಕ ಕಾದಂಬರಿ, ರಾಗಭಾವಾವಿಷ್ಟ ಕಾದಂಬರಿ, ಕೌಟುಂಬಿಕ ಕಾದಂಬರಿ, ಗಾಥಿಕ್ ಕಾದಂಬರಿ, ಭಯಾನಕ ಕಾದಂಬರಿ, ಸಾಮಾಜಿಕ ಕಾದಂಬರಿ, ರೋಮಾಂಚಕ ಪತ್ತೇದಾರಿ ಕಾದಂಬರಿ, ಮನೋವಿಶ್ಲೇಷಣಾತ್ಮಕ ಕಾದಂಬರಿ, ವೈಜ್ಞಾನಿಕ ಕಲ್ಪನೆಯ ಕಾದಂಬರಿ.....ಈ ಎಲ್ಲ ಹಂತಗಳನ್ನು ದಾಟಿದ ನಂತರ ಐತಿಹಾಸಿಕ ಕಾದಂಬರಿ ಹುಟ್ಟಿತು ಎಂದು ತಿಳಿಯುತ್ತದೆ. ಸಾವಿರಾರು ವರ್ಷಗಳ ವಿಫಲ ಪ್ರಯತ್ನದ ನಂತರ, ಹತ್ತೊಂಬತ್ತನೆಯ

ಶತಮಾನದ ಪ್ರಾರಂಭದಲ್ಲಿ ವಾಲ್ಟರ್ ಸ್ಕಾಟ್ ಐತಿಹಾಸಿಕ ಕಾದಂಬರಿಯ ಜನಕನಾಗಿ ಹೊರಹೊಮ್ಮುತ್ತಾನೆ.

ಈ ಲೇಖನದ ಎರಡನೇ ಭಾಗದಲ್ಲಿ ವಾಲ್ಟರ್ ಸ್ಕಾಟ್‌ನ ಕಾದಂಬರಿಗಳನ್ನು ಪರಿಚಯಿಸಲಾಗಿದೆ. ಶ್ರೇಷ್ಠ ಐತಿಹಾಸಿಕ ಕಾದಂಬರಿಕಾರನಾದ ಅವನ ಪ್ರತಿಭೆಯನ್ನು ಸ್ಕಾಟ್ಲೆಂಡಿಗೆ ಸಂಬಂಧಿಸಿದ ವೇವರ್ಲಿ ಕಾದಂಬರಿಗಳಲ್ಲಿ ಕಾಣಬಹುದು. ಅವನ ಪ್ರಭಾವವು ದೇಶವಿದೇಶಗಳ ಕಾದಂಬರಿಕಾರರ ಮೇಲೆ ಆಯಿತು. 'ಡ್ಯೂಮಾ, ಹ್ಯೂಗೊ, ಬಾಲ್ಜಾಕ್, ಫ್ಲಬರ್ಟ್, ಟಾಲ್‌ಸ್ಟಾಯ್, ಮ್ಯಾನ್‌ಜೊನಿ ಮೊದಲಾದವರು ಅವನಿಂದ ಪ್ರಭಾವಿತರಾಗಿ ತಮ್ಮ ತಮ್ಮ ಭಾಷೆಗಳಲ್ಲಿ ಐತಿಹಾಸಿಕ ಕಾದಂಬರಿಗಳನ್ನು ರಚಿಸಿದರು'.

ಈ ಲೇಖನದ ಮೂರನೆಯ ಭಾಗದಲ್ಲಿ ಸ್ಕಾಟ್‌ನ ನಂತರದ ಐತಿಹಾಸಿಕ ಕಾದಂಬರಿಕಾರರನ್ನು ಪರಿಚಯಿಸಲಾಗಿದೆ. ಸ್ಕಾಟ್‌ನ ನಂತರ ದೊಡ್ಡ ಹೆಸರೆಂದರೆ ಚಾರ್ಲ್ಸ್ ಡಿಕನ್ಸ್. ಇವನು ಸ್ವಭಾವತಃ ಐತಿಹಾಸಿಕ ಕಾದಂಬರಿಕಾರನಲ್ಲದಿದ್ದರೂ ಐತಿಹಾಸಿಕ ಕಾದಂಬರಿಯ ವಿಕಾಸದಲ್ಲಿ ಇವನ ಕಾದಂಬರಿಗಳು ಮೈಲಿಗಲ್ಲಾಗಿವೆ ಎಂದು ಲೇಖಕರು ಗುರುತಿಸಿದ್ದಾರೆ. 1841ರ 'ಬಾರ್ನ್‌ಬಿ ರಡ್ಜ್', 1859ರ 'ಎ ಟೇಲ್ ಆಫ್ ಟೂ ಸಿಟೀಸ್' ಇವೆರಡು ಅವನ ಹೆಸರಾಂತ ಐತಿಹಾಸಿಕ ಕಾದಂಬರಿಗಳು. ಇನ್ನೊಬ್ಬ ಮುಖ್ಯ ಐತಿಹಾಸಿಕ ಕಾದಂಬರಿಗಕಾರನೆಂದರೆ ಥ್ಯಾಕರೆ. ಅವನ 1852ರ 'ದ ಹಿಸ್ಟರಿ ಆಫ್ ಹೆನ್ರಿ ಎಸ್ಮಂಡ್' ಎಂಬ ಐತಿಹಾಸಿಕ ಕಾದಂಬರಿ ಮಹೋನ್ನತ ಕೀರ್ತಿ ಗಳಿಸಿದೆ. "ಥ್ಯಾಕರೆ ಪ್ರಥಮ ಬಾರಿಗೆ ಐತಿಹಾಸಿಕ ವಿಷಯಗಳನ್ನು, ವಿವರಗಳನ್ನು ಅತ್ಯಂತ ಕ್ರಮಬದ್ಧವಾಗಿ ಜೋಡಿಸಿ ಐತಿಹಾಸಿಕ ಕಾದಂಬರಿ ರಚಿಸವುದನ್ನು ರೂಢಿಗೆ ತಂದನು. ಬಹುಶಃ ಈ ಬಗ್ಗೆ ಮತ್ತಾರೂ ಅವನನ್ನು ಮೀರಿಸಿಲ್ಲ ಎನ್ನಬಹುದು". ಅವನ ಇನ್ನೊಂದು ಐತಿಹಾಸಿಕ ಕಾದಂಬರಿ 1859ರ ದಿ ವರ್ಜಿನಿಯನ್ಸ್. ಇದರಲ್ಲಿ ಎಸ್ಮಂಡನ ಮೊಮ್ಮಕ್ಕಳ ಕಥೆ ಇದೆ. ಸಾಮಾಜಿಕ ಕಾದಂಬರಿಕಾರ್ತಿಯಾಗಿ ಯಶಸ್ಸು ಕಂಡ ಜಾರ್ಜ್ ಎಲಿಯೆಟ್ ತನ್ನ ಐತಿಹಾಸಿಕ ಕಾದಂಬರಿ ರೊಮೋಲಾದಲ್ಲಿ ಯಶಸ್ಸು ಕಾಣದೆ ಹೋದದ್ದು ಸಹ ಇಲ್ಲಿ ದಾಖಲಾಗಿದೆ.

ಈ ಲೇಖನದ ನಾಲ್ಕನೆಯ ಭಾಗದಲ್ಲಿ ಫ್ರಾನ್ಸ್ ದೇಶದಲ್ಲಿ ಐತಿಹಾಸಿಕ ಕಾದಂಬರಿಯು ಬೆಳೆದು ಬಂದ ಬಗೆಯನ್ನು ಚರ್ಚಿಸಲಾಗಿದೆ. ಇಲ್ಲಿ ನಡೆದ ಮೊದಲ ಪ್ರಯತ್ನವೆಂದರೆ ಆಲ್‌ಫ್ರೆಡ್ ಡಿ ವೀನಿ ರಚಿಸಿದ 'ಸಿಂಕ್ ಮಾರ್ಸ್'.

ಇವನ ನಂತರ ಮುಖ್ಯನೆನಿಸಿಕೊಂಡ ವಿಕ್ಟರ್ ಹ್ಯೂಗೋನ ಕೃತಿಗಳ ಕುರಿತೂ ಇಲ್ಲಿ ವಿವರಗಳಿವೆ.

ಲೇಖನದ ಮುಂದಿನ ಭಾಗವು ಕೃಷ್ಣಯ್ಯನವರ ಮುದ್ದಾದ ಕೈಬರಹದಲ್ಲಿದೆ. ಈ ಭಾಗದಲ್ಲಿ ಐತಿಹಾಸಿಕ ಕಾದಂಬರಿಯು ಫ್ರಾನ್ಸ್‌ನಲ್ಲಿ ಬೆಳೆದ ರೀತಿಯನ್ನು ವಿವರಿಸಲಾಗಿದೆ.

ಇಲ್ಲಿನ ಉಪಸಂಹಾರವು ಮುಖ್ಯವಾದುದು. ಅದು ಹೀಗಿದೆ. "ಇಂಗ್ಲೆಂಡ್‌ನಲ್ಲಿ ಪ್ರಾರಂಭವಾದ ಐತಿಹಾಸಿಕ ಕಾದಂಬರಿ ಹೀಗೆ ಫ್ರಾನ್ಸಿನಲ್ಲಿ ಕವಲೊಡೆದುದು ಗಮನಾರ್ಹವಾಗಿದೆ. ಸ್ಕಾಟ್, ಡ್ಯೂಮರದು ಕ್ಲಾಸಿಕಲ್ ಮಾರ್ಗವಾದರೆ, ವೀನಿ ಫ್ಲಾಬರ್ಟ್‌ರದು ಆಧುನಿಕ ಮಾರ್ಗವಾಯಿತು. ಐತಿಹಾಸಿಕ ಕಾದಂಬರಿಯಲ್ಲಿ ವಸ್ತುನಿಷ್ಠತೆಯೇ ಮುಖ್ಯವಾದುದು ಎಂಬ ಭಾವನೆ ಆತ್ಮನಿಷ್ಠತೆಗೆ ಎಡೆ ಮಾಡಿಕೊಟ್ಟಿತು. ಐತಿಹಾಸಿಕ ಕಾದಂಬರಿಯ ಮೂಲೋದ್ದೇಶಕ್ಕೆ ಆಧುನೀಕರಣ ಸಿದ್ಧಾಂತದಿಂದ ಧಕ್ಕೆ ಬಂದರೂ, ಸಾರ್ವಕಾಲಿಕ ಸತ್ಯ ನಿರೂಪಣೆಗೆ, ಅತ್ಯಂತ ಜಟಿಲವಾದ ಸಂಕೀರ್ಣವಾದ ಆಧುನಿಕ ಯುಗದ ಅನುಭವಗಳನ್ನು, ಚಿಂತನೆಯನ್ನು ಅಭಿವ್ಯಕ್ತಿಗೊಳಿಸಲು ಅದು ಮಾಧ್ಯಮವಾಯಿತು".

ಹೀಗೆ ಕೃಷ್ಣಯ್ಯನವರು ಐದು ಲೇಖನಗಳಲ್ಲಿ ಪಾಶ್ಚಾತ್ಯ ಐತಿಹಾಸಿಕ ಕಾದಂಬರಿಯ ಬೆಳವಣಿಗೆಯನ್ನು ಹಂತಹಂತವಾಗಿ ವಿವರಿಸಿದ್ದಾರೆ. ಈ ಲೇಖನಮಾಲೆಯನ್ನು ಮುಂದುವರಿಸುವ ಉದ್ದೇಶ ಅವರಿಗಿದ್ದಂತೆ ತೋರುತ್ತದೆ. ಕಾರಣಾಂತರಗಳಿಂದ ಇದು ಸಾಧ್ಯವಾಗಿಲ್ಲ.

****

## ಅಜಂತಾ, ಎಲ್ಲೋರ, ಎಲಿಫೆಂಟಾ

ಇದು ಲೋಕ ಶಿಕ್ಷಣ ನಿರ್ದೇಶನಾಲಯವು ನವಸಾಕ್ಷರರಿಗಾಗಿ ತಯಾರಿಸಿದ ಪುಸ್ತಕ ಮಾಲೆಯ ಭಾಗವಾಗಿ ಕೃಷ್ಣಯ್ಯನವರು ರಚಿಸಿದ ಪುಟ್ಟ ಪುಸ್ತಕ. ಈಗ ತಾನೇ ಓದಲು ಕಲಿತ ವಯಸ್ಕರಿಗಾಗಿ ದಪ್ಪ ಅಕ್ಷರಗಳಲಿ ಮುದ್ರಿಸಿದ, ಸೂಕ್ತ ಚಿತ್ರಗಳಿರುವ ಪುಸ್ತಕ ಇದು. ಅಜಂತ, ಎಲ್ಲೋರ ಮತ್ತು ಎಲಿಫೆಂಟಾಗಳಿಗೆ ಕೈಗೊಳ್ಳುವ ಪ್ರವಾಸ 'ಕೇವಲ ಪ್ರವಾಸವಲ್ಲ, ಕಲೆಯ ಯಾತ್ರೆ' ಎಂದು ಇಲ್ಲಿ ವರ್ಣಿಸಲಾಗಿದೆ. ಈ ಮೂರೂ ದೇವಾಲಯಗಳ ಶಿಲ್ಪಕಲಾವೈಭವವನ್ನು ಸರಳವಾಗಿ, ಹಂತ ಹಂತವಾಗಿ ಇಲ್ಲಿ ವಿವರಿಸಲಾಗಿದೆ.

## ಜೀವನ ಚರಿತ್ರೆಗಳು

### ತ್ಯಾಗಯೋಗಿ

ಇದು ಹನ್ನೆರಡು ಅಚ್ಚುಕಟ್ಟಾದ ಆಧ್ಯಾಯಗಳಲ್ಲಿ ಅರಳಿರುವ ಪುಸ್ತಕ.

ಕನಕಪುರದ ಶಿಕ್ಷಣ ಕ್ಷೇತ್ರಕ್ಕೆ ಮರೆಯಲಾಗದ ಕೊಡುಗೆ ಕೊಟ್ಟ ಶ್ರೀ ಎಸ್.ಕರಿಯಪ್ಪನವರ ಜೀವನ, ಸಾಧನೆಗಳ ಪರಿಚಯ ಮಾಡುವ ಕೃತಿ ತ್ಯಾಗಯೋಗಿ. ಈ ಪುಸ್ತಕದ ಪ್ರಾರಂಭ ತುಂಬ ಆಸಕ್ತಿದಾಯಕವಾಗಿದೆ. 'ಬೆಳೆಯುವ ಸಿರಿ ಮೊಳಕೆಯಲ್ಲಿ' ಎಂಬ ಗಾದೆಮಾತನ್ನು ನೆನಪಿಸುವ ಭಾಗ ಇದು.

ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಪ್ರೊ.ವಾಡಿಯಾರವರು ಬಿ.ಎ. ಕೊನೆಯ ವರ್ಷದ ತಮ್ಮ ಆತ್ಮೀಯ ಶಿಷ್ಯರಿಗೆ ಪ್ರಬಂಧ ಬರೆಯಲು ಕೊಟ್ಟ ವಿಷಯ 'ವಿದ್ಯಾಭ್ಯಾಸದ ನಂತರ ನಿಮ್ಮ ಗುರಿ ಮತ್ತು ಆಶೋತ್ತರಗಳು'. ವಿದ್ಯಾರ್ಥಿಗಳಲ್ಲಿ ಕನಕಪುರದ ಎಸ್.ಕರಿಯಪ್ಪನವರೂ ಒಬ್ಬರು. ಅವರು ಬರೆದ ಪ್ರಬಂಧದ ಸಾರಾಂಶ ಹೀಗಿದೆ.

"ನಾನು ವಿದ್ಯಾಭ್ಯಾಸ ಮುಗಿಸಿ ಪದವಿ ಪಡೆದ ಮೇಲೆ ನನ್ನೂರಿಗೆ ಹೋಗುತ್ತೇನೆ. ನನ್ನ ತಾಲೂಕಿನಲ್ಲಿ ನೂರಾರು ಹಳ್ಳಿಗಳಿವೆ. ಇಲ್ಲಿಯ ಜನರು ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ತುಂಬ ಹಿಂದುಳಿದಿದ್ದಾರೆ. ಅನಕ್ಷರತೆ ಮೂಢನಂಬಿಕೆ ಬಡತನ ಹಾಸುಹೊಕ್ಕಾಗಿ ಜನರು ಬದಲಾವಣೆ ಕಾಣದೆ ಮೂಕರಾಗಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಶಾಲೆಗಳು

ಇಲ್ಲದೆ ಹಳ್ಳಿಯ ಮಕ್ಕಳು ವಿದ್ಯೆಯಿಂದ ವಂಚಿತರಾಗಿದ್ದಾರೆ. ಗ್ರಾಮಾಂತರ ಪ್ರದೇಶ ನೂರಾರು ವರ್ಷಗಳಿಂದ ಪ್ರಗತಿ ಕಾಣದೆ ಅಂಧಕಾರದಲ್ಲಿಯೇ ಉಳಿದುಹೋಗಿದೆ. ವಿದ್ಯೆ ಕೆಲವೇ ಜನರ ಸ್ವತ್ತಾಗಿದ್ದು ಬಡವರು ದೀನದಲಿತರ ಕೈಗೆ ಎಟುಕದ ಗಗನಕುಸುಮವಾಗಿದೆ. ನನ್ನ ಈ ಹಳ್ಳಿಗಳ, ಅಲ್ಲಿನ ನನ್ನ ಜನರ ಹೀನಸ್ಥಿತಿಯನ್ನು ಕಣ್ಣಾರೆ ಕಂಡಿರುವ ನನಗೆ ನೋವು ಉಂಟಾಗಿದೆ. ನಮ್ಮ ಗ್ರಾಮಾಂತರ ಪ್ರದೇಶದ ಜನ ತಂಬ ಹಿಂದುಳಿದಿದ್ದು ಎಲ್ಲರಂತೆ ತಲೆಯೆತ್ತಲು ಹಾತೊರೆಯುತ್ತಿದ್ದಾರೆ. ಆದ್ದರಿಂದ ಇಲ್ಲಿಯ ಅನಕ್ಷರತೆ, ಅಜ್ಞಾನ, ಮೂಢನಂಬಿಕೆ, ಬಡತನವನ್ನು ಹೋಗಲಾಡಿಸಲು ನನ್ನ ಕೈಯಿಂದಾಗಬಹುದಾದ ಸೇವೆಯನ್ನು ಮಾಡಬೇಕೆಂದು ನನ್ನ ಮನಸ್ಸು ಮಿಡಿಯುತ್ತದೆ, ನುಡಿಯುತ್ತಿದೆ. ನನ್ನ ತಾಲೂಕಿನ ಕೇಂದ್ರದಲ್ಲಿ ಒಂದು ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿ ಅಕ್ಷರಜ್ಞಾನ, ವಿದ್ಯೆ ಕಲಿಯಲು ಅವಕಾಶ ಒದಗಿಸಬೇಕೆಂದು ನನ್ನ ಹಂಬಲ."

ಹೀಗೆ ಚಿಕ್ಕ ವಯಸ್ಸಿನಲ್ಲಿಯೇ ಇಂತಹ ದೊಡ್ಡ ಆದರ್ಶವನ್ನು ಇಟ್ಟುಕೊಂಡ ವ್ಯಕ್ತಿ ಎಸ್.ಕರಿಯಪ್ಪ. ಬರೀ ಕನಸು ಕಂಡದ್ದಷ್ಟೇ ಅಲ್ಲ ಅದನ್ನು ನನಸು ಮಾಡಲು ಸಾಧ್ಯವಾದದ್ದನ್ನೆಲ್ಲ ಮಾಡಿದ ವ್ಯಕ್ತಿ ಇವರು. 'ಒಬ್ಬ ತರುಣ ಉರಿಯುವ ನೆಲದ ಮಗನಾಗಿ ಕಂಡ ಕನಸು' ಅದು. 1929ರಲ್ಲಿ ತರಗತಿಯಲ್ಲಿ ಈ ಪತ್ರ ಬರೆದ ವ್ಯಕ್ತಿ. 1942ರಲ್ಲಿ ಕನಕಪುರದಲ್ಲಿ ಗ್ರಾಮ ವಿದ್ಯಾ ಪ್ರಚಾರಕ ಸಂಘದ ಆಶ್ರಯದಲ್ಲಿ ಗ್ರಾಮಾಂತರ ಪ್ರೌಢಶಾಲೆಯನ್ನು ಪ್ರಾರಂಭಿಸಿಯೇಬಿಟ್ಟರು! ಈ ಶಾಲೆಯು ಕಾನಕಾನಹಳ್ಳಿಯನ್ನು ಸುತ್ತಮುತ್ತಲ ಮಾತ್ರವಲ್ಲ ದೂರದ ಗ್ರಾಮಾಂತರ ಪ್ರದೇಶವನ್ನು, ಬೆಳೆಯುವ ಪೀಳಿಗೆಗಳನ್ನು ಅರ್ಧ ಶತಮಾನದ ಅವಧಿಯಲ್ಲಿ ಪರಿವರ್ತಿಸಿತು. ನೀರಿನ ಕೊರತೆ, ಬಡತನ. ಮೂಢನಂಬಿಕೆ, ಅಭಿವೃದ್ಧಿಯ ಕೊರತೆಗಳಿಂದ ನರಳುತ್ತಿದ್ದ ಆ ಪ್ರದೇಶಕ್ಕೆ ಕರಿಯಪ್ಪನಂತಹ ವ್ಯಕ್ತಿಯ ಅಗತ್ಯವಿತ್ತು. ಇದೇ ಕಾನಕಾನಹಳ್ಳಿ ಮುಂದೆ ಕನಕಪುರವಾಗಿ ಅಭಿವೃದ್ಧಿ ಹೊಂದಿತು.

ಸಾತನೂರು ನಾಡಿನ ಒಂದು ಹಳ್ಳಿಯಲ್ಲಿದ್ದು ಊರಿನವರಿಗೆಲ್ಲ ಸೋರೆಕಾಯಿ ದಾನ ಮಾಡಿ ಆ ಊರಿಗೆ ಸೋರೆಕಾಯಿದೊಡ್ಡಿ ಎಂದು ಹೆಸರಿಡಲು ಕಾರಣವಾದ ಮನೆತನಕ್ಕೆ ಸೇರಿದವರು ಎಸ್.ಕರಿಯಪ್ಪ ( ಅವರ ಹೆಸರಿನ ಎಸ್ ಎಂಬುದು ಸೋರೆಕಾಯಿ ದೊಡ್ಡಿ ಎಂಬುದರ ಸಂಕ್ಷಿಪ್ತ

ರೂಪ). ಬಾಲಕ ಕರಿಯಪ್ಪನಿಗೆ ಓದಿನಲ್ಲಿ ಮತ್ತು ಪ್ರಕೃತಿಯ ಕೌತುಕಗಳನ್ನು ವೀಕ್ಷಿಸುವಲ್ಲಿ ತುಂಬ ಆಸಕ್ತಿ. ಓದುವುದು, ಉತ್ತಮ ಪುಸ್ತಕಗಳನ್ನು ಸಂಗ್ರಹಿಸುವುದು, ಸೋಮಾರಿಯಾಗಿರದೆ ಸದಾ ಕೆಲಸಕಾರ್ಯಗಳಲ್ಲಿ ನಿರತನಾಗಿರುವುದು ಇಂತಹ ಸದ್ವರ್ತನೆಗಳಿದ್ದ ಹುಡುಗ ಆತ. ಮುಂದೆ ಸುತ್ತಮುತ್ತಲ ಶಾಲೆಗಳಲ್ಲಿ ಅಧ್ಯಾಪಕನಾಗುವಷ್ಟರ ಮಟ್ಟಿಗೆ ಇವರ ಜ್ಞಾನಾಸಕ್ತಿ ಬೆಳೆಯಿತು.

ಬಿ.ಎ.ಪದವೀಧರರಾದ ನಂತರ ತಮ್ಮ ಗ್ರಾಮಕ್ಕೆ ಹಿಂದಿರುಗಿದ ನಂತರ ಕರಿಯಪ್ಪನವರ ಮನಸ್ಸಿನಲ್ಲಿ ಇದ್ದದ್ದು ಗಾಂಧಿಯವರ ಗ್ರಾಮರಾಜ್ಯದ ಆದರ್ಶ. ಗಾಂಧೀಜಿಯವರ ಸರ್ವೋದಯ ತತ್ತ್ವದಲ್ಲಿ ಸ್ವಯಂಸೇವೆ ಸ್ವಾವಲಂಬನೆಗಳಿಗೆ ಪ್ರಾಮುಖ್ಯ. 'ಕರಿಯಪ್ಪನವರಿಗೆ ತಾವು ಸ್ವಾವಲಂಬಿಯಾಗದೆ ಕನಸು ನನಸಾಗುವಂತಿಲ್ಲ ಅನಿಸಿತು'. ಅವರು ಪ್ಲೀಡರ್ ಆಗುವ ನಿರ್ಧಾರ ಮಾಡಿ ಪ್ಲೀಡರ್ ಪರೀಕ್ಷೆಗೆ ಕಟ್ಟಿ ಉತ್ತೀರ್ಣರಾದರು. ಯಾರು ಎಷ್ಟು ಒತ್ತಾಯ ಮಾಡಿದರೂ ಸರ್ಕಾರಿ ಹುದ್ದೆಯ ಆಸೆಗೆ ಬೀಳದೆ ಸೇವೆಯನ್ನು ತಮ್ಮ ಗುರಿಯಾಗಿಸಿಕೊಂಡರು. ಸರಳಜೀವಿಯಾಗಿದ್ದು ಚರಕದಿಂದ ನೂಲು ತೆಗೆಯುತ್ತಾ ತಮ್ಮ ಸುತ್ತಮುತ್ತಲ ಜೀವಿಗಳಿಗೆ ಸದಾ ಉಪಕಾರ ಮಾಡುತ್ತಿದ್ದ ತಮ್ಮ ತಾಯಿಯ ಆದರ್ಶ ಕರಿಯಪ್ಪನವರಲ್ಲಿ ಮೈಗೂಡಿತ್ತು. ಮನೆಯವರಿಗೆ ಬೇಸರವಾದರೂ ಕರಿಯಪ್ಪನವರು ಬ್ರಹ್ಮಚಾರಿಯಾಗಿ ಉಳಿಯುವ ನಿರ್ಧಾರ ಮಾಡಿ ತಮ್ಮ ಸೇವೆಯ ದಾರಿಯನ್ನು ಇನ್ನಷ್ಟು ಸುಗಮಗೊಳಿಸಿಕೊಂಡರು.

ಪ್ಲೀಡರ್ ವೃತ್ತಿ, ಕಂಟ್ರ್ಯಾಕ್ಟರ್ ವೃತ್ತಿ ಹೀಗೆ ಬೇರೆ ಬೇರೆ ವೃತ್ತಿಗಳ ಅನುಭವ ಪಡೆದು ಜನಜಾಗೃತಿ ಮೂಡಿಸುವತ್ತಲೂ ಕಾರ್ಯಪ್ರವೃತ್ತರಾದರು. ಏನೇ ಮಾಡಿದರೂ ಬಡಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ವ್ಯವಸ್ಥೆ ಮಾಡಬೇಕೆಂಬ ಆಸೆ ಅವರನ್ನು ಕಾಡುತ್ತಿತ್ತು. 1930ನೇ ಇಸವಿಯಲ್ಲಿ ಇದು ಸಾಧ್ಯವಾಯಿತು. ಕಾನಕಾನಹಳ್ಳಿಯ ಗುರಿಕಾರರಾದ ವೆಂಕಟರಮಣಗೌಡರು ಇವರ ಆಸೆಗೆ ಇಂಬು ನೀಡಿ ತಮ್ಮ ಮನೆಯಲ್ಲಿಯೇ ವಿದ್ಯಾರ್ಥಿನಿಲಯ ಮಾಡಲು ಅವಕಾಶ ಕೊಟ್ಟರು! ದೂರದ ಊರಿನ 10–15 ಮಕ್ಕಳನ್ನೂ ಕೂಡಿಸಿ ಅವರಿಗೆ ಊಟ ಇತ್ಯಾದಿಗಳ ವ್ಯವಸ್ಥೆ ಮಾಡಿದರು. 'ಆ ಮಕ್ಕಳಿಗೆ ಶಾಲೆ ಮುಗಿದ ನಂತರ ಪಾಠ ಹೇಳಿಕೊಡುವುದು, ಶಿಸ್ತು, ನೈರ್ಮಲ್ಯ, ಸ್ವಾವಲಂಬನೆಗಳ ಬಗ್ಗೆ ತಿಳಿಸಿಕೊಡುವುದು ಮುಂತಾಗಿ ಆಸಕ್ತಿವಹಿಸಿ ತರಬೇತಿ ನೀಡತೊಡಗಿದರು. ಈ

ವಿದ್ಯಾರ್ಥಿನಿಲಯವು ಜನಮೆಚ್ಚುಗೆ ಪಡೆಯುವಲ್ಲಿ ಯಶಸ್ವಿಯಾಯಿತು. ಈ ಕಾಲವು ಮಹಾತ್ಮಾ ಗಾಂಧೀಜಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯ ಚಳುವಳಿ ನಡೆಯುತ್ತಿದ್ದ ಕಾಲ. ಸಾಕಷ್ಟು ಜನಸಂಪರ್ಕ ಇದ್ದ ಕರಿಯಪ್ಪನವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ಗೆ ಅಧ್ಯಕ್ಷರಾಗಿ ಸೇರಿದರು. ಸಮಾವೇಶಗಳನ್ನು ನಡೆಸುವುದು, ವಿವರವಾಗಿ ಭಾಷಣ ಮಾಡಿ ಜನರಲ್ಲಿ ಅರಿವು ಮೂಡಿಸುವುದು ಮುಂತಾದ ಕೆಲಸಗಳನ್ನು ಮಾಡುತ್ತಿದ್ದರು.

ದಯಾನಂದ ಸರಸ್ವತಿಯವರ ವಿಚಾರಗಳಿಂದ ಪ್ರಭಾವಿತರಾಗಿದ್ದ ಕರಿಯಪ್ಪನವರು ವಿದ್ಯಾರ್ಥಿನಿಲಯಕ್ಕೆ ದಯಾನಂದ ವಿದ್ಯಾರ್ಥಿನಿಲಯ ಎಂದು ಹೆಸರಿಟ್ಟರು. ಕರಿಯಪ್ಪನವರ ಪಾಮಾಣಿಕತೆಯನ್ನು ಸೇವಾ ಮನೋಭಾವವನ್ನು ಗಮನಿಸಿದ ಜನ ಒಟ್ಟು 22 ಎಕರೆ ಭೂಮಿಯನ್ನು ವಿದ್ಯಾರ್ಥಿನಿಲಯ ಮತ್ತು ಶಾಲೆಗಳಿಗಾಗಿ ಕೊಟ್ಟರು. 1939ರಲ್ಲಿ ದಯಾನಂದ ವಿದ್ಯಾರ್ಥಿನಿಲಯವು 'ದಯಾನಂದ ವಸತಿಶಾಲೆಯಾಗಿ ರೂಪಾಂತರಗೊಂಡಿತು. ಇದನ್ನು ಗ್ರಾಮಸಮಾಜಕ್ಕೆ ತಕ್ಕಂತಹ, ಗಾಂಧೀಪ್ರಣೀತ ಆದರ್ಶಗಳ ಹಿನ್ನೆಲೆಯಲ್ಲಿ ವಿವಿಧೋದ್ದೇಶ ಶಾಲೆಯಾಗಿ ಕರಿಯಪ್ಪನವರು ರೂಪಿಸಿದರು.

ಕೃಷಿ, ಕಲೆ, ಕ್ರೀಡೆ, ಪ್ರವಾಸ, ಉಪಕಸುಬು.....ಒಬ್ಬ ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಬೇಕಾದ ಪ್ರತಿಯೊಂದನ್ನೂ ತಮ್ಮ ಶಾಲೆ ನೀಡಬೇಕೆಂಬುದು ಕರಿಯಪ್ಪನವರ ಕನಸಾಗಿತ್ತು. ನಮ್ಮ ಗ್ರಾಮಗಳ ವಾತಾವರಣಕ್ಕೆ ಪಾಶ್ಚಾತ್ಯ ಶಿಕ್ಷಣ ಪದ್ಧತಿ ಹೊಂದುವುದಿಲ್ಲ ಎಂಬುದು ಅವರ ಅಭಿಪ್ರಾಯವಾಗಿತ್ತು. ಗಾಂಧೀಜಿಯವರ ಗ್ರಾಮಸ್ವರಾಜ್ಯ ಮತ್ತು ಸರ್ವೋದಯ ಪರಿಕಲ್ಪನೆಗಳಿಂದ ಬಹಳವಾಗಿ ಪ್ರಭಾವಿತರಾಗಿ ತಮ್ಮ ಸಂಸ್ಥೆಯ ಚಟುವಟಿಕೆಗಳನ್ನು ರೂಪಿಸಿದರು. ಒಬ್ಬ ಉತ್ತಮ ಇಂಗ್ಲಿಷ್ ಶಿಕ್ಷಕರಾಗಿ, ಹಣಕಾಸು ನಿರ್ವಾಹಕರಾಗಿ, ಪಿತೃವಾತ್ಸಲ್ಯದಿಂದ ಮಕ್ಕಳನ್ನು ಕಾಯುವ ಕಣ್ಣಾಗಿ, ಎಚ್ಚರಗಣ್ಣಿನ ಪ್ರಗತಿಚಿಂತಕ ರಾಜಕಾರಣಿಯಾಗಿ........ಹೀಗೆ ಅನೇಕ ಪಾತ್ರಗಳಲ್ಲಿ ಕರಿಯಪ್ಪನವರು ಕೆಲಸ ಮಾಡಿದರು.

1929ರಿಂದ 1980ರಲ್ಲಿ ತಾವು ಕೊನೆಯುಸಿರೆಳೆಯುವ ತನಕ ಅಂದರೆ ಪೂರ್ತಿ ಐವತ್ತು ವರ್ಷಗಳು ಕರಿಯಪ್ಪನವರು ಮುಖ್ಯವಾಗಿ ಎರಡು ಕೆಲಸಗಳನ್ನು ಮಾಡಿದರು. ಒಂದು ಗ್ರಾಮಾಂತರ ಪ್ರೌಢಶಾಲೆಯನ್ನು ಒಂದು ಮಾದರಿ ಸಂಸ್ಥೆಯಾಗಿ ಕಟ್ಟಿ ಬೆಳೆಸಿದ್ದು, ಇನ್ನೊಂದು ರಾಜಕೀಯ ಕ್ಷೇತ್ರದಲ್ಲಿ

ಜನಪ್ರತಿನಿಧಿಯಾಗಿ ತಮ್ಮ ತಾಲೂಕಿನ ಉದ್ಧಾರಕ್ಕಾಗಿ ದಿನರಾತ್ರಿ ಶ್ರಮಿಸಿದ್ದು. ಜೀವನದುದ್ದಕ್ಕೂ ಸರಳವ್ರತವನ್ನು ಪಾಲಿಸುತ್ತ ಪ್ರಾಮಾಣಿಕವಾಗಿ ಬದುಕು ನಡೆಸಿದ ಕರಿಯಪ್ಪನವರು ನಿಜಕ್ಕೂ ಒಬ್ಬ ತ್ಯಾಗಜೀವಿ.

ಎಂ.ಎಚ್. ಕೃಷ್ಣಯ್ಯನವರ ಪ್ರಕಾರ ಕನಕಪುರದ "ಗ್ರಾಮ ವಿದ್ಯಾ ಪ್ರಚಾರಕ ಸಂಘದ ಹಲವು ಸಂಸ್ಥೆಗಳಲ್ಲಿ ಕರಿಯಪ್ಪನವರ ಚೈತನ್ಯ ರೂಪಾಂತರಗೊಂಡು ಇಂದಿಗೂ ಉಳಿದಿದೆ. ಗ್ರಾಮ ವಿದ್ಯಾ ಪ್ರಚಾರಕ ಸಂಘದ ಉದ್ದೇಶ ಮತ್ತು ಕಾರ್ಯಯೋಜನೆಗಳು ಎಂದೂ ಉದ್ಯಮವೂ ಆಗಲಿಲ್ಲ, ಅಥವಾ ವಾಣಿಜ್ಯ ದೃಷ್ಟಿಯವೂ ಆಗಲಿಲ್ಲ...ಅವರು ಹೊತ್ತಿಸಿದ ದೀಪ ಇಂದು ಸಾವಿರಾರು ಮನೆಗಳನ್ನು ಬೆಳಗುತ್ತಿದೆ. ಕರಿಯಪ್ಪನವರು ನಮ್ಮ ಕಾಲದವರು. ನಮ್ಮಂತೆ ಉಪ್ಪು ತಿಂದು ಬೆಳೆದವರು. ಕಣ್ಣೆದುರಿಗೆ ಕಂಡವರಾದ ಕಾರಣ ಋಷಿ ಎಂದು ಯಾರೂ ಕರೆಯುವುದಿಲ್ಲ. ಆದರೆ ಆ ಬ್ರಹ್ಮಚಾರಿ ಋಷಿಯಲ್ಲವೇ? ಶಿಕ್ಷಣಕ್ಷೇತ್ರದ ನಿಷ್ಠೆ ತಪಸ್ಸಲ್ಲವೇ? ಕಾನಕಾನಹಳ್ಳಿಯನ್ನು ಕನಕಪುರವಾಗಿಸಿದ ವ್ಯಕ್ತಿ ಅಸಾಮಾನ್ಯ ವ್ಯಕ್ತಿತ್ವದ ವ್ಯಕ್ತಿಯಲ್ಲವೇ? ಕರಿಯಪ್ಪನವರ ಜೀವನದುದ್ದಕ್ಕೂ ಕಂಡುಬರುವ ತ್ಯಾಗಮನೋಧರ್ಮ ಒಂದು ಯೋಗವಲ್ಲವೇ?"

ಈ ರೀತಿಯಲ್ಲಿ ಕರಿಯಪ್ಪನವರನ್ನು ಚಿತ್ರಿಸುವ ಕೃಷ್ಣಯ್ಯನವರು ಸಕಾರಣವಾಗಿಯೇ ಅವ್ರರನ್ನು ತ್ಯಾಗಯೋಗಿ ಎಂದು ಕರೆದಿದ್ದಾರೆ. ಈ ತ್ಯಾಗಜೀವಿಯ ಬಗ್ಗೆ ಕೃಷ್ಣಯ್ಯನವರು ಬರೆದಿರುವ ರೀತಿ ಮನಮುಟ್ಟುವಂಥದ್ದು. ಈ ಕೃತಿಯನ್ನು ಓದಿದ ಯಾರಿಗೇ ಅಗಲಿ ಕರಿಯಪ್ಪನವರ ಬಗ್ಗೆ ಗೌರವ ಮೂಡುತ್ತದೆ. ಮತ್ತು ಈ ತ್ಯಾಗಜೀವಿಯ ಬದುಕಿನ ಚಿತ್ರಣವನ್ನು ಕಣ್ಣಿಗೆ ಕಟ್ಟುವಂತೆ ಮಾಡಿಕೊಟ್ಟಿರುವ ಕೃಷ್ಣಯ್ಯನವರ ಬಗ್ಗೆ ಮೆಚ್ಚುಗೆ ಮೂಡುತ್ತದೆ.

## ರೂಪಶಿಲ್ಪಿ ಬಸವಯ್ಯ

ಶ್ರೀಯುತ ಕೃಷ್ಣಯ್ಯನವರ ಕಲಾವಿಷಯಕ ಕೃತಿಗಳಲ್ಲಿ ಒಂದು "ರೂಪಶಿಲ್ಪಿ ಬಸವಯ್ಯ". ಕರ್ನಾಟಕ ಲಲಿತಕಲಾ ಅಕಾಡೆಮಿಯು ತನ್ನ ಪ್ರಮುಖ ಯೋಜನೆಯೊಂದರ ಭಾಗವಾಗಿ ರಾಜ್ಯದ ಹಿರಿಯ ಕಲಾವಿದರು ಮತ್ತು ಅವರ ಕೃತಿಗಳ ಬಗ್ಗೆ ಪುಸ್ತಕಗಳನ್ನು ಪ್ರಕಟಿಸಿತು. ಈ ಮಾಲಿಕೆಯಲ್ಲಿ ಬಂದ ಕೃತಿ ಇದು.

ಎಂ.ಎಚ್.ಕೃಷ್ಣಯ್ಯನವರು ತಮ್ಮ ಕೃತಿಗಳ ಪ್ರಾರಂಭವನ್ನು ಅದರಲ್ಲೂ ಜೀವನಚರಿತ್ರೆಗಳ ಪ್ರಾರಂಭವನ್ನು ಕುತೂಹಲಕರ ಕಥಾನಕದಿಂದ ಪ್ರಾರಂಭಿಸಿ ಓದುಗರನ್ನು ಸೆರೆಹಿಡಿಯುವ ಶಕ್ತಿ ಹೊಂದಿರುವಂಥವರು. 'ರೂಪಶಿಲ್ಪಿ ಬಸವಯ್ಯ' ಕೃತಿಯ ಪ್ರಾರಂಭವೂ ಇದಕ್ಕೆ ಹೊರತಲ್ಲ.

ಇಪ್ಪತ್ತನೇ ಶತಮಾನದ ಪ್ರಾರಂಭದ ವರ್ಷಗಳಲ್ಲಿ ಮೈಸೂರು ಸಂಸ್ಥಾನದ ನಾಲ್ಮಡಿ ಕೃಷ್ಣರಾಜ ಒಡೆಯರ ಕಲಾಸಕ್ತಿಯು ಮನೆಮಾತಾಗಿತ್ತು. ಆ ಹೊತ್ತಿನಲ್ಲಿ 'ಶಿಲ್ಪಕಲೆ ಶಿಲ್ಪ ಕೆತ್ತನೆಗೆ ಸೀಮಿತವಾಗದೆ ರೂಪಶಿಲ್ಪ ಅಥವಾ ಮಾಡೆಲಿಂಗ್‌ಗೂ ವಿಸ್ತರಿಸಿತ್ತು. ಇದರ ಸಾಧ್ಯತೆಗಳ ಅರಿವಿದ್ದ ಮಹಾರಾಜರು ತಮ್ಮಲ್ಲಿಯೂ ಯಾರಾದರೂ ಅದರಲ್ಲಿ ಪರಿಣತರಾಗಬೇಕೆಂಬ ಆಶೆ ಹೊಂದಿದ್ದರು'. ಆ ಸಂದರ್ಭದಲ್ಲಿ ಒಂದು ವಿಲಕ್ಷಣ ರೀತಿಯಲ್ಲಿ ಮಹಾರಾಜರು ಮತ್ತು ಯುವಶಿಲ್ಪಿ ಬಸವಯ್ಯನ ಭೇಟಿಯಾಗುತ್ತದೆ.

ಮಹಾರಾಜರು ಗೋಪಾಲರಾಯರು ಎಂಬ ತಮ್ಮ ಅಧಿಕಾರಿಯ ಮೂಲಕ ರೂಪಶಿಲ್ಪಿಗಾಗಿ ಹುಡುಕಾಟ ನಡೆಸುತ್ತಿದ್ದರು. ಆಗ ವ್ಯಕ್ತಿಯೊಬ್ಬರು, ಬಾಂಬೆಯಲ್ಲಿ ಕೆಲವು ತಿಂಗಳುಗಳ ಹಿಂದೆಯಷ್ಟೆ ಮಾಡೆಲಿಂಗ್‌ನಲ್ಲಿ ಹೆಚ್ಚಿನ ಶಿಕ್ಷಣ ಮುಗಿಸಿ ಬಂದಿದ್ದ ತಮ್ಮ ಸ್ನೇಹಿತರ ಮಗನ ನೆರವು ಪಡೆಯಬಹುದೆಂಬ ಧೈರ್ಯದಿಂದ ತಾನು ಶಿಲ್ಪ ಮಾಡುತ್ತೇನೆ ಎಂದು, ಮಹಾರಾಜರ ಅಧಿಕಾರಿಯ ಬಳಿ ಒಪ್ಪಿಕೊಂಡರು. ಆದರೆ ಅವರ ಕೈಯಿಂದ ಕೆಲಸ ಸಾಗದೆ ಯುವಕನ ನೆರವನ್ನು ಪಡೆದರೂ ಮಹಾರಾಜರ ಬಳಿ ಅವನ ಗುರುತನ್ನು ಹೇಳದೆ ಮುಚ್ಚಿಟ್ಟರು. ಯುವಕನಿಗೆ ಹೇಗೋ ವಿಷಯ ಗೊತ್ತಾಗಿ ಅವನು ಗೋಪಾಲರಾಯರನ್ನು ಭೇಟಿ ಮಾಡಿ ಸಂಕೋಚದಿಂದಲೇ ನಡೆದ ಘಟನೆಯನ್ನು ವಿವರಿಸಿದ. ಆಗ ಅವನಿಗೆ ಗೋಪಾಲರಾಯರು ಅರಮನೆಯ ಶ್ರೀ ಬಸಪ್ಪಾಜಿ ಭಕ್ಷಿಯವರ ಭಾವಚಿತ್ರಗಳನ್ನು ಕೊಟ್ಟು ಒಂದು ಪರೀಕ್ಷಾಕೃತಿ ರಚಿಸಲು ಹೇಳಿದರು. ಆಗ ಬಸವಯ್ಯ ರಚಿಸಿದ ಶಿಲ್ಪ ಮಹಾರಾಜರಾದಿಯಾಗಿ ಅರಮನೆಯ ಎಲ್ಲರಿಗೂ ತುಂಬ ಹಿಡಿಸಿ, ಬಸವಯ್ಯನವರು ಅರಮನೆಯ ಆಸ್ಥಾನಶಿಲ್ಪಿಯಾದರು.

ಬಸವಯ್ಯನವರು ಹುಟ್ಟಿದ್ದರು ಮೈಸೂರಿನಲ್ಲಿ, ಹಳ್ಳಿಯಂತಿದ್ದ ಒಂದು ಉತ್ತರದ ಒಂದು ಬಡಾವಣೆಯಲ್ಲಿ. 1900ರ ಸಪ್ಟೆಂಬರ್ 11ರಂದು. ತಂದೆ ಬೋರಯ್ಯ ಗಾರೆಕೆಲಸ ಮಾಡುತ್ತಿದ್ದರು. ತಾಯಿ ನಿಂಗಮ್ಮ. ತಂದೆಗೆ

ಮಗನಾದರೂ ವಿದ್ಯಾವಂತನಾಗಲಿ ಎಂಬ ಆಸೆಯಿತ್ತು. ಆದರೆ ಓದಿನಲ್ಲಿ ಆಸಕ್ತಿ ತೋರದ ಬಸವಯ್ಯನ ವಿದ್ಯಾಭ್ಯಾಸ ಮಾಧ್ಯಮಿಕ ಶಾಲೆಗೇ ನಿಂತಿತು. ಆದರೆ ಒಮ್ಮೆ ಸೋಮನಾಥಪುರ ಶಿಲ್ಪಕಲೆಯನ್ನು ನೋಡಿ ಬಂದಿದ್ದ ಬಸವಯ್ಯ ಮಣ್ಣಿನಿಂದ ಅತ್ಯಂತ ಸುಂದರ ಗೊಂಬೆ, ವಿಗ್ರಹಗಳನ್ನು ಮಾಡತೊಡಗಿದ. ಓದನ್ನು ಕಲಿಯದ ಮಗ ಮರಗೆಲಸವನ್ನಾದರೂ ಕಲಿತು ಹೊಟ್ಟೆಪಾಡಿಗೆ ದಾರಿ ಮಾಡಿಕೊಳ್ಳಲಿ ಎಂದು ಬಯಸಿದ ತಂದೆ ಸ್ನೇಹಿತರೊಬ್ಬರ ನೆರವಿನಿಂದ ತಮ್ಮ ಮನೆಗೆ ಸಮೀಪವಿದ್ದ ಚಾಮರಾಜೇಂದ್ರ ಕಲಾಶಾಲೆಗೆ ಸೇರಿಸಿದರು. ಹುಡುಗನ ಪ್ರತಿಭೆಯನ್ನು ನೋಡಿದ ಅಲ್ಲಿನ ಗುರುಗಳು ಇವನು ಶಿಲ್ಪಕಲೆಯನ್ನು ಕಲಿತರೆ ಉತ್ತಮ ಎಂದು ನಿರ್ಧರಿಸಿದರು. ತಂದೆಗೆ ಕಲೆಯಿಂದ ಜೀವನೋಪಾಯವಾಗುವುದಿಲ್ಲ ಎಂಬ ಭಯವಿದ್ದರೂ ಇದಕ್ಕೆ ಒಪ್ಪದೆ ವಿಧಿಯಿರಲಿಲ್ಲ. ಮಾಡೆಲಿಂಗ್ ವಿಭಾಗದ ಮುಖ್ಯಸ್ಥರಾಗಿದ್ದ ಗೋವಿಂದ ಪಿಳ್ಳೆಯವರ ಗರಡಿಯಲ್ಲಿ ಬಸವಯ್ಯ ಶಿಲ್ಪಕಲೆಯ ಮೂಲವಿಚಾರಗಳನ್ನು ಸೂಕ್ಷ್ಮಗಳನ್ನು ಕಲಿಯಲಾರಂಭಿಸಿದರು.

1914ರಿಂದ 1919ರವರೆಗೆ ಮಾಡೆಲಿಂಗ್ ಕೋರ್ಸ್ ಮುಗಿಸುವ ಅವಧಿಯಲ್ಲಿಯೇ ಮದ್ರಾಸಿನಲ್ಲಿ ನಡೆಸುತ್ತಿದ್ದ ಪರೀಕ್ಷೆಗಳನ್ನೂ ತೆಗೆದುಕೊಂಡು ಉತ್ತೀರ್ಣರಾದರು. ಈ ಶ್ರದ್ಧಾವಂತ ವಿದ್ಯಾರ್ಥಿಯನ್ನು ಗುರುಗಳಾದ ಗೋವಿಂದ ಪಿಳ್ಳೆಯವರು ತುಂಬ ಪ್ರೋತ್ಸಾಹಿಸುತ್ತಿದ್ದರು. ತಮ್ಮ ಗುರುಗಳ ಬಗ್ಗೆ ಬಸವಯ್ಯನವರಿಗೆ ತುಂಬ ಗೌರವ ಮತ್ತು ಕೃತಜ್ಞತಾಭಾವನೆ ಇತ್ತು.

1919ರಲ್ಲಿ ತಮ್ಮೂರು ಮದ್ರಾಸಿಗೆ ರಜಕ್ಕೆ ಹೋದ ಗೋವಿಂದ ಪಿಳ್ಳೆಯವರು ಕಾರಣಾಂತರದಿಂದ ತಿರುಗಿ ಬರಲಿಲ್ಲ. ಆಗ ಸಂಸ್ಥೆಯ ಮುಖ್ಯಸ್ಥರು ಬಸವಯ್ಯನವರನ್ನೇ ತಮ್ಮ ಗುರುಗಳ ಸ್ಥಾನದಲ್ಲಿ ಮಾಡೆಲಿಂಗ್ ಶಿಕ್ಷಕರನ್ನಾಗಿ ನೇಮಿಸಿದರು.

ಬಸವಯ್ಯನವರಿಗೆ ಮುಂದೆ ಮುಂಬಯಿಯ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಉನ್ನತ ಕಲಾ ಶಿಕ್ಷಣವನ್ನು ಪಡೆಯುವ ಅವಕಾಶವಾಯಿತು. ಇಲ್ಲಿ ಇವರು ಶಿಲ್ಪಕಲೆಗೆ ಪೂರಕವಾದ ಇನ್ನೊಂದು ಕಲೆಯಾದ ಚಿತ್ರಕಲೆಯ ಕುರಿತೂ ಅಧ್ಯಯನ ಮಾಡಿದರು. ಮುಂಬಯಿಯಲ್ಲಿ ಅವರ ಪ್ರತಿಭೆಗೆ ತುಂಬ ಪ್ರೋತ್ಸಾಹ ಸಿಕ್ಕಿತು. ಆದರೆ ಅನಾರೋಗ್ಯದ ಕಾರಣದಿಂದ ಮೈಸೂರಿಗೆ ಮರಳಿದಾಗ ಎರಡು ವರ್ಷಗಳ ಕಾಲ ಯಾವುದೇ ಕೆಲಸ ಸಿಗಲಿಲ್ಲ. ಜೀವನ ನಿರ್ವಹಣೆಗಾಗಿ ಚರ್ಮ

ಪ್ರಸಾಧನ ಕಲೆಗಾರಿಕೆಯನ್ನು ಮಾಡಬೇಕಾಯಿತು. ಈ ಹೊತ್ತಿನಲ್ಲಿ ಹಿಂದೆ ಹೇಳಿದ ಮಹಾರಾಜರ ಭೇಟಿಯ ಸುಸಂದರ್ಭ ಇವರಿಗೆ ದೊರಕಿದ್ದು. ಮುಂದಿನ ಇಪ್ಪತ್ತು ವರ್ಷಗಳು ಬಸವಯ್ಯನವರ ಬಾಳಿನ ಸುವರ್ಣಕಾಲ. ಮಹಾರಾಜರ ಪ್ರೋತ್ಸಾಹದಿಂದ ಅದ್ಭುತವೆನಿಸುವ ಅನೇಕ ಶಿಲ್ಪಗಳನ್ನು ಈ ರೂಪಶಿಲ್ಪಿ ಮಾಡಿದರು. ಬಿಥೋವನ್, ವೀಣೆ ಶೇಷಣ್ಣ, ಸರ್.ಎಂ.ವಿಶ್ವೇಶ್ವರಯ್ಯ, ಯುವರಾಜ ಕಂಠೀರವ ನರಸಾಜ ಒಡೆಯರ್, ಮಿರ್ಜಾ ಇಸ್ಮಾಯಿಲ್, ಬೆಂಗಳೂರು ಕೆಂಪೇಗೌಡ ಮುಂತಾದ ಖ್ಯಾತ ವ್ಯಕ್ತಿಗಳ ಶಿಲ್ಪಗಳನ್ನು, ಅಲ್ಲದೆ ಅಂಚೆಯಾಳು, ಮಾಲಿಯಂತಹ ಸಾಮಾನ್ಯ ವ್ಯಕ್ತಿಯ ಶಿಲ್ಪಗಳನ್ನು ಇವರು ಮಾಡಿದರು, ಇವೆಲ್ಲಕ್ಕೂ ಕಲಶವಿಟ್ಟಂತೆ ನಾಲ್ಮಡಿ ಕೃಷ್ಣರಾಜ ಒಡೆಯರ ಅತ್ಯಂತ ಸಹಜವಾಗಿ ಕಾಣುವ ಮೂರ್ತಿಯನ್ನು ಮಾಡಿದರು.

1940ರಲ್ಲಿ ನಾಲ್ಮಡಿ ಕೃಷ್ಣರಾಜ ಒಡೆಯರು ನಿಧನರಾದದ್ದು ಬಸವಯ್ಯನವರಿಗೆ ಮಾನಸಿಕವಾಗಿ ಆಘಾತ ಉಂಟು ಮಾಡುವ ವಿಷಯವಾಯತು. ಅರಮನೆಯಲ್ಲಿ ಅಧಿಕಾರಿಗಳ ರಾಜಕಾರಣ ಮಿತಿಮೀರಿ ಬಸವಯ್ಯನವರಿಗೆ ಬೇಸರವಾಗಿ ಅರಮನೆಯಿಂದ ಹೊರಬಂದರು. ಆರು ಮಕ್ಕಳ ತಂದೆಯಾಗಿದ್ದುದರಿಂದ ಜೀವನೋಪಾಯದ ಸವಾಲು ಎದುರಿಗಿತ್ತು. ಕೆಲವು ಕಾಲಾನಂತರ ಚಾಮರಾಜೇಂದ್ರ ಕಲಾಶಾಲೆಯಲ್ಲಿ ಶಿಕ್ಷಕರಾಗಿ ಸೇರಿದರು. ದೇಶಕ್ಕೆ ಸ್ವಾತಂತ್ರ್ಯ ಬಂದದ್ದು, ಕಲಾಭಿಜ್ಞರಲ್ಲದಿರುವ ಅಧಿಕಾರಿಗಳು ಇದರಿಂದಾಗಿ ಬಸವಯ್ಯನವರ ಪ್ರತಿಭೆಗೆ ಸಿಗಬೇಕಾದ ಪ್ರೋತ್ಸಾಹ ಸಿಗಲಿಲ್ಲ.

ಕೆಂಪೇಗೌಡರ ಪ್ರತಿಮೆ, ಎಂ.ವಿಶ್ವೇಶ್ವರಯ್ಯನವರ ಪ್ರತಿಮೆ ಇವೆರಡನ್ನು ಮಾಡಿದ ನೆನಪು ಬಸವಯ್ಯನವರ ಮನಸ್ಸಿನಲ್ಲಿ ಸದಾ ಹಸಿರಾಗಿತ್ತು.

ಜೀವನದ ಕೊನೆಯ ದಿನಗಳಲ್ಲಿ ಬಸವಯ್ಯನವರು ತುಂಬ ನೊಂದರು. ಅಧಿಕಾರಿಗಳ ನಿರ್ಲಕ್ಷ್ಯ, ಧೋರಣೆಗಳು ಅವರ ಮನಸ್ಸನ್ನು ಕುಂದಿಸಿದವು. 1974ರ ನವೆಂಬರ್ 23ರಂದು ಬಸವಯ್ಯನವರು ಕೊನೆಯುಸಿರೆಳೆದರು. ಕೃಷ್ಣಯ್ಯನವರು ಮಾರ್ಮಿಕವಾಗಿ ಹೇಳಿರುವಂತೆ "ಸೊಪ್ಪಿನ ಕೇರಿಯ ವಾತಾವರಣದಿಂದ ಕೆಸರಿನ ಕಮಲದಂತೆ ಅರಳಿದ ಪ್ರತಿಭೆ ಎಷ್ಟು ಎತ್ತರಕ್ಕೆ ಏರಿ ದೇಶವಿದೇಶಗಳಲ್ಲಿ ಬೆಳಗಿ, ಕೊನೆಯ ದಿನಗಳಲ್ಲಿ ಅಲ್ಲೇ ಬಾಡಿತು".

ಬಸವಯ್ಯನವರಿಗೆ ಸನ್ಮಾನಗಳು ತುಂಬ ತಡವಾಗಿ ಬಂದವು. ಬೆಂಗಳೂರು ನಗರಸಭೆಯ ಸನ್ಮಾನ ಪತ್ರ, ರಾಜ್ಯ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ, ಚಾಮರಾಜೇಂದ್ರ ಕಲಾ ಶಾಲೆಯ ವಜ್ರ ಮಹೋತ್ಸವದ ಸನ್ಮಾನ.....ಹೀಗೆ ಕೆಲವು ಸನ್ಮಾನಗಳು ಇವರಿಗೆ ಒದಗಿಬಂದವು. ಆದರೂ ಸ್ವಜನರ ನಿರ್ಲಕ್ಷ್ಯದಿಂದ ಈ ಶಿಲ್ಪಿ ನೊಂದರು ಎಂದು ಕೃಷ್ಣಯ್ಯನವರು ಬರೆಯುತ್ತಾರೆ.

ಈ ಕಿರುಹೊತ್ತಗೆಯ ಕೊನೆಯಲ್ಲಿ ಕೃಷ್ಣಯ್ಯನವರು ಬಸವಯ್ಯನವರ ಶಿಲ್ಪಕಲಾಶೈಲಿಯ ತೌಲನಿಕ ವಿಮರ್ಶೆ ಮಾಡುತ್ತಾರೆ. ಬಸವಯ್ಯನವರ ಹಿಂದಿನ ಅಥವಾ ತಮ್ಮ ಸಮಕಾಲೀನರ ಶೈಲಿಗಿಂತ ಭಿನ್ನವಾದುದು. "ಬಸವಯ್ಯನವರ ಶೈಲಿ ವಸ್ತುನಿಷ್ಠ. ಅವರ, ಸೌಮ್ಯ, ಸರಳ ಸ್ವಭಾವಕ್ಕೆ ಅನುಗುಣವಾಗಿ, ಅತಿ ವ್ಯಕ್ತವಾಗುವಂತೆ ಇರದೆ ಮಧ್ಯಮ ಮಾರ್ಗಾನುಯಾಯಿಯಾಗಿ ಒಂದು ಬಗೆಯ ಇಂಪರ್ಸನಲ್ ಅನುಭವ ಉಂಟುಮಾಡುತ್ತದೆ. ಭಾರತೀಯ ಶಿಲ್ಪ ಹಾಗೂ ಕಂಚುಗಳಂತೆ ಸಂಪೂರ್ಣವಾಗಿ ಶಿಲ್ಪಿಯ ಬೆರಳ ಗುರುತು ಉಳಿಯದಂತೆ ಹೊಳಪು ಕೊಡುವ ವಿಧಾನವಲ್ಲ. ಯಾವ ಅತಿಗೂ ಹೋಗದೆ ನೇರವಾಗಿ ಬೆರಳುಗಳಿಂದ ತೀಡಿ ತಿದ್ದಿದ ಭಾಗಗಳನ್ನು ಆಯಾ ಶಿಲ್ಪಗಳಿಗೆ ಅನುಗುಣವಾಗಿ ಉಳಿಸುವುದೇ ಅವರ ಶೈಲಿಯ ಹಸ್ತಾಕ್ಷರವೆನ್ನಬಹುದು. ಅವರದು ಸಾಂಪ್ರದಾಯಿಕ ಶೈಲಿ ಎನ್ನುವವರು ಇದನ್ನು ಮರೆಯುತ್ತಾರೆ. ಜೆ.ಜೆ.ಕಲಾಶಾಲೆಯ ಪರಿಸರ, ಯುರೋಪಿನ ಶಿಲ್ಪಶೈಲಿಗಳ ಪ್ರಭಾವಕ್ಕೊಳಗಾಗಿದ್ದ ಶಿಲ್ಪಿಗಳ ಪ್ರಯೋಗಗಳ ಒಡನಾಟದ ಪ್ರಭಾವದಿಂದ, ವರ್ಣಚಿತ್ರಕಲಾ ಕಲಿಕೆಯಿಂದ ತಮ್ಮದೇ ಶೈಲಿಯನ್ನು ಅವರು ರೂಢಿಸಿಕೊಂಡಿದ್ದರು.

'ಬಸವಯ್ಯನವರ ಕಲೆಯ ಮಹತ್ವ, ಅವರ ಶೈಲಿಯ ವೈಶಿಷ್ಟ್ಯಗಳನ್ನು ಅವರು ಬದುಕಿದ್ದಾಗ ಕಲಾಪ್ರಪಂಚ ಅರಿತು ವಿಮರ್ಶಿಸಲಿಲ್ಲ.......... ರೂಪದರ್ಶಿಯನ್ನಿಟ್ಟು ರಚಿಸಿದ ಅವರ ರೂಪಶಿಲ್ಪಗಳು ಆಯಾ ವ್ಯಕ್ತಿಯ ವೈಯಕ್ತಿಕ ವ್ಯಕ್ತಿತ್ವದ ಸಾಧಾರಣೀಕರಣದಿಂದ ಕಾಲದೇಶಾತೀತವಾಗಿ ಸಾರ್ವತ್ರಿಕ ಮಾನವ ವ್ಯಕ್ತಿತ್ವದ ಮಾದರಿಗಳಾಗಿ ಸದಾ ಕಾಲ ಉಳಿಯುತ್ತವೆ' ಎಂಬುದು ಲೇಖಕರ ಅನಿಸಿಕೆ.

*********

## ಎನ್.ಎಚ್. ಕುಲಕರ್ಣಿ

1990ರಲ್ಲಿ ಕೃಷ್ಣಯ್ಯನವರು ರಚಿಸಿದ ಕೃತಿ 'ಎನ್.ಎಚ್.ಕುಲಕರ್ಣಿ'. ಇದು ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ ಕರ್ನಾಟಕದ ಶಿಲ್ಪಿ ನಾರಾಯಣ ಕುಲಕರ್ಣಿ ಅವರ ಕಲೆ ಮತ್ತು ಜೀವನವನ್ನು ಪರಿಚಯಿಸುವ ಕಿರುಪುಸ್ತಕ. ಕರ್ನಾಟಕ ಕಲಾವಿದರ ಮಾಲಿಕೆಯಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯು ಪ್ರಕಟಿಸಿದ 24ನೇ ಪುಸ್ತಕವಿದು.

ಪ್ರಾರಂಭದಲ್ಲಿ ಕೃಷ್ಣಯ್ಯನವರು ಇಪ್ಪತ್ತನೇ ಶತಮಾನದಲ್ಲಿನ ಶಿಲ್ಪಕಲೆಯನ್ನು ಕುರಿತು ಪ್ರಸ್ತಾವನೆಯೊಂದನ್ನು ನೀಡಿದ್ದಾರೆ.

ಶಿಲ್ಪಕಲೆಯಲ್ಲಿ ಇಪ್ಪತ್ತನೇ ಶತಮಾನದ ಮೊದಲ ದಶಕದ ನಂತರ ಆಧುನಿಕ ಒಲವುಗಳನ್ನು ಗುರುತಿಸಲಾಗುತ್ತದೆ. 'ಪೋಸ್ಟ್ ಇಂಪ್ರೆಶನಿಸ್ಟ್ ಕಾಲವನ್ನು ಹಳೆಯ ಸಂಪ್ರದಾಯದಿಂದ ಕವಲೊಡೆದ ಕಾಲ ಎನ್ನಬಹುದು'.

ಪಾಶ್ಚಾತ್ಯ ಕಲಾವಿದರಾದ ಹೆನ್ರಿ ಮೂರ್, ಸದರ್‌ಲ್ಯಾಂಡ್, ಪಿಕಾಸೊ, ಬೆನ್ ನಿಕಲ್ಸನ್, ಬಾರ್ಬರಾ ಹೆಪ್‌ವರ್ತ್ ಮುಂತಾದವರಿಂದಾಗಿ ಆಧುನಿಕ ಶಿಲ್ಪಕಲೆ ಶುದ್ಧ ಅಮೂರ್ತ ರೂಪವನ್ನು ತಳೆಯಿತು. ಇಪ್ಪತ್ತನೇ ಶತಮಾನದ ಉತ್ತರಾರ್ಧದಲ್ಲಿ 'ತಂತಿ, ಸರಳು, ಕಂಬಿಗಳನ್ನು ಬಳಸಿ ತೆರಪನ್ನು ರೇಖೆಗಳಿಂದ ಆವರಿಸುವ, ಲಯವಿನ್ಯಾಸವನ್ನು ಮೂಡಿಸುವ ರೇಖಾತ್ಮಕ ಶಿಲ್ಪ ವಿಧಾನ ರೂಢಿಗೆ ಬಂತು. ಯಂತ್ರನಾಗರಿಕತೆಯ ಗುಣಲಕ್ಷಣಗಳಿಗೆ ಹತ್ತಿರವಾದ ಮೂರ್ತಿಗಳನ್ನು ಸೃಷ್ಟಿಮಾಡುವ ಅಸೆಂಬ್ಲೇಜ್ ಅಥವಾ ಬೆಸುಗೆ ಜೋಡಣೆ ಕಲೆಯೂ ಒಂದು ಹೊಸವಿಧಾನವಾಗಿ ರೂಢಿಗೆ ಬಂತು. ಪಾಶ್ಚಾತ್ಯರಲ್ಲಿ ನಡೆದ ಈ ಪ್ರಯೋಗಗಳು ಭಾರತಲ್ಲಿಯೂ ನಡೆದವು. ಈ ಹಿನ್ನೆಲೆಯಲ್ಲಿ ಎನ್.ಎಚ್.ಕುಲಕರ್ಣಿಯವರ ಶಿಲ್ಪ ರಚನೆಗಳ ಪ್ರಯೋಗಶೀಲತೆ, ಸತ್ವ ಅರ್ಥಪೂರ್ಣವಾಗುತ್ತವೆ.

'ಶಿಲ್ಪಕಲೆಯ ತವರು ಎಂದು ಖ್ಯಾತವಾದ ಬಾದಾಮಿಯಲ್ಲಿ 1937ರಲ್ಲಿ ನಾರಾಯಣ ಎಚ್ ಕುಲಕರ್ಣಿಯವರು ಹುಟ್ಟಿದರು. ಮೊದಲು ಆರ್.ಎಂ. ಹಡಪದ್ ಅವರಿಂದ ಕಲೆಯ ಮೂಲಸೂತ್ರಗಳ ಅಭ್ಯಾಸ ಮಾಡಿದರು. ಚಿತ್ರಕಲೆಯ ಬಗ್ಗೆ ಹೆಚ್ಚಿನ ಅಭ್ಯಾಸಕ್ಕಾಗಿ ಕಲಾವಿದ ಮಿಣಜಿಗಿಯವರ ಶಾಲೆ, ನಂತರ ಟಿ.ಪಿ.ಅಕ್ಕಿಯವರ ಶಾಲೆಗಳಲ್ಲಿ ಕಲಿಕೆ

ನಡೆಸಿದರು. ಉನ್ನತ ಶಿಕ್ಷಣಕ್ಕಾಗಿ ಬರೋಡ ವಿಶ್ವವಿದ್ಯಾಲಯ ಸೇರಿದರು. ಅಲ್ಲಿ ಚಿತ್ರಕಲೆ, ಶಿಲ್ಪಕಲೆಗಳಲ್ಲಿ ಮುಂದುವರಿದ ಹಂತದ ತರಬೇತಿ ಪಡೆದು ವಿದ್ಯಾರ್ಥಿದೆಸೆಯಲ್ಲಿಯೇ ಅನೇಕ ಪ್ರಯೋಗಗಳನ್ನು ಮಾಡಿದರು. "ಇವರು ಬೆರಳಚ್ಚುಕಾರರಂತೆ ಮನಸ್ಸಿನ ಇಂಗಿತ ಹೊಳವು ಬೆರಳಲ್ಲಿ ಹರಿಯಬೇಕು ಎನ್ನುವವರು. ಬೆರಳುಗಳು ಮನಸ್ಸಿನ ಚಾಚಿದ ಅಂಗ ಎಂಬ ಭಾವನೆ. ವಿದ್ಯಾರ್ಥಿದೆಸೆಯಲ್ಲಿ ಆಕೃತಿ ಶಿಲ್ಪಗಳ ಬಗ್ಗೆ ಇದ್ದ ಆಸಕ್ತಿ ಕ್ರಮೇಣ ಅಮೂರ್ತ ಕಲೆಯ ಕಡೆಗೆ ತಿರುಗಿತು". 1965ರಲ್ಲಿ ಡಿಪ್ಲೊಮಾ ಪಡೆದ ನಂತರ ಲಕ್ನೋವಿನ ಕುಶಲಕಲೆ ಮತ್ತು ಲಲಿತಕಲೆಗಳ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇರಿದರು. ಲಕ್ನೋದಲ್ಲಿದ್ದಾಗ ನೇಪಾಳದ ಮಹಾರಾಜನಿಂದ ಸಮೂಹಶಿಲ್ಪ ರಚಿಸಲು ಆಹ್ವಾನ ಪಡೆದು ಒಂದು ವರ್ಷದಲ್ಲಿ ಮುಗಿಸಿ ಹಿಂತಿರುಗಿ ಬಂದರು.

ದೆಹಲಿಯಲ್ಲಿ, 1968ರಲ್ಲಿ, ಲಲಿತಕಲಾ ಅಕಾಡೆಮಿಯ ಕಾರ್ಯಾಗಾರದಲ್ಲಿ ಉಳಿದು ಕೆಲಸಕ್ಕೆ ತೊಡಗಿದರು. 'ಗಡಿ ಸ್ಟುಡಿಯೋವಿನಲ್ಲಿ ಲೋಹಶಿಲ್ಪದ ಶಿಕ್ಷಕರಾಗಿ, ಅಲ್ಲೂ ಸಹ ಲೋಹ ಎರಕ ಹುಯ್ಯುವ ಕುಲಿಮೆ (ಫೌಂಡ್ರಿ) ಯನ್ನು ಹೊಸದಾಗಿ ಸ್ಥಾಪಿಸಿದರು. 1982ರಲ್ಲಿ ದೆಹಲಿಯ ಹೊರವಲಯದ ಹತ್ತಿರ ಫೆಂಡ್ಸ್ ಕಾಲೊನಿಯ ಹತ್ತಿರದ ಹಳ್ಳಿ ಜುಲೇನಾದಲ್ಲಿ ಸ್ವಂತ ಸ್ಟುಡಿಯೊ ಸ್ಥಾಪಿಸಿದರು. ಅಂದಿನಿಂದ ಅವರ ವೃತ್ತಿ ಮತ್ತು ಪ್ರವೃತ್ತಿ ಎರಡೂ ಶಿಲ್ಪಕಲೆಯೇ ಆಯಿತು.

ಕುಲಕರ್ಣಿ ಪ್ರತಿಭಾವಂತ ಶಿಲ್ಪಿ. ಲಕ್ನೋದಲ್ಲಿ 1967ರಲ್ಲಿ ಇವರು ನೀಡಿದ ಪ್ರಥಮ ಏಕವ್ಯಕ್ತಿ ಪ್ರದರ್ಶನವೇ ವಿಮರ್ಶಕರ ಮೆಚ್ಚುಗೆ ಗಳಿಸಿತು. ತಮ್ಮ ವಿಶಿಷ್ಟ 'ಒರಟು ಮೇಲ್ಮೈ. ಮೈವಳಿಕೆಗಳ ಶಿಲ್ಪ'ಗಳನ್ನು ಇಷ್ಟಪಟ್ಟ ವಿಮರ್ಶಕರು ಇವರನ್ನು ಜಂಗಲ್‌ಜಿಮ್ ಎಂದು ಕರೆದರು. ಗೂಳಿ, ಬೆಕ್ಕು, ಪಕ್ಷಿಗಳ ರಚನೆಯಲ್ಲಿ ಇವರ ಸಾಧನೆ ಕಂಡುಬಂದಿತು. ವಿವಿಧ ಪ್ರದರ್ಶನಗಳಲ್ಲಿ ಭಾಗವಹಿಸಿದರು. 1973–74ರ ಅವಧಿಯಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಗೆ ಪತ್ರ ಬರೆದು ಕೇಂದ್ರ ಲಲಿತಕಲಾ ಅಕಾಡೆಮಿಯ ಧನಸಹಾಯದೊಂದಿಗೆ ಪ್ರಥಮ ಬಾರಿಗೆ ಕರ್ನಾಟಕದಲ್ಲಿ ಶಿಲ್ಪಿಗಳ ಶಿಬಿರ ನಡೆಯಲು ಕಾರಣವಾದರು.

ಕುಲಕರ್ಣಿಯವರು ಬೆಲ್ಜಿಯಂ, ಜಪಾನ್, ರಷ್ಯಾಗಳಲ್ಲಿ ನಡೆದ ಕಲಾಪ್ರದರ್ಶನಗಳಲ್ಲಿ ಪಾಲ್ಗೊಂಡಿದ್ದರು. ಬೇರೆ ಬೇರೆ ರಾಜ್ಯಗಳ ಲಲಿತಕಲಾ

ಅಕಾಡೆಮಿಗಳ ಪ್ರಶಸ್ತಿಗಳು ಇವರಿಗೆ ಬಂದವು. ನವದೆಹಲಿಯ ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್, ಲಕ್ನೋದ ರಾಜ್ಯ ಲಲಿತಕಲಾ ಅಕಾಡೆಮಿ, ಚಂಡೀಗಢ ಮ್ಯೂಸಿಯಂ, ಏರ್ ಇಂಡಿಯಾ, ಕರ್ನಾಟಕ ಲಲಿತಕಲಾ ಅಕಾಡೆಮಿ, ಮುಂಬಯಿ ಲಲಿತ ಕಲಾ ಅಕಾಡೆಮಿಗಳು ಮತ್ತು ಕೆಲವು ಖಾಸಗಿ ಸಂಸ್ಥೆಗಳು ಇವರ ಶಿಲ್ಪಗಳನ್ನು ಸಂಗ್ರಹಿಸಿವೆ.

ಭಾರತದ ಸಮಕಾಲೀನ ಕಲೆಯಲ್ಲಿ ಭಾರತೀಯ ಜೀವನಾನುಭವ ಮತ್ತು ಪಾಶ್ಚಾತ್ಯ ಕಲೆಯ ಪ್ರಭಾವ ಸೇರಿದೆ ಎಂಬ ಅಭಿಪ್ರಾಯ ಇವರದು. 'ಜೀವನ ಮತ್ತು ಕಲೆಯ ಸಮನ್ವಯವೇ ಇಂದಿನ ಕಲೆ' ಎಂದು ತಿಳಿಯುವ ಕಲಾವಿದರಿವರು.

ಮೊದಲು ಪ್ಲ್ಯಾಸ್ಟರ್. ಲೋಹ ಎರಕದ ಶಿಲ್ಪಗಳನ್ನು ಮಾಡುತ್ತಿದ್ದ ಕುಲಕರ್ಣಿಯವರು ನಿಧಾನಕ್ಕೆ ಬೇರೆ ಬೇರೆ ಮಾಧ್ಯಮಗಳನ್ನು ಬಳಸಲಾರಂಭಿಸಿದರು. ಜಂಕ್ ಆರ್ಟ್ ಕಡೆಗೂ ಅವರ ಒಲವು ಹೊರಳಿತು. ಉದಾಹರಣೆಗೆ "ಲಾಕ್‌ಔಟ್ ಎಂಬ ರಚನೆ. ಬಸ್ಸಿನ ಎಕ್ಸಾಸ್ಟ್ ಪೈಪನ್ನು ರಾಕೆಟ್ ಆಕಾರಕ್ಕೆ ಪರಿವರ್ತಿಸಿ, ಮೇಲೆ ಚೂಪುತುದಿ, ಕೆಳಗೆ ಮೂಗಾಲು ಆಧಾರ, ನಡುವೆ ಬಾಯಿಭಾಗಕ್ಕೆ ಬೀಗ ಜಡಿದಿರುವ ರಚನೆ ರಾಜಕೀಯ ವಿಡಂಬನೆಯಾಗಿದೆ. ಒಂದು ಆಗ ತುರ್ತುಪರಿಸ್ಥಿತಿಯಿತ್ತು. ಎರಡು, ಮಾಲಿಕ – ಕಾರ್ಮಿಕರ ಸಂಬಂಧಗಳು. ಮೂರು, ವಿಜ್ಞಾನ–ರಾಜಕೀಯ–ಸಮಾಜ ಸಂಬಂಧಗಳ ಬಗೆಗಿನ ಆಶಯಗಳು, ಈ ಕುತೂಹಲಕಾರಿ ರಚನೆಯ ಅರ್ಥಗಳು ವಿಸ್ತರಿಸುತ್ತವೆ. ಮುದ್ರಣ ಮೊಳೆಯ ಪ್ರಯೋಗ, ಕಪ್ಪು ಶಿಲೆಯ ಪ್ರಯೋಗ ಇವುಗಳನ್ನು ಗಮನಿಸಬಹುದು.

ಕೆಲವರು ಅಮೂರ್ತಕಲೆ ಪಾಶ್ಚಾತ್ಯರ ಸ್ವತ್ತು ಎಂದು ಭಾವಿಸುತ್ತಾರೆ. ಆದರೆ ಭಾರತಕ್ಕೂ ಅಮೂರ್ತ ಕಲೆ, ಅಮೂರ್ತತೆ ಹೊಸತೇನೂ ಅಲ್ಲ ಎನ್ನುತ್ತಾರೆ ನಾರಾಯಣ ಕುಲಕರ್ಣಿ. ಕುಲಕರ್ಣಿಯವರು ಅಚ್ಚುಮೊಳೆಗಳನ್ನು ಜೋಡಿಸಿ ಇಂತಹ ಅನೇಕ ಅಮೂರ್ತ ವಿನ್ಯಾಸಗಳನ್ನು ಮಾಡಿದ್ದಾರೆ.

ನಿಸರ್ಗ ಎಲ್ಲ ಕಲಾವಿದರಿಗೂ ಸ್ಫೂರ್ತಿಯ ತಾಣ. ಕುಲಕರ್ಣಿಯವರ ಮನಸೆಳೆವ ಆಶ್ವಸರಣಿಯ ವಿನ್ಯಾಸಕ್ಕೆ ನಿಸರ್ಗ ಸ್ಫೂರ್ತಿಯಾಗಿದೆ.

ಕೃಷ್ಣಯ್ಯನವರು ಸೂಕ್ತವಾಗಿ ಹೇಳಿರುವಂತೆ "ನಾರಾಯಣ ಕುಲಕರ್ಣಿಯವರ ಮೂವತ್ತು ವರ್ಷಗಳ ಶಿಲ್ಪ ರಚನೆಗಳ, ಮಾಧ್ಯಮ ನಿರ್ವಹಣೆಯ ಪ್ರಯೋಗಗಳನ್ನು, ಸೂಕ್ಷ್ಮ ಸಂವೇದನಾಶೀಲ ಮನಸ್ಸು ಕಾಲಕಾಲದ ಸ್ಥಿತಿ–ಗತಿಗಳಿಗೆ, ಪರಿಸರಕ್ಕೆ ತೋರಿದ ಪ್ರತಿಕ್ರಿಯೆಗಳನ್ನು, ಒಲವು ನಿಲುವುಗಳನ್ನು ಅನ್ವೇಷಕ ಪ್ರವೃತ್ತಿಯನ್ನು ಇಲ್ಲಿ ಸ್ಥೂಲವಾಗಿ ಪರಿಚಯಸಿದೆ........ಕರ್ನಾಟಕದ ಈ ಶಿಲ್ಪಿ ಬಹುಕಾಲ ಹೊರಗೇ ನೆಲೆಸಿ, ಉತ್ಸಾಹ ಮನೋದಾರ್ಢ್ಯಗಳಿಂದ ಸವಾಲುಗಳನ್ನು ಎದುರಿಸಿ, ಬಯಸಿದ ಕ್ಷೇತ್ರದಲ್ಲಿ ಅಸ್ತಿತ್ವವನ್ನು ಕಂಡುಕೊಂಡ ಬಗೆ ಬೆರಗುಗೊಳಿಸುತ್ತವೆ".

********

## ನಿಟ್ಟೂರು ಶೀನಿವಾಸರಾಯರು – ನೂರರ ನೆನಪು

ಈ ಕೃತಿಯನ್ನು ಕೃಷ್ಣಯ್ಯನವರು 2003ರಲ್ಲಿ ಪ್ರಿಸಮ್ ಬುಕ್‌ಹೌಸ್‌ನ ಪ್ರಕಟಣೆಗಾಗಿ ರಚಿಸಿದರು.

ನಾಡಿನ ಉದ್ದಗಲದಲ್ಲಿ ಚಿರಪರಿಚಿತರಾಗಿರುವ ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾಯರು ತಮ್ಮ ಜೀವನದ ನೂರನೆಯ ವರ್ಷದ ಮೈಲಿಗಲ್ಲನ್ನು ಮುಟ್ಟಲು ಹೊರಟ ಸಂದರ್ಭದಲ್ಲಿ ರಚಿತವಾದ ಕೃತಿ ಇದು.

1903ರಲ್ಲಿ ಬೆಂಗಳೂರಿನಲ್ಲಿ ಜನಿಸಿದ ಶೀನಿವಾಸರಾಯರು ಮದ್ರಾಸು ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಪಡೆದರು. 1927ರಲ್ಲಿ ವಕೀಲ ವೃತ್ತಿ ಆರಂಭಿಸಿದರು. 1928ರಲ್ಲಿ ಸತ್ಯಶೋಧನ ಪುಸ್ತಕಭಂಡಾರವನ್ನು ಆರಂಭಿಸಿದರು. 1930ರಿಂದ 42ರ ತನಕ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು. 1945ರಲ್ಲಿ ಪ್ರಾರಂಭವಾದ ಗೋಖಲೆ ಸಾರ್ವಜನಿಕ ವಿಚಾರಸಂಸ್ಥೆಯಲ್ಲಿ ಸಕ್ರಿಯ ಪಾತ್ರ ವಹಿಸಿದರು. 1953ರಲ್ಲಿ ಅಡ್ವೊಕೇಟ್ ಜನರಲ್ ಆಗಿ ನೇಮಕಗೊಂಡರು. 1955ರಲ್ಲಿ ಹೈಕೋರ್ಟಿನ ನ್ಯಾಯಮೂರ್ತಿಯಾಗಿ ನೇಮಕಗೊಂಡು 1961ರಲ್ಲಿ ಮುಖ್ಯನ್ಯಾಯಮೂರ್ತಿಯಾಗಿ ಪದೋನ್ನತಿ ಪಡೆದರು. 1963ರಲ್ಲಿ ಕರ್ನಾಟಕದ ಹಂಗಾಮಿ ಗವರ್ನರ್ ಆದರು. 1964ರಲ್ಲಿ ಸೆಂಟ್ರಲ್ ವಿಜಿಲೆನ್ಸ್ ಕಮಿಷನರಾಗಿ ನೇಮಕಗೊಂಡರು. ಅನೇಕ ಉನ್ನತ ಸಂಘ ಸಂಸ್ಥೆಗಳ ಅಧ್ಯಕ್ಷರಾಗಿ, ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದರು. ಇಂಡಿಯನ್ ಲಾ ಇನ್‌ಸ್ಟಿಟ್ಯೂಟ್‌ನಲ್ಲಿ ಸಕ್ರಿಯ ಪಾತ್ರ ವಹಿಸಿದರು. ಗಾಂಧೀಜಿಯವರ ಆತ್ಮಕಥೆಯನ್ನು ಕನ್ನಡಕ್ಕೆ

'ಸತ್ಯಶೋಧನ' ಎಂಬ ಹೆಸರಿನಲ್ಲಿ ಪತ್ನಿಯೊಡನೆ ಸೇರಿ ಕನ್ನಡಕ್ಕೆ ತಂದರು. ಗಾಂಧೀಜಿಯವರ 'ಅನಾಸಕ್ತಿಯೋಗ'ವನ್ನು ಕನ್ನಡಕ್ಕೆ ತಂದರು. ವಿಶ್ವಕರ್ನಾಟಕಕ್ಕೆ ಅಗ್ರಲೇಖನಗಳನ್ನು ಬರೆದರು. ಅನೇಕರ ಕೃತಿಗಳಿಗೆ ಮುನ್ನುಡಿ ಬರೆದರು. ಬೆಂಗಳೂರು ವಿಶ್ವವಿದ್ಯಾಲಯವು ಇವರಿಗೆ ಗೌರವ ಡಾಕ್ಟರೇಟ್ ನೀಡಿತು. ಕರ್ನಾಟಕ ಸರ್ಕಾರವು ರಾಜ್ಯಪ್ರಶಸ್ತಿ ನೀಡಿ ಈ ಹಿರಿಯರನ್ನು ಗೌರವಿಸಿತು.

ನಿಟ್ಟೂರು ಶ್ರೀನಿವಾಸರಾವ್ ಅವರು ಸುಮಾರು ಎರಡು ವರ್ಷಗಳ ಕಾಲ ತಮ್ಮ ನೆನಪಿನಿಂದ ಹೇಳಿದ ಘಟನೆ ಅನುಭವಗಳನ್ನು ಇಲ್ಲಿ ದಾಖಲಿಸಲಾಗಿದೆ. ಏಳು ಅಧ್ಯಾಯಗಳಲ್ಲಿ ಈ ಕೃತಿ ಅರಳಿದೆ. ನಮ್ಮ ಮನೆ, ಹೋರಾಟದ ಹಾದಿ, ವೃತ್ತಿ ವಲಯದಲ್ಲಿ, ಸಂಘ ಸಂಸ್ಥೆಗಳು–ಸಂಪರ್ಕ, ಹಿರಿಯರು–ಕಿರಿಯರು, ಅನುಭವ–ಚಿಂತನೆ, ಮತ–ಧರ್ಮ ಎಂಬ ಏಳು ಅಧ್ಯಾಯಗಳು ಇಲ್ಲಿವೆ. ಅರವತ್ತಕ್ಕೂ ಹೆಚ್ಚು ಕ್ಯಾಸೆಟ್‌ಗಳನ್ನು ತುಂಬಿದ ಈ ಧ್ವನಿ ಮುದ್ರಣವನ್ನು ಬರಹದ ರೂಪಕ್ಕೆ ತರುವ ಕಾರ್ಯವನ್ನು ಇಲ್ಲಿ ಮಾಡಲಾಗಿದೆ. ಪ್ರೊ. ಎಂ.ಎಚ್. ಕೃಷ್ಣಯ್ಯನವರೊಂದಿಗೆ ಡಾ. ಎಚ್.ಕೆ. ರಂಗನಾಥ್, ಪ್ರೊ. ಜಿ. ಅಶ್ವತ್ಥನಾರಾಯಣ, ರಾಜ್ಯಶ್ರೀ ಸತೀಶ್ ಇವರು ಈ ಕೃತಿ ಹೊರಬರಲಿಕ್ಕಾಗಿ ಶ್ರಮಿಸಿದ್ದಾರೆ.

ನನ್ನ ಮನೆ ಎಂಬ ಮೊದಲ ಆಧ್ಯಾಯದಲ್ಲಿ ಶ್ರೀನಿವಾಸರಾಯರು ತಮ್ಮ ಬಾಲ್ಯ, ವಿದ್ಯಾಭ್ಯಾಸ, ಉದ್ಯೋಗ, ಆಸಕ್ತಿಗಳು, ಕುಟುಂಬ ಇವುಗಳ ಬಗ್ಗೆ ಹೇಳಿದ್ದಾರೆ. ಈ ಪ್ರಥಮ ಅಧ್ಯಾಯ ಶುರುವಾಗುವುದೇ "ಐ ಹ್ಯಾವ್ ನಾಟ್ ಕಮ್ ಅಕ್ರಾಸ್ ಎನಿ ಪರ್ಸನ್ ಹೂ ರೆಪ್ರೆಸೆಂಟ್ಸ್ ಅನ್‌ಪ್ಲೆಸೆಂಟ್ ಥಿಂಗ್ಸ್." (ಅಪ್ರಿಯ ವಿಷಯಗಳನ್ನು ಪ್ರತಿನಿಧಿಸುವ ಯಾವುದೇ ವ್ಯಕ್ತಿಯೂ ನನಗೆ ಕಂಡುಬಂದಿಲ್ಲ). ಬದಲಾವಣೆ ಜಗದ ಸಹಜ ನಿಯಮ ಎನ್ನುವ ವಿಷಯವನ್ನು ನಾವೆಲ್ಲರೂ ತಾತ್ವಿಕವಾಗಿ ಒಪ್ಪುತ್ತೇವಾದರೂ ನಿಜಜೀವನದಲ್ಲಿ ನಮಗಿಂತ ಭಿನ್ನರಾದವರು ಅಥವಾ ನಾವು ನಿರೀಕ್ಷಿಸದೇ ಇದ್ದದ್ದು ಎದುರಾದಾಗ ಒಪ್ಪಿಕೊಳ್ಳಲು ಕಷ್ಟ ಪಡುತ್ತೇವೆ. ಅಂತಹುದರಲ್ಲಿ ಈ ಹಿರಿಯರು ಇಟ್ಟುಕೊಂಡಿರುವ ಸ್ವೀಕರಣ ಮನೋಭಾವ ಅಚ್ಚರಿ ಮೂಡಿಸುತ್ತದೆ. 'ನಮ್ಮ ಮನೆ' ಅಧ್ಯಾಯವನ್ನು ಓದುತ್ತಾ ಹೋದಂತೆ ನೂರು ವರ್ಷದ ಹಿಂದಿನ ಕರ್ನಾಟಕವು ನಮ್ಮ ಕಣ್ಣೆದುರಿಗೆ ಬರುತ್ತದೆ. ಜೊತೆಗೆ ಸಮಾಜಕ್ಕಾಗಿ ಏನಾದರೂ ಉತ್ತಮ ಕೆಲಸ ಮಾಡಬೇಕು, ಯಾವುದಾದರೂ ಅಗತ್ಯವನ್ನು

ಪೂರೈಸಬೇಕು ಎಂಬ ಸದಾಶಯವುಳ್ಳ ವ್ಯಕ್ತಿಯ ಬದುಕು ನಮ್ಮ ಮುಂದೆ ಅರಳಿಕೊಳ್ಳುತ್ತದೆ. ಬಹುಶಃ ಆ ಕಾಲವೇ ಹಾಗಿದ್ದಿರಬೇಕು. ಗಾಂಧೀಜಿಯವರ ಆದರ್ಶಗಳು ಎಲ್ಲರ ಮನಸ್ಸಿಗೂ ಹುರುಪು ತರುತ್ತಿದ್ದ ಕಾಲ. ಸರಳ ಜೀವನ ಉನ್ನತ ಚಿಂತನ ಎಂಬ ಆದರ್ಶವು ಜನರನ್ನು ಮುನ್ನಡೆಸುತ್ತಿದ್ದ ಕಾಲ. ನಿಟ್ಟೂರು ಶ್ರೀನಿವಾಸರಾಯರು ಪುಸ್ತಕಗಳ ಅಗತ್ಯವನ್ನು ಮನಗಂಡು ಪುಸ್ತಕ ಪ್ರಕಾಶನವನ್ನು ಪ್ರಾರಂಭಿಸಿದ್ದು, ಅವರು ಮತ್ತು ಅವರ ಹೆಂಡತಿ ಸೀತೆ ಗಾಂಧೀಜಿಯವರ ಅತ್ಮ ಕಥೆಯನ್ನು ಅನುವಾದಿಸಿ ಪ್ರಕಟಿಸಿದ್ದು, ತಮ್ಮ ಪ್ರಕಾಶನದಿಂದ ಶಿವರಾಮ ಕಾರಂತರ 'ಬಾಲಪ್ರಪಂಚ'ವನ್ನು ಪ್ರಕಟಿಸಿದ್ದು, ವಿಶ್ವೇಶ್ವರಯ್ಯನವರನ್ನು ಭೇಟಿಯಾಗಿದ್ದು ಇವೆಲ್ಲ ಓದಲು ಮನಸ್ಸಿಗೆ ಮುದ ನೀಡುವುದಷ್ಟೇ ಅಲ್ಲದೆ. ಒಂದು ಉತ್ತಮ ಸಾಂಸ್ಕೃತಿಕ ದಾಖಲೆಯನ್ನೋದಿದ ಅನುಭವವನ್ನೂ ಕೊಡುತ್ತವೆ. ನಿಟ್ಟೂರರ ಸಕರಾತ್ಮಕ ಚಿಂತನೆಯೇ ಅವರನ್ನು ಶತಾಯುಷ್ಯದ ಅರ್ಥಪೂರ್ಣ ಬದುಕಿಗೆ ಸಿದ್ಧಗೊಳಿಸಿದೆ ಅನ್ನಿಸುತ್ತದೆ. ಇಲ್ಲೊಂದು ಉದಾಹರಣೆ ಇದೆ. ಅವರ ನಿಡುಗಾಲದ ಜೀವನಸಂಗಾತಿಯು ತೀರಿಕೊಂಡು ಬಹಳ ವರ್ಷಗಳಾದ ಮೇಲೆ ಎಚ್.ಕೆ.ರಂಗನಾಥ್ ಕೇಳುತ್ತಾರೆ. 'ಇಷ್ಟು ವರ್ಷಗಳ ಕಾಲ ಜೊತೆಯಲ್ಲಿದ್ದಿರಿ, ಅವರು ಹೋಗಿಯೇ ಇಪ್ಪತ್ತು ವರ್ಷವಾಯಿತು ಹೇಗೆ ಅನಿಸುತ್ತೆ?' ಇದಕ್ಕೆ ಈ ಹಿರಿಯರು ಕೊಟ್ಟ ಉತ್ತರ ಇದು – 'ಬಿಟ್ಟು ಹೋದರು ಅನ್ನುವುದು ಲೋಕಾರೂಢಿಯ ಮಾತು. ನನಗೆ ಹಾಗೆ ಎನಿಸಿಯೇ ಇಲ್ಲ. ಸದಾ ನನ್ನ ನೆನಪಿನಲ್ಲಿರುತ್ತಾರೆ. ನಾನು ಹೇಗೆ ಒಂಟಿ?'

'ಹೋರಾಟದ ಹಾದಿ' ಎಂಬ ಎರಡನೆಯ ಅಧ್ಯಾಯದಲ್ಲಿ ಸ್ವಾತಂತ್ರ್ಯ ಚಳುವಳಿಯು ನಡೆಯುತ್ತಿದ್ದ ಕಾಲದಲ್ಲಿ ನಿಟ್ಟೂರು ಶ್ರೀನಿವಾಸರಾಯರು ಗಮನಿಸಿದ, ಅನುಭವಿಸಿದ ಸಂಗತಿಗಳಿವೆ. ದೇಶೀ ಸಂಸ್ಥಾನಗಳು, ರೆಸಿಡೆಂಟರು, ಕಾಂಗ್ರೆಸ್ ಜನಾಂದೋಲನದ ರೂಪ ತಳೆದಿದ್ದು, ಭಾಷಾವಾರು ಪ್ರಾಂತ್ಯಗಳ ಕಲ್ಪನೆಯ ಆರಂಭ, ಸೆಂಟ್ರಲ್ ಕಾಲೇಜಿನಲ್ಲಿ ಮೊದಲ ಮುಷ್ಕರ ನಡೆದಿದ್ದು, ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟವನ್ನು ಜನರ ಹೋರಾಟವಾಗಿ ಬದಲಾಯಿಸಿದ್ದು, ಭೂಗತ ಹೋರಾಟ, ಗಣೇಶ ಗಲಭೆ ಪ್ರಕರಣ, ಜೆ.ಪಿ.ಯವರೊಡನೆ ಕಳೆದ ದಿನಗಳು........ಹೀಗೆ ವಿಭಿನ್ನ ಅನುಭವಗಳು ಇಲ್ಲಿ ದಾಖಲಾಗಿವೆ. ನಿಟ್ಟೂರರ ಕೆಲವು ಅಭಿಪ್ರಾಯಗಳು ತಮ್ಮ ನೇರ, ಸ್ಪಷ್ಟ ಗುಣದಿಂದಾಗಿ ಗಮನ ಸೆಳೆಯುತ್ತವೆ. "ಜನರು ನನ್ನನ್ನು ಗಾಂಧಿವಾದಿ ಎಂದು

ಹೇಳಿದಾಗಲೆಲ್ಲ ನನಗೆ ಬಹಳ ಸಂಕೋಚವಾಗುತ್ತೆ....... ಗಾಂಧೀಜಿಯವರನ್ನು ನಾನು ಅರ್ಥ ಮಾಡಿಕೊಂಡಿರುವ ಮಟ್ಟಿಗೆ, ಅವರ ಆದರ್ಶ, ವಿಚಾರ, ಮೌಲ್ಯಗಳಲ್ಲಿ ನಂಬಿಕೆ ಮತ್ತು ಬದುಕಿನಲ್ಲಿ ಅವುಗಳನ್ನೆಲ್ಲ ಅನುಸರಿಸುವ ಮಟ್ಟಿಗೆ ನಾನು ಗಾಂಧಿವಾದಿ ಎನ್ನುವಂತಿಲ್ಲ........ಗಾಂಧೀಜಿಯವರೊಂದಿಗೆ ನೂರಕ್ಕೆ ನೂರರಷ್ಟು ಅಭಿಪ್ರಾಯ ಸಾಮ್ಯವುಳ್ಳ, ಅವರನ್ನು ಎಲ್ಲ ವಿಷಯಗಳಲ್ಲಿ ಒಪ್ಪುವ ಒಬ್ಬರೂ ಇಲ್ಲ ಎಂಬುದು ಜನರಿಗೆ ತಿಳಿಯದು." ಗಾಂಧೀಜಿಯವರು ಕೆಲವರು ತಿಳಿದುಕೊಂಡಂತೆ ಸರ್ವಾಧಿಕಾರಿಯಾಗಿರಲಿಲ್ಲ, ಜನರು ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವುದರಲ್ಲಿ ಅವರಿಗೆ ನಂಬಿಕೆ ಇತ್ತು ಎಂಬ ವಿಷಯವನ್ನೂ ನಿಟ್ಟೂರರು ಪ್ರಸ್ತಾಪಿಸುತ್ತಾರೆ. ಒಂದು ಸ್ವಾರಸ್ಯಕರ ಉದಾಹರಣೆ ನೀಡಿದ್ದಾರೆ. "ದೃಷ್ಟಾಂತವಾಗಿ ಅವರು ಬಿಹಾರಿನಲ್ಲಿ ಸಂಭವಿಸಿದ ಭೂಕಂಪವು ನಮ್ಮ ಜನಗಳು ಅನೇಕ ತಲೆಮಾರುಗಳಿಂದ ಅಸ್ಪೃಸ್ಯರ ವಿಚಾರದಲ್ಲಿ ಅಮಾನವೀಯವಾಗಿ ನಡೆದುಕೊಂಡಿರವುದಕ್ಕೆ ಪ್ರಾಯಶ್ಚಿತ್ತರೂಪವಾಗಿ ಒದಗಿದೆಯೆಂದು ಹೇಳಿದರು. ಇದನ್ನು ನಾನೊಬ್ಬನೇ ಏಕೆ ಟಾಗೂರರು, ಜವಹರಲಾಲರೂ ಒಪ್ಪದೆ ಇಂತಹ ಮೂಢನಂಬಿಕೆಯನ್ನು ಗಾಂಧೀಜಿಯವರು ಹರಡಬಾರದೆಂದು ಪ್ರತಿಸ್ಪಂದಿಸಿದೆವು." ಹೀಗೆ ಸ್ಪಷ್ಟ ಚಿಂತನೆ ಇದ್ದವರು ನಿಟ್ಟೂರರು. ಇವರು ರಾಜಕೀಯದಿಂದ ದೂರವೇ ಉಳಿದರು. 'ಜನರ ಪರವಾಗಿ ಸರ್ಕಾರದಿಂದ ದೂರವಿದ್ದು, ಬೇರೆ ಬೇರೆ ಸಂಘಸಂಸ್ಥೆಗಳಲ್ಲಿ ಇರುವುದನ್ನು ನಾನು ಇಷ್ಟ ಪಡುತ್ತಿದ್ದೆ. ಉದ್ದಕ್ಕೂ ಹಾಗೇ ನಡೆದುಕೊಂಡು ಬಂದಿದ್ದೇನೆ. ನಾನೊಬ್ಬ ನಾಗರಿಕನಾಗಿ, ಒಬ್ಬ ವಕೀಲನಾಗಿ ಅದು ನನ್ನ ಕರ್ತವ್ಯ ಎಂದು ಭಾವಿಸಿದ್ದೆ'.

'ವೃತ್ತಿ ವಲಯದಲ್ಲಿ' ಎಂಬ ಅಧ್ಯಾಯದಲ್ಲಿ ನಿಟ್ಟೂರರು ಅವರ ಸುದೀರ್ಘ ಕಾಲದ ವೃತ್ತಿಯ ಅನುಭವಗಳನ್ನು ದಾಖಲಿಸಿದ್ದಾರೆ. ಬ್ರಿಟಿಷ್ ಇಂಡಿಯಾದಲ್ಲಿ ಇದ್ದ ಕೋರ್ಟುಗಳ ಸ್ವರೂಪ, ಮೊದಲು ಕನ್ನಡದಲ್ಲೇ ಕೋರ್ಟಿನ ವ್ಯವಹಾರಗಳು ನಡೆಯುತ್ತಿದ್ದದ್ದು, ಇಂಗ್ಲಿಷ್ ಟೈಪ್‌ರೈಟಿಂಗ್ ಯಂತ್ರಗಳು ಬಂದ ಮೇಲೆ ಇಂಗ್ಲಿಷ್ ಹೆಚ್ಚಾಗಿದ್ದು, ನಮ್ಮ ಪರಂಪರೆಯ ಪಂಚಾಯತಿ ಕಟ್ಟೆಗಳಿಗೂ ಕೋರ್ಟುಗಳಿಗೂ ಇದ್ದ ವ್ಯತ್ಯಾಸ ಮುಂತಾದವುಗಳನ್ನು ದಾಖಲಿಸಿದ್ದಾರೆ.

'ಸಂಘ ಸಂಸ್ಥೆಗಳು – ಸಂಪರ್ಕ' ಎಂಬ ಅಧ್ಯಾಯದಲ್ಲಿ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘ, ಮೈಸೂರು ಮಹಾರಾಜ ಕಾಲೇಜಿನ ಕರ್ನಾಟಕ ಸಂಘ, ಮತ್ತು ಶಿವಮೊಗ್ಗದ ಕರ್ನಾಟಕ ಸಂಘಗಳಲ್ಲಿ ಕೆಲಸ ಮಾಡಿದ ಇವರ ಅನುಭವದ ದಾಖಲೆ ಇದೆ. ತಮ್ಮ ತರುಣ ವಯಸ್ಸಿನಲ್ಲೇ ಬೆಳೆಸಿಕೊಂಡ ಸಾಹಿತ್ಯಾಸಕ್ತಿಯು ನಿಟ್ಟೂರರ ವ್ಯಕ್ತಿತ್ವದ ಮೇಲೆ ಗಾಢ ಪ್ರಭಾವ ಬೀರಿರಬೇಕು. ಇವರು ಬೆಂಗಳೂರಿಗೆ ಬರುವ ವೇಳೆಗೆ ಕನ್ನಡ ಸಾಹಿತ್ಯ ಪರಿಷತ್ತು ಪ್ರಾರಂಭವಾಗಿತ್ತು. ಇವರ ಗುರುಗಳಾದ ಟಿ.ಎಸ್.ವೆಂಕಣ್ಣಯ್ಯನವರು ಇವರು ಸಾಹಿತ್ಯ ಪರಿಷತ್ತಿನ ಸದಸ್ಯರಾಗಲು ಕಾರಣರಾದರು. ಆಗ್ಗೆ ಸಾಹಿತ್ಯ ಪರಿಷತ್ತು ಶಂಕರಪುರದ ಬಾಡಿಗೆಮನೆಯೊಂದರಲ್ಲಿತ್ತು ಎಂಬ ವಿವರ ಆಶ್ಚರ್ಯ ತರುತ್ತದೆ. ದಾವಣಗೆರೆ ಸಾಹಿತ್ಯ ಸಮ್ಮೇಳನವು ಇವರು ಹೋಗಿದ್ದ ಪ್ರಥಮ ಸಮ್ಮೇಳನ. ಮುಂದೆ ಜೀವನದಲ್ಲಿ ಯಾವ ಸಾಹಿತ್ಯ ಸಮ್ಮೇಳನವನ್ನೂ ತಪ್ಪಿಸಿಕೊಳ್ಳಬಾರದೆಂದು ಇವರು ನಿರ್ಧಾರ ಮಾಡಿದರು!

ಕನ್ನಡ ಸಾಹಿತ್ಯ ಪರಿಷತ್ತಿಗೆ ನಾಮಕರಣ ಮಾಡಿದ ಸ್ವಾರಸ್ಯಕರ ಪ್ರಸಂಗವೂ ಈ ನೆನಪಿನ ಸುರುಳಿಯಲ್ಲಿ ದಾಖಲಾಗಿದೆ. 1938ರಲ್ಲಿ ಬಳ್ಳಾರಿ ಸಾಹಿತ್ಯ ಸಮ್ಮೇಳನದಲ್ಲಿ ಕರ್ನಾಟಕ ಸರಿಯೋ, ಕರ್ಣಾಟಕ ಸರಿಯೋ ಎಂದು ರಾತ್ರಿಯೆಲ್ಲ ಚರ್ಚೆ ಆದದ್ದು, ಕೊನೆಗೆ ಎರಡೂ ಬೇಡ, ಸಂಸ್ಥೆಗೆ ಕನ್ನಡ ಸಾಹಿತ್ಯ ಪರಿಷತ್ತು ಎಂದು ಹೆಸರಿಟ್ಟಿದ್ದು ಈ ವಿವರ ದಾಖಲಾಗಿದೆ. ಡಿವಿಜಿಯವರು ಗೋಖಲೆ ಸಾರ್ವಜನಿಕ ಸಂಸ್ಥೆಯನ್ನು ಸ್ಥಾಪಿಸಿ ಆಸಕ್ತಿಯಿಂದ ನಡೆಸಿದ್ದು, ಬೆಂಗಳೂರಿನ ಎಡಿಎ ರಂಗಮಂದಿರ ಪ್ರಾರಂಭವಾದದ್ದು ಅಲ್ಲಿ ನಡೆಯುತ್ತಿದ್ದ ನಾಟಕಗಳು, ಕಾರ್ಯಕ್ರಮವೊಂದರಲ್ಲಿ ಕೈಲಾಸಂ 'ತಿಪ್ಪಾರಳ್ಳಿ ಬಲು ದೂರ' ಹಾಡನ್ನು ಹಾಡಿದ್ದು, ಕಾಲಾನಂತರ ನಿಟ್ಟೂರರಿಗೆ 'ದಿ ಓಲ್ಡೆಸ್ಟ್ ಲಿವಿಂಗ್ ಮೆಂಬರ್' ಎಂದು ಸನ್ಮಾನ ಮಾಡಿದ್ದು ಈ ಸಂಗತಿಗಳು ಇವೆ. 1927ರಲ್ಲಿ ಗಾಂಧೀಜಿಯವರು ಬೆಂಗಳೂರಿಗೆ ಬಂದಾಗ ಎಡಿಎನಲ್ಲಿ ನಡೆದ 'ಕಬೀರ್‌ದಾಸ್' ನಾಟಕವನ್ನು ನೋಡಿ ಸಂತೋಷಪಟ್ಟು ಭಾಷಣ ಮಾಡಿದ್ದು ಓದಲು ಖುಷಿ ಕೊಡುವ ವಿಷಯ. ಬೆಂಗಳೂರು ಮತ್ತು ಮೈಸೂರಿನಲ್ಲಿ ಲಿಟರರಿ ಯೂನಿಯನ್ ಪ್ರಾರಂಭಗೊಂಡಿದ್ದು, 'ಕರ್ನಾಟಕ ಪ್ರಕಾಶಿಕಾ', ಸಾಧ್ವಿ, ಸ್ವರಾಜ್ಯ ಮುಂತಾದ ಪತ್ರಿಕೆಗಳು ಪ್ರಾರಂಭಗೊಂಡಿದ್ದು, ತ್ರಿವೇಣಿ ಪತ್ರಿಕೆ ನಡೆಸಿದ್ದು, ಕೆಂಗೇರಿ ಗುರುಕುಲ, ದೀನಬಂಧು ಆಶ್ರಮ ಪ್ರಾರಂಭಗೊಂಡದ್ದು, ಗಾಯನ

ಸಮಾಜದಲ್ಲಿ ಸಂಗೀತ ಕಛೇರಿಗಳು ನಡೆಯುತ್ತಿದ್ದದ್ದು, ಗಮಕ ಕಲಾ ಪರಿಷತ್ತು ಸ್ಥಾಪನೆಯಾದದ್ದು, ಹಿಂದ್ ಸ್ವರಾಜ್ ಮತ್ತು ಹಿಂದೀ ಪ್ರಚಾರ ಸಭಾದ ಚಟುವಟಿಕೆಗಳು, ಮೈಸೂರಿನ ವಯಸ್ಕ ಶಿಕ್ಷಣ ಸಮಿತಿ ಪ್ರಾರಂಭವಾದದ್ದು....ಹೀಗೆ ಅನೇಕ ಸಂಘ ಸಂಸ್ಥೆಗಳ ಚಟುವಟಿಕೆಗಳನ್ನು ಕುರಿತು ಬರೆಯಲಾಗಿದೆ. ಈ ಅಧ್ಯಾಯದಲ್ಲಿ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯ ಭಾಗವೊಂದು ನಮ್ಮ ಮುಂದೆ ಬಿಚ್ಚಿಕೊಳ್ಳುತ್ತದೆ.

'ಹಿರಿಯರು–ಕಿರಿಯರು' ಅಧ್ಯಾಯ ತುಂಬ ಮುಖ್ಯ ಅನ್ನಿಸುವಂಥದ್ದು. ಏಕೆಂದರೆ ಇದರಲ್ಲಿ ಅನೇಕ ಸಾಹಿತಿಗಳು, ಚಿಂತಕರು, ಗಣ್ಯವ್ಯಕ್ತಿಗಳೊಡನೆ ನಿಟ್ಟೂರರ ಒಡನಾಟ ದಾಖಲಾಗಿದೆ. ಮದರಾಸಿನ ಸಮುದ್ರತೀರದಲ್ಲಿ ಪಂಜೆ ಮಂಗೇಶರಾಯರ ಜೊತೆ ಸುಖಸಂಕಥಾವಿನೋದ ಮಾಡುತ್ತಿದ್ದುದು, ಇವರ ಸೋದರಮಾವ ಎಂ.ಹಿರಿಯಣ್ಣನವರು ಬರೆದ ಪುರುಷಾರ್ಥಗಳ ಬಗೆಗಿನ ಪುಸ್ತಕವನ್ನು ಆಗಿನ ಉಪರಾಷ್ಟ್ರಪತಿ ಎಸ್.ರಾಧಾಕೃಷ್ಣನ್ ಅವರು ಪ್ರಕಟಣೆಗಾಗಿ ತೆಗೆದುಕೊಂಡು ಹೋದದ್ದು, ಉತ್ತಮ ಹಾಸ್ಯಪ್ರಜ್ಞೆಯಿದ್ದ ಮುಳಿಯ ತಿಮ್ಮಪ್ಪಯ್ಯನವರೊಂದಿಗೆ ಕಳೆದ ಸಮಯ, ಮಾಸ್ತಿಯವರ ಜೊತೆ ಮಾಡಿದ ಪ್ರಯಾಣಗಳು, ಅವರ ಸರಳ ನೇರ ನಡವಳಿಕೆ, ಇವರ ಕಾಲಕ್ಕೇ ಲೆಜೆಂಡ್ ಆಗಿದ್ದ ಬಿ.ಎಂ.ಶ್ರೀ., ಯಾವಾಗಲೂ ಫಾರ್ಮಲ್ ಸೂಟು ಹಾಕುತ್ತಿದ್ದ ಅವರು ಕಾರಂತರಿಂದಾಗಿ ದಟ್ಟಿ ಪಂಚೆ ಉಡುವಂತಾಗಿದ್ದು, ಅವರ ಅದ್ಭುತ ವಾಗ್ಮಿತೆ, ಕೈಲಾಸಂ ಅವರ ಅದ್ಭುತ ಪ್ರತಿಭೆ, ಮತ್ತು ವಿಕ್ಷಿಪ್ತತೆ, ಕಾರಂತರ ಬಾಲಪ್ರಪಂಚದ ಪ್ರಕಟಣೆ, ಅವರ ಖಡಾಖಂಡಿತ ಸ್ವಭಾವ, ಬೇಂದ್ರೆಯವರ ಗಣಿತಪ್ರೇಮ, ಕಷ್ಟದಲ್ಲಿರುವ ಹೆಂಗಸರಿಗೆ ಮಲ್ಲೇಶ್ವರಂನ ಸೇವಾಸದನ ನಡೆಸುತ್ತಿದ್ದ ಲೇಡಿ ರಾಮನ್(ಸಿ.ವಿ.ರಾಮನ್ ಅವರ ಪತ್ನಿ), ಯುವವಿಜ್ಞಾನಿಗಳಿಗೆ ಹೀರೋ ಆಗಿದ್ದ ಸಿ.ವಿ.ರಾಮನ್, ಉತ್ತರ ಭಾರತದ ಪ್ರಾಬಲ್ಯವನ್ನು ವಿರೋಧಿಸಿ ದ್ರಾವಿಡ ಕಳಗಂ ಕಟ್ಟಿದ ರಾಮಸ್ವಾಮಿ ನಾಯ್ಕರ್, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದ ಕಾರ್ನಾಡ್ ಸದಾಶಿವರಾಯರು(ಬೆಂಗಳೂರಿನ ಸದಾಶಿವನಗರಕ್ಕೆ ಇವರ ಹೆಸರನ್ನೇ ಇಟ್ಟದ್ದು), ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದ ಶ್ರೀನಿವಾಸ ಶರ್ಮ, ಪ್ರಕೃತಿ ಚಿಕಿತ್ಸಕ ಪಂಡಿತ್ ತಾರಾನಾಥ್, ಗಾಂಧಿ ಸ್ಮಾರಕ ನಿಧಿಯ ಕಾರ್ಯದರ್ಶಿಯಾಗಿದ್ದ, ತಮ್ಮ ಸ್ವಾತಂತ್ರ್ಯ ಹೋರಾಟದ ಉತ್ಸಾಹ ಮತ್ತು ಸೇವಾ ಮನೋಭಾವಗಳಿಂದಾಗಿ ಜನರಿಂದ ಸರ್ದಾರ್ ಎಂಬ

ಬಿರುದನ್ನು ಪಡೆದ ವೆಂಕಟರಾಮಯ್ಯನವರು, ಕಾಂತಾಪುರ ಕಾದಂಬರಿ ಬರೆದ ಹಾಸನದ ರಾಜಾರಾಯರು, ಸಾಮಾಜಿಕ–ಸಾಂಸ್ಕೃತಿಕ ಕಾರ್ಯಗಳಲ್ಲಿ ಮುಂಚೂಣಿ ವಹಿಸುತ್ತಿದ್ದ ಎ.ಎನ್.ರಾಮರಾವ್(ಅ.ನ.ಕೃಷ್ಣರಾಯರ ಅಣ್ಣ), ವಿಶ್ವೇಶ್ವರಯ್ಯನವರನ್ನು 'ಇನ್ವಿಸಿಬಲ್ ಪೋಲೀಸ್‌ಮನ್' ಎಂದು ಕರೆದ ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲ ಟೇಟ್, ನ್ಯಾಷನಲ್ ಹೈಸ್ಕೂಲು ರಸ್ತೆಯ ಪಕ್ಕದಲ್ಲಿ ಉದ್ದಕ್ಕೂ ಬುಲೆವಾರ್ಡ್ ಬರಲು ಕಾರಣರಾದ ಹಾಗೂ ಮಹಿಳಾ ಸೇವಾ ಸಮಾಜದ ಸ್ಥಾಪಕರಲ್ಲಿ ಒಬ್ಬರಾದ ಪಾರ್ವತಮ್ಮ ಬೂಲವಾರ್ಡ್, ಹವಾಮಾನ ತಜ್ಞ ಮಳೂರ್‌ಕರ್, ಕುವೆಂಪು ಅವರಿಗೆ ಕನ್ನಡದಲ್ಲಿ ಕವಿತೆ ಬರೆಯಲು ಸಲಹೆ ನೀಡಿದ ಜೇಮ್ಸ್ ಎಚ್. ಕಸಿನ್ಸ್ ಮತ್ತು ಕಲಾಪೋಷಕಿಯಾದ ಅವರ ಪತ್ನಿ ಮಾರ್ಗರೆಟ್ ಕಸಿನ್ಸ್, ಸೂಕ್ಷ್ಮ ಮನಸ್ಸಿನ, ಕಟು ಮಾತಿನ ಆದರೆ ನಿಟ್ಟೂರರೊಂದಿಗೆ ಸೌಹಾರ್ದದಿಂದ ಇದ್ದ ಅದ್ಭುತ ಪ್ರತಿಭೆಯ ಚಿತ್ರಕಲಾವಿದ ಕೆ.ವೆಂಕಟಪ್ಪ, ಬಂಗಾಳದ ಪ್ರತಿಭಾವಂತ ಚಿತ್ರಕಲಾವಿದರಾದ ಮನೀಷಿ ಡೇ ಮತ್ತು ಮುಕುಲ್ ಡೇ. ಚಿತ್ರಕಲಾ ಪರಿಷತ್ತಿನ ಸ್ಥಾಪಕ ನಂಜುಂಡರಾವ್ ಅವರ ಗುರುಗಳೂ ಆ ಸಂಸ್ಥೆ ಸ್ಥಾಪನೆಯಾಗಲು ಮೂಲಕಾರಣರೂ ಆದ ಚಿತ್ರಕಲಾವಿದ ನರಹರಿ ಗೋಪಾಲಕೃಷ್ಣ ಪಾವಂಜೆ, ಅತ್ಯಂತ ಪ್ರತಿಭಾವಂತರೂ ಕಲಾಮಂದಿರದ ಸ್ಥಾಪಕರೂ ಆದ ಅ.ನ.ಸುಬ್ಬರಾಯರು, ಆಗಿನ ಕಾಲಕ್ಕೆ ಹೊಸದೆನಿಸಿಕೊಳ್ಳುತ್ತಿದ್ದ ರವೀಂದ್ರ ಸಂಗೀತ ಹಾಡುತ್ತಿದ್ದ ಸಾವಿತ್ರಿದೇವಿ, ಎಂ.ಇ.ಎಸ್. ಕಾಲೇಜನ್ನು ಬೆಳೆಸಿದ ಎಂ.ಪಿ.ಎಲ್. ಶಾಸ್ತ್ರಿ, ಸಂಗೀತ–ಸಾಹಿತ್ಯಪ್ರೇಮಿಯಾಗಿದ್ದ ಜಯಚಾಮರಾಜೇಂದ್ರ ಒಡೆಯರ್, ಜಸ್ಟಿಸ್ ತುಕೋಳ್, ಜಯಚಾಮರಾಜೇಂದ್ರ ಆಯುರ್ವೇದಿಕ್ ಕಾಲೇಜು ಸ್ಥಾಪನೆ ಮಾಡಲು ಆ ಕಾಲಕ್ಕೆ ಬಹುದೊಡ್ಡ ಮೊತ್ತವಾದ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟ ವೆಂಕಾಜಿರಾಯರು, ತೆರೆದ ಮನಸ್ಸಿದ್ದ ಸಂಸ್ಕೃತ ಪಂಡಿತ ಭಾಸ್ಕರ ಪಂತ ಸುಬ್ಬನರಸಿಂಹ ಶಾಸ್ತ್ರಿಗಳು, ಕಮ್ಯುನಿಸ್ಟ್ ಚಿಂತಕ ಸ್ಟ್ರ್ಯಾಟ್, ವಿಶ್ವೇಶ್ವರಯ್ಯ ಇಂಡಸ್ಟ್ರಿಯಲ್ ಮ್ಯೂಸಿಯಂ ಆಗಲು ಕಾರಣರಾದ, ಪ್ರಜಾಮತ, ಜನವಾಣಿಗಳನ್ನು ಪ್ರಾರಂಭಿಸಿದ ಬಿಎನ್.ಗುಪ್ತ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದು, ಯಾವ ಕೆಲಸವನ್ನಾದರೂ ಅಚ್ಚುಕಟ್ಟಾಗಿ ಮಾಡುತ್ತಿದ್ದ ಜಿ.ನಾರಾಯಣ, ಸಿರಿಭೂವಲಯದ ಮತ್ತು ಕರ್ಲಮಂಗಲದ ಶ್ರೀಕಂಠಯ್ಯ, ಅಪಾರ ಕರ್ತವ್ಯಶಕ್ತಿಯ ಹಾ.ಮಾ.ನಾಯಕ, ಬಾಲಕನಾಗಿದ್ದಾಗಿನಿಂದಲೂ ತ.ರಾ.ಸು ಅವರ ಪರಿಚಯ: ಮಗ ಓದುವುದಿಲ್ಲ

ಎಂದು ಚಿಂತೆ ಮಾಡುತ್ತಿದ್ದ ತರಾಸು ಅವರ ತಂದೆಯವರಿಗೆ ಇವರು 'ಆತ ತುಂಬ ಸಾಹಿತ್ಯ ಓದುತ್ತಾನೆ, ಚಿಂತೆ ಬೇಡ' ಎಂದು ಇವರು ಸಮಾಧಾನ ಮಾಡುತ್ತಿದ್ದದ್ದು, ವೈದ್ಯ ನರಸಿಂಹ ಪಂಡಿತ, ಪ್ರತಿಭಾವಂತ ವಕೀಲರಾಗಿದ್ದ ಇವರ ಸಂಬಂಧಿ ಪ್ರೊಫೆಸರ್ ರಾಮಸ್ವಾಮಿ, ಗೋವಿಂದ ಪೈಗಳ ನೆನಪಿನಲ್ಲಿ ಒಂದು ಸಂಸ್ಥೆ ಕಟ್ಟಿದ ಕು.ಶಿ.ಹರಿದಾಸಭಟ್ಟ, ರಂಗಕರ್ಮಿ ಎಂ.ಎಸ್.ಸತ್ಯು, ವಿಮರ್ಶಕ ಜಿ.ಎಚ್.ನಾಯಕ, ಶಿಲ್ಪಿ ವಾದಿರಾಜ್, ನಾಟಕಕಾರ ಸಿ.ಜಿ.ಕೆ. ಹೀಗೆ ವಿವಿಧ ಕ್ಷೇತ್ರಗಳ ಹತ್ತು ಹಲವು ವ್ಯಕ್ತಿಗಳೊಡನೆ ನಿಟ್ಟೂರರ ಒಡನಾಟವು ಇಲ್ಲಿ ದಾಖಲಾಗಿದೆ. ಬೆಂಗಳೂರಿನ ಅಷ್ಟೇ ಏಕೆ ಕೆಲವೊಮ್ಮೆ ಇಡೀ ಕರ್ನಾಟಕದ ಸಾಂಸ್ಕೃತಿಕ ಬಾಲ್ಯದ ಚಿತ್ರ ನಮ್ಮ ಕಣ್ಣೆದುರು ಒಮ್ಮೆ ಸುಳಿದು ಹೋಗುತ್ತದೆ ಈ ಅಧ್ಯಾಯದಲ್ಲಿ!

ಅನುಭವ – ಚಿಂತನೆ ಅಧ್ಯಾಯದಲ್ಲಿ ಇನ್ನಷ್ಟು ಅನುಭವಗಳು ಹಾಗೂ ಅವುಗಳಿಂದಾಗಿ ಇವರ ಚಿಂತನೆಯು ರೂಪುಗೊಂಡ ಬಗೆಯು ದಾಖಲಾಗಿದೆ. ಮೈಸೂರು ವಿಶ್ವವಿದ್ಯಾಲಯದ ಕರ್ನಾಟಕ ಸಂಘವು ಏರ್ಪಡಿಸುತ್ತಿದ್ದ ಚರ್ಚಾಸ್ಪರ್ಧೆಗಳಲ್ಲಿ ಭಾಗವಹಿಸುವುದರೊಂದಿಗೆ ನಿಟ್ಟೂರರ ಸಾಂಸ್ಕೃತಿಕ ಜೀವನ ಪ್ರಾರಂಭವಾಯಿತು. ಕನ್ನಂಬಾಡಿಯ ಅಣೆಕಟ್ಟು ಕಟ್ಟುತ್ತಿದ್ದ ಕಾಲದಿಂದಲೂ ಇವರು ಅದನ್ನು ನೋಡಿದ್ದು, ಹಿಂದೆ ಕಲ್ಯಾಣ ಮಂಟಪದ ಕಲ್ಪನೆಯೇ ಇರದೆ ಮನೆಯಲ್ಲೇ ಮದುವೆಗಳು ಆಗುತ್ತಿದ್ದದ್ದು, ಈಗಿನ ಕಲ್ಯಾಣ ಮಂಟಗಳಲ್ಲಿನ ಗದ್ದಲ, ಸಂಬಂಧಗಳಲ್ಲಿ ಉಂಟಾಗುವ ಯಾಂತ್ರಿಕತೆ, ಸಂಗೀತಗಾರರು ಅಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗುವ ರೀತಿ, ಮತ್ತೆ ಕೆಲವರು ಈಗ ಸರಳ ಮದುವೆಯ ರೀತಿಗೆ ಒಲಿಯುತ್ತಿರುವುದು, 1919ರಲ್ಲಿ ಟ್ಯಾಗೂರರು ಭಾರತಕ್ಕೆ ಬಂದ ಸಂದರ್ಭ ಮುಂತಾದವನ್ನು ದಾಖಲಿಸಲಾಗಿದೆ.

ನಿಟ್ಟೂರರ ನೂರರ ನೆನಪು ಪುಸ್ತಕ ಒಂದು ವಿಶಿಷ್ಟ ಕೃತಿ. ಇದರಲ್ಲಿ ಸಾಮಾನ್ಯ ಜೀವನಚರಿತ್ರೆಗಳಂತೆ ಒಂದು ಕಡೆಯಿಂದ ಕಥೆ ಹೇಳುತ್ತ ಹೋಗಿಲ್ಲ. ಬದಲಾಗಿ ಹಿಂದು ಮತ್ತು ಇಂದು ಎರಡನ್ನೂ ಒಂದೇ ಬೀಸಿನಲ್ಲಿ ನೋಡುತ್ತ ಆ ದಿನದಿಂದ ಈ ದಿನದವರೆಗಿನ ಅನುಭವಗಳನ್ನು ತೌಲನಿಕವಾಗಿ ನೋಡುತ್ತಾರೆ. ನೂರು ವರ್ಷವನ್ನು ಒಂದೇ ಸಲಕ್ಕೆ ಪಕ್ಷಿನೋಟದಿಂದ ನೋಡಿದ ಅನುಭವ ಈ ಪುಸ್ತಕದಿಂದ ಸಿಗುತ್ತದೆ. ಇಲ್ಲಿ ವ್ಯಕ್ತಿ ನಿಟ್ಟೂರು ಶ್ರೀನಿವಾಸರಾಯರು ಮುನ್ನೆಲೆಗೆ ಬರದೆ ಒಂದು ಕಾಲದ ಸರಿಯುವಿಕೆ ನಮ್ಮ

ಕಣ್ಣ ಮುಂದೆ ಬರುತ್ತದೆ. ಹಿರಿಯರೊಬ್ಬರ ಜೀವನ ಇಡೀ ಕಾಲದ ಕಥೆಯಾಗಿ ಕಾಣುವ ಆಹ್ಲಾದಕರ ರೀತಿ ಇಲ್ಲಿದೆ.

## ಆರ್.ಎಂ. ಹಡಪದ್

ಇದು ಕೃಷ್ಣಯ್ಯನವರು 1997ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಗಾಗಿ ರಚಿಸಿದ ಕೃತಿ. 'ಸಮಕಾಲೀನ ಕಲಾವಿದರು' ಮಾಲೆಯಲ್ಲಿ ಬಂದ ಕೃತಿ. ನಾಡಿನ ಪ್ರಸಿದ್ಧ ಚಿತ್ರಕಲಾವಿದರಾದ ಹಡಪದ್ ಅವರು ತಾವು ಬೆಂಗಳೂರಿನಲ್ಲಿ ಪ್ರಾರಂಭಿಸಿದ ಕೆನ್ ಕಲಾ ಶಾಲೆಯಿಂದ ಜನರ ಮನಸ್ಸಿನಲ್ಲಿ ಉಳಿದವರು.

1936ರಲ್ಲಿ ಬಾದಾಮಿಯಲ್ಲಿ ಜನಿಸಿದ ಹಡಪದ್ ಅವರು ಆ ಊರಿನ ಬಂಡೆಗಳು, ಅಲ್ಲಿನ ಸುಂದರ ಪ್ರಕೃತಿ ಮತ್ತು ಗುಹೆಗಳಲ್ಲಿ ಅರಳಿದ ಚಾಲುಕ್ಯ ಕಲೆಯಿಂದ ಆಳವಾಗಿ ಪ್ರಭಾವಿತರಾದರು. ಬಾಲ್ಯದಿಂದಲೂ ಅವರ ದೃಕ್‌ಗ್ರಹಣ ಶಕ್ತಿ ಪ್ರಬಲವಾಗಿತ್ತು. ಅಕ್ಷರ ಕಲಿಯುತ್ತಿದ್ದ ಎಳೆ ವಯಸ್ಸಿನಿಂದಲೇ ಅದರ ಬಣ್ಣ ಆಕಾರಕ್ಕೆ ಮನಸೋತವರು! ಬೆಟ್ಟಗುಡ್ಡಗಳು ಮಾತ್ರವಲ್ಲದೆ ಬಾದಾಮಿಯ ಗುಹೆಗಳು ಅವರಿಗೆ ಎರಡನೆಯ ಮನೆಯಾಗಿದ್ದವು. ಆ ಗುಹೆಗಳಿಗೆ ಬರುತ್ತಿದ್ದ ವಿದೇಶೀ ಚಿತ್ರಕಾರರು, ಶಿಲ್ಪಿಗಳ ಜೊತೆಗೆ ಒಡನಾಡಿ ಬಹಳಷ್ಟನ್ನು ಕಲಿತರು. ತಮಗಿದ್ದ ಸಾಂದರ್ಭಿಕ ಒತ್ತಡಗಳ ಕಾರಣದಿಂದ ಒಂದು ರೀತಿಯ ವೇಗವಾಗಿ ಚಿತ್ರರಚಿಸುವ ಕೌಶಲ್ಯ ಇವರಿಗೆ ಬಂತು. ಅಂದರೆ ಒಂದು ನಾಟಕವನ್ನೋ, ನೃತ್ಯವನ್ನೋ ನೋಡುತ್ತಲೇ ಅದರ ಬದಲಾಗುತ್ತಿರುವ ಅಂಗಭಂಗಿಗಳನ್ನು ರೇಖೆಗಳಲ್ಲಿ ಹಿಡಿಯುವ ಸಾಮರ್ಥ್ಯ. ಬಾಲ್ಯದಲ್ಲಿ ದಟ್ಟವಾಗಿ ಆದ ಬಾದಾಮಿಯ ಶಿಲ್ಪಕಲೆಯ ಪ್ರಭಾವ ಅವರ ಜೀವನದುದ್ದಕ್ಕೂ ಸೂಕ್ಷ್ಮವಾಗಿ ಅವರಲ್ಲಿ ಇದ್ದೇ ಇತ್ತು.

1961ರಲ್ಲಿ ಹಡಪದ್ ಅವರು ಕಲಾಶಿಕ್ಷಕರಾಗಿ ಬೆಂಗಳೂರಿಗೆ ಬಂದರು. 'ಬಾದಾಮಿಯ ನಂತರ ಬೆಂಗಳೂರು ಅವರ ಎಲ್ಲ ಚಿಂತನೆ, ಪ್ರಯೋಗ, ಸಾಧನೆಗಳ ಬದುಕಿನ ಸಿಹಿ–ಕಹಿಗಳ ತವರಾಯಿತು'.

'ಹಡಪದ್ ಅವರದು ಕಲೆಯ ವಿಷಯದಲ್ಲಿ ಯಾವುದನ್ನೇ ಆದರೂ ಕೆದಕುವ, ಬೆದಕುವ, ಹುಡುಕುವ ಸ್ವಭಾವ. ರೂಢಿಗತವಾದದ್ದನ್ನೂ ಪ್ರಶ್ನಿಸುವ ಪ್ರವೃತ್ತಿ ಬಾದಾಮಿ ಕಾಲದಿಂದ ಬಂದದ್ದು ಎಂಬುದನ್ನು ವಿಮರ್ಶಕರು

ಗುರುತಿಸಿದ್ದಾರೆ. ಅಕೆಡಮಿಕ್ ವಾಸ್ತವವಾದೀ ಶೈಲಿ ಮತ್ತು ಬಂಗಾಳಿ ನವೋದಯ ಶೈಲಿಯ ಕಲೆಯ ಹೊರಗೆ ಕರ್ನಾಟಕದಲ್ಲಿ ಹೊಸ ಒಲವುಗಳ ಅರಿವು ಇರದಿದ್ದ ಕಾಲದಲ್ಲಿ ಹಡಪದ್ ಕ್ರಿಯಾಶೀಲರಾದರು ಎಂದು ಕಲಾ ವಿಮರ್ಶಕಿ ಮಾರ್ಥಾ ಹೇಳಿದ್ದಾರೆ.' ..ರೂಢಿಯನ್ನು ಪ್ರಶ್ನಿಸುವ ಹಡಪದರ ಪ್ರವೃತ್ತಿ ತೀವ್ರವಾಗಿ ಬೆಳೆದದ್ದು ಕಲೆಯಲ್ಲಿ ಆಧುನಿಕ ದೃಷ್ಟಿ ಮೂಡಬೇಕೆಂಬ ಆಶಯವಿದ್ದ ಶಾಲಾ ಕಲಾ ಇನ್ಸ್‌ಪೆಕ್ಟರ್ ಶ್ರೀ ವಿ.ಕೆ.ಪಾಟೀಲ್ ಎಂಬವರ ಸಂಪರ್ಕದಿಂದ. 'ವಾಸ್ತವವಾದೀ ಅಕಾಡೆಮಿಕ್ ಕಲೆಯಿಂದ ನವ್ಯಕ್ಕೆ ಹಡಪದರು ಹೊರಳಲು ಬಹುಶಃ ವಿ.ಕೆ.ಪಾಟೀಲರ ಚಿಂತನಾ ವಿಧಾನ ಕಾರಣ ಎನ್ನಬಹುದು. ಬೆಂಗಳೂರಿಗೆ ಬಂದ ಮೇಲೆ ಹಡಪದರನ್ನು ರೂಪಿಸಿದ ಇನ್ನೊಂದು ಸ್ಥಳ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್........ ಅಲ್ಲಿಯ ವೆಂಕಟರಾಮನ್ ತುಂಬ ಪ್ರೋತ್ಸಾಹವಿತ್ತರು, ಯುವ ಕಲಾವಿದನ ಗಂಭೀರ ಆಸಕ್ತಿ ಕಂಡು ಅಲ್ಲೇ ಸ್ಕೆಚ್ ಮಾಡಲು ಚಿತ್ರ ರಚಿಸಲು ಅವಕಾಶ ಕೊಟ್ಟರು.

ಪರಿಚಿತ ಸಾಹಿತ್ಯ ಮಿತ್ರರೊಂದಿಗಿನ ಚರ್ಚೆ, ವಿಮರ್ಶೆಗಳು ಮತ್ತೊಂದು ಬಗೆಯ ವಿಚಾರ ಸರಣಿಗೆ ಅವಕಾಶವಿತ್ತವು. ಆಗ ಬಹುವಾಗಿ ಚರ್ಚೆಯಲ್ಲಿದ್ದ ಅಡಿಗ, ನರಸಿಂಹಸ್ವಾಮಿ ಮುಂತಾದವರ ಕಾವ್ಯ, ಇತರ ಸಾಹಿತ್ಯ ಕೃತಿಗಳ ಬಗ್ಗೆ ವಿಮರ್ಶೆ, ಸಾಹಿತ್ಯ ಚರ್ಚೆಯಲ್ಲಿ ಬರುತ್ತಿದ್ದ ವಿಚಾರಗಳು ಎಷ್ಟರ ಮಟ್ಟಿಗೆ ಕಲೆಗೂ ಅನ್ವಯವಾಗಬಹುದು, ಅಂತಹ ಹೊಸ ಚಿಂತನ ಕ್ರಮ ಇಲ್ಲಿ ಸಾಧ್ಯವಿಲ್ಲವೇ ಎಂಬುದು ಹಡಪದರ ಆಲೋಚನೆ. ಆ ವೇಳೆಗಾಗಲೇ ಆನಂದ ಕುಮಾರ ಸ್ವಾಮಿ, ಮುಲ್ಕ್‌ರಾಜ ಆನಂದ್ ಹೊಸ ನೋಟದ ಸಾಧ್ಯತೆಗಳನ್ನು ತೋರಿದ್ದರು. ಸಾಹಿತ್ಯ, ಕಲೆ ಬಗ್ಗೆ ಅಲ್ಲದೆ ಮನೋವಿಜ್ಞಾನ ಮತ್ತು ಕಲಾ ಶಿಕ್ಷಣದ ಬಗ್ಗೆ ಅಧ್ಯಯನ ಮಾಡಿದ್ದು ಆಗಲೆ.

ಬೆಂಗಳೂರಿನ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ 1963ರಲ್ಲಿ ಹಡಪದರ ಮೊದಲ ಏಕವ್ಯಕ್ತಿ ಕಲಾ ಪ್ರದರ್ಶನ ನಡೆಯಿತು. ಇದರಲ್ಲಿ ಹೆಚ್ಚಾಗಿ ಸಾಂಪ್ರದಾಯಿಕ ಚಿತ್ರಗಳಿದ್ದರೂ ಬದಲಾವಣೆಯ ಅಂಶಗಳನ್ನು ಸೂಚಿಸುವ ಅಂಶಗಳೂ ಇದ್ದವು. 'ಹಡಪದರು ಹಳೆಯದರಿಂದ ಭಿನ್ನವಾಗುವ, ತುಳಿದ ಜಾಡಿನಿಂದ ಹೊಸ ಹಾದಿಗೆ ಹೊರಳುವ ಮಾರ್ಗಗಳ ಬಗ್ಗೆ ಆಲೋಚನೆಗೆ ತೊಡಗಿದರು. ಎಲ್ಲರೂ ಹೂವು ರಚಿಸುತ್ತಾರೆ, ಮುಳ್ಳು

ರಚಿಸಬಾರದೇಕೆ? ಮುಳ್ಳಿನ ತಂತಿಯ ಸಿಂಬಿ ರೇಖಾತ್ಮಕ, ಅದನ್ನು ಘನವಾಗಿ, ಸಾಲಿಡ್ ಆಗಿ ಮೂರು ಆಯಾಮದಲ್ಲಿ ತರಬಹುದಲ್ಲವೆ? '......ಈ ರೀತಿಯ ಯೋಚನೆಗಳು ಹಡಪದರದು. ಮುಂದೆ ಇವರು ತಮ್ಮ ಪ್ರಯೋಗಶೀಲ ಮನಸ್ಸಿನಿಂದ 'ನಗರ' ಚಿತ್ರಸರಣಿಯನ್ನು ರಚಿಸಿದರು. 1964ರಲ್ಲಿ ಹಡಪದ್ 'ನಾವು ನಾಲ್ವರು' ಪ್ರದರ್ಶನದಲ್ಲಿ ಸಿಟಸ್ಕೇಪ್ಸ್ ಸರಣಿ ಚಿತ್ರಗಳನ್ನು ಸೇರಿಸಿದರು (ಠಾಕೂರ್ ಕೆ ಪಟೇಲ್, ಎನ್.ಎಸ್.ಮುನೋಳಿ, ಜಿ.ವೈ. ಹಡಪದ್). ಇದು ಹಡಪದ್ ಅವರ ಕಲಾಜೀವನದಲ್ಲಿ ತಿರುವೊಂದನ್ನು ತಂದ ಪ್ರದರ್ಶನವಾಯಿತು.

ಕಲೆಯ ಮೇಲಿನ ಅಪಾರ ಆಸಕ್ತಿಯಿಂದಾಗಿ ಬೆಂಗಳೂರನಲ್ಲಿ 1968ರಲ್ಲಿ ಹಡಪದ್ ಅವರು ಕೆನ್ ಕಲಾಶಾಲೆಯನ್ನು ಪ್ರಾರಂಭಿಸಿದರು. ಇದರಲ್ಲಿ ಭಾರತೀಯವೂ ಅಲ್ಲದ ಪರೀಕ್ಷಾ ದೃಷ್ಟಿಯ ಅಕೆಡೆಮಿಕ್ ಪದ್ಧತಿಯೂ ಅಲ್ಲದ ಹೊಸ ವಿಧಾನವೊಂದರಲ್ಲಿ ಪಾಠ ಮಾಡುತ್ತಿದ್ದರು. "ವಿದ್ಯಾರ್ಥಿಗಳ ಹಿನ್ನೆಲೆ, ಆಸಕ್ತಿ, ದೌರ್ಬಲ್ಯ, ಶಕ್ತಿಗಳನ್ನರಿತು ಒಳಗಿನ ಸತ್ವ ಪ್ರಕಾಶಗೊಳ್ಳುವ ಬಗೆಗೆ ಒತ್ತು ನೀಡುವ ವಿಧಾನ" ಇದು. ಈ ಶಾಲೆ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವೂ ಆಯಿತು. ಇಲ್ಲಿ 'ಕಲಾವಿಕಾಸ' ಎಂಬ ಪತ್ರಿಕೆಯನ್ನು ಸಹ ಪ್ರಕಟಿಸುತ್ತಿದ್ದರು.

'ವಿದ್ಯಾರ್ಥಿಗಳಿಗೆ ಕಲಿಸುವುದೆಂದರೆ ಹಡಪದರಿಗೆ ತಾವೂ ಕಲಿಯುತ್ತಿರುವ ಭಾವನೆ. ವಿದ್ಯಾರ್ಥಿಗಳಿಗಾಗಿ ಎಂದರೂ ಅವರಿಗೂ ಹೊಸ ಅಭಿವ್ಯಕ್ತಿ ಕ್ರಮ, ತಂತ್ರ, ರೂಪಗಳ ಅರಸುವಿಕೆಯೇ ಆಗುತ್ತಿತ್ತು. ಏಕೆಂದರೆ ಶಿಕ್ಷಕ ತಾನು ನಿಖರವಾಗಿ ತಿಳಿಯದೆ, ಪೃಥಕ್ಕಾಗಿ ವಿಚಾರಗಳನ್ನು ಮಥಿಸದೆ ಬೋಧಿಸುವ ಅರ್ಹತೆ ಪಡೆಯುವುದಿಲ್ಲ ಎಂಬುದು ಅವರ ನಿಲುವು. ಹೀಗಾಗಿ ಹಡಪದರು ಇಲ್ಲಿ ಏಕಕಾಲಕ್ಕೆ ಸೃಜನಶೀಲ ಕಲಾವಿದ ವಿಮರ್ಶಕ, ಶಿಕ್ಷಕ ಎಲ್ಲವೂ ಆಗುತ್ತಿದ್ದರು. ಅಂತಹ ಕಲಾವಿದರು ಅಪರೂಪ'.

ಹಡಪದರದು ಅನೇಕ ಆಯಾಮಗಳುಳ್ಳ ಕಲೆ. ಕೃಷ್ಣಯ್ಯನವರು ಈ ಕಲಾವಿದರ ವ್ಯಕ್ತಿ ಚಿತ್ರಗಳು, ಭಿತ್ತಿ ಚಿತ್ರಗಳು, ಗಾಜಿನ ಚಿತ್ರಗಳು, ಅಮೂರ್ತ ರಚನೆಗಳು, ಸಮಾಜ, ಧರ್ಮವನ್ನು ಕುರಿತು ಚಿಂತನೆ ಮಾಡಿ ರಚಿಸಿದ ಚಿತ್ರಗಳು ಈ ಎಲ್ಲದರ ವಿವರಣೆ ನೀಡಿದ್ದಾರೆ. ಜೀವನದಲ್ಲಿ ಸಾಕಷ್ಟು ಕಷ್ಟ, ತಾರತಮ್ಯಗಳನ್ನು ಅನುಭವಿಸಿದವರು, ಬದುಕಿನ ಕಹಿ ಉಂಡವರು. ಹೀಗಾಗಿ ಮನುಷ್ಯರ ಕಷ್ಟಸುಖಗಳ ಬಗ್ಗೆ ಸೂಕ್ಷ್ಮ ಸಂವೇದನೆಯನ್ನು ಬೆಳೆಸಿಕೊಂಡವರು.

ಅವರ ಬಗ್ಗೆ ರಚಿತವಾಗಿರುವ ಈ ಕೃತಿಯನ್ನು ಓದಿದಾಗ ಮೂಡುವ ಭಾವನೆ ಏನೆಂದರೆ ಹಡಪದ್ ಅವರು ಒಬ್ಬ ಸಮಾಜಮುಖೀ ಚಿಂತನಶೀಲ ಕಲಾವಿದ ಎಂಬುದು. ಕೃಷ್ಣಯ್ಯನವರು ಸಮರ್ಥವಾಗಿ ಸೂಚಿಸಿರುವಂತೆ "ಹಡಪದರ ಕಲಾ ಸೃಷ್ಟಿ ಬದುಕನ್ನು ಅಪ್ಪಿಕೊಳ್ಳುತ್ತದೆ, ವಿಶ್ವವನ್ನು ತಬ್ಬಿಕೊಳ್ಳುತ್ತದೆ".

*******

## ಪ್ರಸ್ತಾವನೆ – ಮುನ್ನುಡಿಗಳು

ಕೃಷ್ಣಯ್ಯನವರು 'ಕಥನಕಲೆಯ ನಿರಂರತೆ' ಎಂಬ ಶೀರ್ಷಿಕೆಯಡಿಯಲ್ಲಿ ನಿರಂಜನರ ವಿಶ್ವಕಥಾಕೋಶ ಪ್ರಸ್ತಾವನೆಗಳ ಸಂಕಲನಕ್ಕೆ ಮುನ್ನುಡಿ ಬರೆದಿದ್ದಾರೆ.

ನವಕರ್ನಾಟಕ ಪ್ರಕಾಶನ ಸಂಸ್ಥೆಯ ಈ ಯೋಜನೆಯನ್ನು 'ಅಪೂರ್ವ ಸಾಹಸ' ಎಂದು ಕರೆದಿದ್ದಾರೆ. ಪ್ರಪಂಚದ ಅನೇಕ ದೇಶಗಳ ಕಥೆಗಳನ್ನು ಒಟ್ಟಿಗೆ ತರುವ ಈ ಕೆಲಸದ ಮಹತ್ವವನ್ನು ಗುರುತಿಸುತ್ತಾರೆ – ".........ಈ ಸಂಪುಟಗಳ ವ್ಯಾಪ್ತಿ ಅನನ್ಯವಾದದ್ದು. ಯಾವುದೇ ಭಾಷೆಯಲ್ಲಿ ಇಂತಹ ಕೊಡುಗೆ ಬಂದಿದೆಯೋ ಇಲ್ಲವೋ, ಸಂದೇಹವಿದೆ. ಕ್ರಿ.ಪೂ. 3000ದ ಕಾವ್ಯಕಥಾಭಾಗಗಳಿಂದ 20ನೇ ಶತಮಾನದ ಉತ್ತರಾರ್ಧದವರೆಗಿನ ಕಥೆಗಳ ವೈವಿಧ್ಯಪೂರ್ಣ ಹರಹು."

ಕೃಷ್ಣಯ್ಯನವರು ಹೇಳುವಂತೆ "ವಿಶ್ವಕಥಾವಾಹಿನಿ ಪ್ರಸ್ತಾವನೆಗಳನ್ನು ಓದಿದರೂ ಸಾಕು, ಒಂದು ವಿಷಯ ಮನದಟ್ಟಾಗುತ್ತದೆ. ಜಗತ್ತಿನ ಚರಿತ್ರೆ ಎಂದರೆ ರಾಜರ ಕಥೆಯಲ್ಲ, ಜನ ಸಮುದಾಯದ್ದು. " ಪ್ರಪಂಚದ ವಿವಿಧ ಕಥೆಗಾರರ ವೈವಿಧ್ಯಮಯ ಅಭಿವ್ಯಕ್ತಿಯನ್ನು ಹೊಂದಿರುವ ಈ ಕಥಾವಾಹಿನಿಯನ್ನು ಇವರು ಪಾಲ್‌ಗ್ರೇವ್ ಅವರು 'ಗೋಲ್ಡನ್ ಟ್ರೆಷರಿ'ಗೆ ಹೋಲಿಸುತ್ತಾರೆ. ಆಗಾಗ್ಗೆ ಹಿಂದಿರುಗಿ ಓದಲಿರುವ ಕಥೆಗಳ ಬಂಗಾರದ ಕಣಜ!'

ಕೃಷ್ಣಯ್ಯನವರು ಈ ಪ್ರಸ್ತಾವನೆಯಲ್ಲಿ ರಷ್ಯಾದ ಪ್ರಸಿದ್ಧ ಲೇಖಕ, ವಿಮರ್ಶಕ ಮಿಖೇಲ್ ಬಖ್ತಿನ್‌ನ ವಿಚಾರಗಳನ್ನು ಪ್ರಸ್ತಾಪಿಸುತ್ತಾರೆ. ಕಾಲ ಮತ್ತು ದೇಶ ಎರಡನ್ನೂ ಕೂಡಿಸಿ ಅವನು ಕ್ರೋನೋಟೋಪ್ ಎಂಬ ಪದವನ್ನು ಸೃಷ್ಟಿಸಿರುವುದರ ಬಗ್ಗೆ ಹೇಳುತ್ತಾರೆ. 'ಕಾದಂಬರಿಗಳ ಸಂಕೀರ್ಣತೆ ಕಥೆಗಳಿಗೆ ಇಲ್ಲವಾದರೂ ಅವೂ ಆಯಾ ಕಾಲ ಮತ್ತು ಸಮಾಜದ ಫಲಿತಗಳೆ, ಸೃಷ್ಟಿಗಳೆ. ಕೆಲವೊಮ್ಮೆ ವ್ಯಕ್ತವಾಗಿ, ಕೆಲವೊಮ್ಮೆ ಅವ್ಯಕ್ತವಾಗಿ ಅಭಿವ್ಯಕ್ತಿ. ಓದುಗ

ಅವುಗಳೊಂದಿಗೆ ಕಾಲ್ಪನಿಕವಾಗಿ ಸ್ಪಂದಿಸುತ್ತಾನೆ ಎಂಬುದು ಬಖ್ತಿನ್‌ನ ಅಭಿಪ್ರಾಯ. ಇದನ್ನು ಆತ

'ಡಯಾಲಾಗಿಕ್ ಇಮ್ಯಾಜಿನೇಷನ್' ಎಂಬ ಪರಿಕಲ್ಪನೆಯ ಮೂಲಕ ವಿವರಿಸುತ್ತಾನೆ. "ರಂಗಭೂಮಿಯ ಮೇಲೆ ನಾಟಕ ಪ್ರದರ್ಶನ, ಪ್ರೇಕ್ಷಕರ ಸಂಬಂಧ, ಆಗಿನ ಅನುಭವ – ಒಂದೆಡೆ ಪಾತ್ರಗಳು, ಸನ್ನಿವೇಶ, ಘಟನೆ, ಸಂಗತಿಗಳು ಇನ್ನೊಂದು ಕಡೆ ಪ್ರೇಕ್ಷಕನಿಗೆ ಚಿರಪರಿಚಿತವಾದ ವಾಸ್ತವ ಜಗತ್ತಿನ ಅನುಭವಗಳು ಕೂಡಿ ಮೂರನೆಯ ಅನುಭವ ಜಗತ್ತು ಸೃಷ್ಟಿಯಾಗುತ್ತದೆ. ಅದನ್ನು ರೂಪಕ ಜಗತ್ತು (ಮೆಟಫಾರಿಕಲ್ ವರ್ಲ್ಡ್) ಎನ್ನಲಾಗುತ್ತದೆ. ಕಥನ ಕಲೆಗೆ ಸಂಬಂಧಿಸಿದಂತೆ ಬಖ್ತಿನ್‌ನ ವಿವರಣೆ ಇದಕ್ಕೆ ಸಂವಾದಿಯಾದದ್ದು. ನಾಟಕದ ಬದಲು ಪುಸ್ತಕ ಮತ್ತು ಪ್ರೇಕ್ಷಕನ ಬದಲು ಓದುಗ ಎಂಬ ಪದಗಳನ್ನು ಇಟ್ಟುಕೊಂಡು ನಾವು ಮೇಲಿನ ವಿವರಣೆಯನ್ನು ಓದಿದರೆ ಇದು ಅರ್ಥವಾಗುತ್ತದೆ. ಕಥೆಗಳನ್ನು ಓದುವಾಗ ಓದುಗನಿಂದ ಸೃಷ್ಟಿಯಾಗುವ ಜಗತ್ತನ್ನು ರೂಪಕ ಜಗತ್ತು ಎನ್ನುವುದು".

ಈ ವಿವರಣೆಯೊಂದಿಗೆ ಕೃಷ್ಣಯ್ಯನವರು ನಿರಂಜನರ ಪ್ರಸ್ತಾವನೆಯ ಪ್ರಸ್ತುತತೆಯನ್ನು ಹೀಗೆ ವಿವರಿಸುತ್ತಾರೆ. – "ವಿವಿಧ ಕಾಲಾಂತರದ, ದೇಶವಿದೇಶದ, ಬಹುವಾಗಿ ಅಪರಿಚಿತ ದೇಶಗಳ ಕಥೆಗಳಾದ ಕಾರಣ ನಿರಂಜನರ ಪ್ರಸ್ತಾವನೆಗಳ ಔಚಿತ್ಯ ಸ್ಪಷ್ಟವಾಗುತ್ತದೆ".

ಹೀಗೆ ಕನ್ನಡ ಸಾಹಿತ್ಯ, ಸಂಸ್ಕೃತಿಗಳ ದೃಷ್ಟಿಯಿಂದ ಮಹತ್ವಪೂರ್ಣವಾದ ಕೃತಿಯೊಂದರ ಪ್ರಸ್ತಾವನೆಗಳ ಸಂಕಲನಕ್ಕೆ ಕೃಷ್ಣಯ್ಯನವರು ಅದರ ಘನತೆಗೆ ತಕ್ಕ ಗಂಭೀರ ಮುನ್ನುಡಿಯನ್ನು ಬರೆದಿದ್ದಾರೆ.

## ಹಳೆಯ ಗದ್ಯಸಾಹಿತ್ಯ – 2 – ಪ್ರಸ್ತಾವನೆ

ಕೃಷ್ಣಯ್ಯನವರು ತಮ್ಮ ಲೇಖನಗಳನ್ನು ಪ್ರಾರಂಭಿಸುವ ರೀತಿ ತುಂಬ ಸ್ವಾರಸ್ಯಕರವಾದುದು. 'ಅವರು ಹಳೆಯ ಗದ್ಯ ಸಾಹಿತ್ಯ – 2' – ಈ ಪುಸ್ತಕಕ್ಕೆ ಬರೆದ ಪ್ರಸ್ತಾವನೆಯನ್ನು ಹೀಗೆ ಪ್ರಾರಂಭಿಸುತ್ತಾರೆ.......

"ಎರಡು ಪ್ರಸಿದ್ಧವಾದ ಹೇಳಿಕೆಗಳಿವೆ. ಒಂದು ಸಂಸ್ಕೃತ, ಇನ್ನೊಂದು ಕನ್ನಡ. ವಾಮನ ತನ್ನ ಕಾವ್ಯಾಲಂಕಾರ ಸೂತ್ರವೃತ್ತಿಯಲ್ಲಿ "ಗದ್ಯಂ ಕವೀನಾಂ

ನಿಕಷಂ ವದಂತಿ" ಎಂದಿದ್ದಾನೆ. ಕವಿಯ ಪ್ರತಿಭೆಗೆ ಗದ್ಯ ಒಂದು ಒರೆಗಲ್ಲು ಎಂಬ ಮಾತು ಅಭಿವ್ಯಕ್ತಿಯ ಸೂಕ್ಷ್ಮಗಳನ್ನೂ, ಕಷ್ಟವನ್ನೂ ತಿಳಿಸುತ್ತದೆ. ಕವಿ ಮುದ್ದಣ ರಾಮಾಶ್ವಮೇಧದ ಪ್ರಾರಂಭದಲ್ಲಿ ಮನೋರಮೆಯಿಂದ 'ಪದ್ಯಂ ವಧ್ಯಂ ಗದ್ಯಂ ಹೃದ್ಯಂ' ಎಂದು ಹೇಳಿಸಿದ್ದಾನೆ. ಇದು ಓದುಗನ – ಸಹೃದಯನ ಅಭಿಪ್ರಾಯದಂತೆ ತೋರಿದರೂ ಕವಿಯ ಹೇಳಿಕೆಯೇ ಆಗಿದೆ. ಆತನ ಮನೋಧರ್ಮವನ್ನು ಸೂಚಿಸುತ್ತದೆ".

ಹೀಗೆ ಪ್ರಾರಂಭಗೊಂಡ ಪ್ರಸ್ತಾವನೆಯು ಗದ್ಯವನ್ನು ಹೃದ್ಯವಾಗಿಸುವುದರಲ್ಲಿರುವ ಸವಾಲುಗಳನ್ನು ಕುರಿತು ವಿವರಿಸುತ್ತಾರೆ. ಕನ್ನಡ ಗದ್ಯಸಾಹಿತ್ಯದ ಇತಿಹಾಸವನ್ನು ಗಮನಿಸುತ್ತಾರೆ. ಶಾಸನ, ಚಂಪೂಕಾವ್ಯ ಮತ್ತು ಗದ್ಯಕೃತಿಗಳಲ್ಲಿ ಕನ್ನಡ ಗದ್ಯವು ಅರಳಿರುವುದನ್ನು ಸೂಚಿಸುತ್ತಾರೆ. ವಡ್ಡಾರಾಧನೆಯ ಭಾಷಾಶೈಲಿಗೂ ಹತ್ತೊಂಬತ್ತನೆಯ ಶತಮಾನದ ಬಾಣಕಾದಂಬರಿಯ ಭಾಷಾಶೈಲಿಗೂ ಇರುವ ವಿಸ್ಮಯಕರ ಹೋಲಿಕೆಯ ಕಡೆ ನಮ್ಮ ಗಮನ ಸೆಳೆಯುತ್ತಾರೆ. ವಡ್ಡಾರಾಧನೆಯಲ್ಲಿ ಆಡುನುಡಿಯ ಗುಣ ಬರವಣಿಗೆಯಲ್ಲಿ ವ್ಯಕ್ತವಾಗುವುದನ್ನು ಗಮನಿಸುತ್ತಾರೆ. 'ಚಂಪೂಕಾವ್ಯದ ಮಾರ್ಗ ಮತ್ತು ಆಡುನುಡಿಯ ದೇಸಿಯ ಸೊಬಗು ಎರಡರ ಸಮನ್ವಯವನ್ನು ದುರ್ಗಸಿಂಹನ ಪಂಚತಂತ್ರದಲ್ಲಿ ಕಾಣಬಹುದು' ಎನ್ನುತ್ತಾರೆ. ಹರಿಹರನ ಗದ್ಯದ ಎರಡು ಬಗೆಗಳು. ಹಳಗನ್ನಡ ರೂಪಗಳನ್ನು ಒಳಗೊಂಡಿದ್ದರೂ ಹೊಸಗನ್ನಡ ಗದ್ಯದ ಸ್ವರೂಪಕ್ಕೆ ಸೂಚನೆಯಾಗಿ ಮುದ್ರಾ ಮಂಜೂಷ ರಚಿತವಾದದ್ದು, ತುರಮುರಿಯವರ ಗದ್ಯದ ಸೊಗಸು, ಹಳಗನ್ನಡದ ಪ್ರಾಚೀನರೂಪವನ್ನೇ ಬಳಸಿದ ಮುದ್ದಣ.....ಈ ವಿಚಾರಗಳು ಇಲ್ಲಿ ಮೂಡಿವೆ. 'ತುರಮುರಿ ಹಾಗೂ ಮುದ್ದಣರು, ಸಾವಿರ ವರ್ಷಗಳ ಅಂತರದಲ್ಲಿ ರೂಪುಗೊಂಡು ಬೆಳೆದ ಭಾಷೆಯ ಎರಡು ಘಟ್ಟಗಳನ್ನು ಒಂದೇ ಶತಮಾನದಲ್ಲಿ ಪ್ರತಿನಿಧಿಸುತ್ತಾರೆ' ಎಂಬ ಕುತೂಹಲಕರ ಅಂಶವನ್ನು ಪ್ರಸ್ತಾಪಿಸುತ್ತಾರೆ.

ಚಿಕ್ಕದಾದರೂ ಈ ಲೇಖನ ಕನ್ನಡ ಗದ್ಯವನ್ನು ಕುರಿತು ಮುಖ್ಯವಾದ ವಿಚಾರಗಳನ್ನು ಹೇಳುತ್ತದೆ.

## ಸಂಪಾದಿತ ಕೃತಿಗಳು

### ಆರ್ ಎಸ್ ಎನ್, ವ್ಯಕ್ತಿ ಮತ್ತು ಕಲೆ

ಇದು ಆರ್ ಸೀತಾಪತಿ ನಾಯ್ಡು ಎಂಬ ಶಿಲ್ಪಿಯ ವ್ಯಕ್ತಿತ್ವ ಮತ್ತು ಕಲೆಯ ಬಗ್ಗೆ, ಶ್ರೀ ಎಂ ಎಸ್ ಕೃಷ್ಣಯ್ಯನವರ ಸಂಪಾದಕತ್ವದಲ್ಲಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು 2008ರಲ್ಲಿ ಪ್ರಕಟಿಸಿದ ಪುಸ್ತಕ. ಈ ಕೃತಿಯಲ್ಲಿ ಕೃಷ್ಣಯ್ಯನವರೂ ಸೇರಿದಂತೆ ಇಪ್ಪತ್ತೂರು ಲೇಖಕರ ಲೇಖನಗಳಿವೆ. ಆರ್ ಎಸ್ ಎನ್ ಅವರೇ ಬರೆದಿರುವ ಎರಡು ಲೇಖನಗಳಿವೆ. ಅವರು ಬರೆದ ಎರಡು ಪತ್ರಗಳಿವೆ. ಈ ಪ್ರತಿಭಾವಂತ ಶಿಲ್ಪಿಯನ್ನು ಕುರಿತ ಪ್ರಶಸ್ತಿ ವಾಚಿಕೆಗಳಿವೆ. ಇದಲ್ಲದೆ ಅನೇಕ ಶಿಲ್ಪಗಳ ಛಾಯಾಚಿತ್ರಗಳಿವೆ, ಸುಂದರ ರೇಖಾಚಿತ್ರಗಳೂ ಇವೆ.

ಈ ಕೃತಿಗೆ ಬರೆದ ಪ್ರವೇಶದಲ್ಲಿ ಎಂ ಎಚ್ ಕೃಷ್ಣಯ್ಯನವರು ತಮ್ಮ ಎಂದಿನ ರೀತಿಯಾದ ಸ್ವಾರಸ್ಯಕರ ಪ್ರಸಂಗದ ಪರಿಚಯದೊಂದಿಗೆ 'ಪ್ರವೇಶ : ವ್ಯಕ್ತಿ ಮತ್ತು ಕಲೆ' ಎಂಬ ಲೇಖನವನ್ನು ಪ್ರಾರಂಭಿಸುತ್ತಾರೆ. "ಒಂದು ಅನನ್ಯ ಪ್ರತಿಭೆಯನ್ನು ಇನ್ನೊಂದು ಅನನ್ಯ ಪ್ರತಿಭೆ ಮೆಚ್ಚಿ ಗೌರವ ಸಲ್ಲಿಸಿದ ಸಂದರ್ಭ ಅಪೂರ್ವವಾದದ್ದು. ಆರ್.ಎಸ್.ಎನ್. ವರಕವಿ ದ.ರಾ.ಬೇಂದ್ರೆಯವರ, ಈಗ ಚಿರಪರಿಚಿತವಾಗಿರುವ ಲಾಲಿತ್ಯಪೂರ್ಣ ಶಿಲ್ಪವನ್ನು ರಚಿಸಿದಾಗ ಅದರ ಬಗ್ಗೆ ಬೇಂದ್ರೆಯವರು ಸ್ಪಂದಿಸಿದ ರೀತಿ ವಿಶಿಷ್ಟ. ಅದು ಆರ್.ಎಸ್.ಎನ್. ಅವರ ಕಲಾ ಸೃಷ್ಟಿಯ ಹಿಂದಿರುವ ಒಂದು ತಾತ್ವಿಕ ದೃಷ್ಟಿಯನ್ನು ವ್ಯಕ್ತಪಡಿಸುತ್ತದೆ. ಬೇಂದ್ರೆ ಹೇಳಿದರು

"ನಾನು ಇಷ್ಟೊಂದು ಸುಂದರವಾಗಿಲ್ಲ!"

ಅದಕ್ಕೆ ಆರ್.ಎಸ್.ಎನ್. ಉತ್ತರ :

"ದೈವ ಸೃಷ್ಟಿಯನ್ನು ಸುಂದರಗೊಳಿಸುವುದೇ ನನ್ನ ಕಲಾಕೃತಿಗಳ ಉದ್ದೇಶ!" ಇದಕ್ಕೆ ಬೇಂದ್ರೆ

"ಓ!

ಯುಗದ ಕವಿ; ಜಗದ ಭವಿ

ಯುಗಾಂತರದ ರವಿ

ನೀ ಬರಿ ಬೆಳಗಲ್ಲೋ ಅಣ್ಣಾ!

ನೀ ಬರಿ ಬೆಳಗಲ್ಲ!!

ಬದುಕಿನಾ ಬೆಡಗಿಗೆ

ಅಲೌಕಿಕದ ಬೆಳಕಾ ಬಳಿದ

ನಿನ್ನ ಕಂಡು

ನಾ ಬರಿ ಬೆರಗಲ್ಲೋ ಅಣ್ಣಾ!

ನಾ ಬರಿ ಬೆರಗಲ್ಲೋ! "

ಕನ್ನಡದ ವರಕವಿಯಿಂದ ಹೀಗೆ ಮೆಚ್ಚುಗೆ ಪಡೆದವರು ಶಿಲ್ಪಿ ಶ್ರೀ ಆರ್.ಸೀತಾಪತಿ ನಾಯ್ಡು. ವಿಮರ್ಶಕರಿಂದ 'ಅವಧೂತ ಕಲಾವಿದ', 'ಎ ಜೀನಿಯಸ್, ಬುದ್ಧಿಜೀವಿ' ಎಂದು ಕರೆಸಿಕೊಂಡ ಪ್ರತಿಭಾವಂತ ಕಲಾವಿದರಿವರು. ಇವರಿಗೆ ಯಾವುದೇ ಔಪಚಾರಿಕ ಕಲಾಭ್ಯಾಸವಿರಲಿಲ್ಲ.

ಆರ್.ಎಸ್.ನಾಯ್ಡು (22–4–1904 ರಿಂದ 6–10–1985) ಬೆಂಗಳೂರಿನಲ್ಲಿ ಹುಟ್ಟಿ ಹಲವು ನಗರಗಳಲ್ಲಿ ವಿದ್ಯಾಭ್ಯಾಸ ಪಡೆದರು. ತಿರಿಚಿನಾಪಳ್ಳಿ, ಬೆಂಗಳೂರು, ಧಾರವಾಡ, ಪುಣೆಗಳಲ್ಲಿ ಓದಿದರು. ಕಾನೂನು, ವಿಜ್ಞಾನದ ವಿದ್ಯಾರ್ಥಿಯಾಗಿದ್ದರೂ ಅವರ ಆಸಕ್ತಿ ಕಲೆ, ಸಾಹಿತ್ಯ, ಮನಃಶಾಸ್ತ್ರ, ಆತ್ಮವಿದ್ಯೆ(ಮೆಟಾಫಿಸಿಕ್ಸ್) ಕಡೆಗಿತ್ತು. ಪೂನಾದಲ್ಲಿದ್ದಾಗ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು. ಅಲ್ಲೆ ಕಾಂಗ್ರೆಸ್ ಮಾತ್ರವಲ್ಲದೆ ಸಮಾಜವಾದಿ ಹಾಗೂ ಕಮ್ಯುನಿಸ್ಟರ ಸಂಪರ್ಕ ಆಯಿತು. ಸೆರೆಮನೆ ವಾಸವೂ ಆಯಿತು. ಅವರ ಕಲಾಪ್ರತಿಭೆ ಪ್ರಕಟಗೊಂಡದ್ದೇ ಸೆರೆಮನೆಯಲ್ಲಿ. 'ಜೇಡಿಮಣ್ಣಿನಿಂದ ಲೆನಿನ್‌ರ ನಾಲ್ಕು ಅಡಿಯ ಶಿಲ್ಪ ರಚಿಸಿದಾಗ. ಅವರದು ನೆಲೆ ನಿಲ್ಲದ ಸುತ್ತಾಟ. ಬಡವರ, ತುಳಿತಕ್ಕೆ ಒಳಗಾದವರ ಸಂತ್ರಸ್ತರ ನೋವು ದುಃಖಗಳಿಗೆ ಸ್ಪಂದಿಸಿದ ಅವರು ಒಂದೆಡೆ ನಿಲ್ಲಲಿಲ್ಲ. ಅವಿವಾಹಿತರಾಗೇ ಉಳಿದ ಅವರು ಸ್ವಯಂಪಾಕದಿಂದ ಸಂತುಷ್ಟರಾದವರು. ಒಂಟಿಯಾಗೇ ಯಾರ ಹಂಗಿಗೂ ಒಳಗಾಗದೇ ಉಳಿದರು – ಅಸಂಖ್ಯ ಬಂಧುಗಳು, ಸ್ನೇಹಿತರು, ಅಭಿಮಾನಗಳ ನಡುವೆ ಇದ್ದರೂ ಸಹ. ಯಾವ ವೈದ್ಯರೂ ಸಹ ಗುಣಪಡಿಸಲಾಗದ ಒಂದು ಬಗೆಯ ಪರ್ಸೆಕ್ಯೂಷನ್ ಫೋಬಿಯ (ಕಿರುಕುಳ

ಪೀಡನೆಯ ಭೀತಿ) ಇತ್ತು. ಇದು ಅವರನ್ನು ಜೀವನದುದ್ದಕ್ಕೂ ಕಾಡಿದ ಮಾನಸಿಕ ತೊಂದರೆಯಾಗಿತ್ತು.

ನಾಯ್ಡು ಅವರು ಸೆರೆಮನೆಯಲ್ಲಿದ್ದಾಗ ದೌರ್ಜನ್ಯ ಪ್ರತಿಭಟಿಸಲು ಮುಷ್ಕರ ಹೂಡಿದ್ದು, ಉಪವಾಸ ಮಾಡಿದ್ದು ದಂತಕಥೆಯಾಗಿದೆ. ಈ ಸಂದರ್ಭದಲ್ಲಿ ಬಾಪೂಜಿಯವರು ಇವರನ್ನು ಭೇಟಿ ಮಾಡಿ ಸಮಾಧಾನ ಹೇಳಿದ ಅವಿಸ್ಮರಣೀಯ ಘಟನೆ ನಡೆಯಿತು. ಕೈಲಾಸಂ ಜೊತೆ ವಾಕಿಂಗ್ ಹೋಗುತ್ತಿದ್ದರು! ಕೋಪ ಬಂದಾಗ ಅವರನ್ನು ಟೀಕಿಸುತ್ತಿದ್ದರು ಕೂಡ'.

"ನಾಯ್ಡು ಅವರಿಗೆ ಕಲೆಯೇ ಬದುಕು, ಚೈತನ್ಯ, ಸರ್ವಸ್ವ. ಅದು ಅವರಿಗೆ ಮಾರಾಟದ ವಸ್ತುವಲ್ಲ. ತಾವು ರಚಿಸಿದ ಚಿತ್ರ, ಶಿಲ್ಪಗಳನ್ನು ಸ್ನೇಹಿತರಿಗೆ ಕೊಟ್ಟಿದ್ದಾರೆ. ಕಲೆಗೆ ಬೆಲೆ ಕಟ್ಟಿದವರ ಬಗ್ಗೆ ಅಸಾಧ್ಯ ಸಿಟ್ಟು. ಸಿಟ್ಟಿನಲ್ಲಿ ಶಿಲ್ಪಗಳನ್ನು ಒಡೆದು ಪುಡಿ ಮಾಡಿದ್ದುಂಟು".

ಅರ್.ಎಸ್.ಎನ್. ನೆನಪಿನೊಂದಿಗೆ ಕೈಲಾಸಂ ನೆನಪಾಗುವಂತೆ, 'ಬೇಹುಗಾರರ ಭೂತ ಕಾಡುತ್ತಿದ್ದ' ಇನ್ನೊಬ್ಬ ನಾಟಕಕಾರ ಸಂಸ ನೆನಪಾಗುತ್ತಾರೆ ಎಂದು ಕೃಷ್ಣಯ್ಯನವರು ಹೇಳುತ್ತಾರೆ.

ಆರ.ಎಸ್.ಎನ್. ತುಂಬ ಓದುತ್ತಿದ್ದರು. ಅವರ ಮನೆಯಲ್ಲಿ ಪುಸ್ತಕಗಳ ರಾಶಿ ಇದ್ದಿತೆಂದು ಅವರ ಸ್ನೇಹಿತರು ಹೇಳುತ್ತಾರೆ. ಅವರ ಮೆಚ್ಚಿನ ಗ್ರಂಥ ವಿಲ್‌ಡ್ಯುರಾಂಟ್‌ನ 'ಸ್ಟೋರಿ ಆಫ್ ಸಿವಿಲಿಜೇಷನ್'. ಚಿಕ್ಕ ವಯಸ್ಸಿನಲ್ಲಿ ಪತ್ರಿಕಾ ಸಂಪಾದಕರಿಗೆ ಸಹಾಯ ಮಾಡುತ್ತ, ಜಯಪ್ರಕಾಶ್ ನಾರಾಯಣ್ ಅವರ ಸಂಪರ್ಕವನ್ನೂ ಗಳಿಸಿದ್ದರು.

ವಿಕ್ಷಿಪ್ತ ವ್ಯಕ್ತಿತ್ವದವರೆನ್ನಿಸಿಕೊಂಡರೂ ಮಕ್ಕಳನ್ನು ತುಂಬ ಇಷ್ಟ ಪಡುತ್ತಿದ್ದರು. "ನಿಸರ್ಗದಲ್ಲಿ ಮತ್ತು ಜೀವನದಲ್ಲಿ ಸೌಂದರ್ಯವನ್ನು ಮೆಚ್ಚುತ್ತಿದ್ದ ವ್ಯಕ್ತಿಗೆ ಹಣ್ಣನ್ನು ಜೋಡಿಸಿರುವ ಬಗೆ, ಹಣ್ಣುಗಳ ಬಣ್ಣ ಎಲ್ಲ ಆಕರ್ಷಕ, ಸುಂದರ ಎನ್ನಿಸುತ್ತಿತ್ತು. 'ಸೀ ದೀಸ್ ಕಲರ್ಸ್. ಆರೆಂಜ್. ಗಾಡ್ ಹ್ಯಾಸ್ ಕ್ರಿಯೇಟೆಡ್ ಕಲರ್ಸ್, ವಿ ಓನ್ಲಿ ಇಮಿಟೇಟ್, ಅಂಡ್ ಇಟ್ ಶುಡ್ ಬಿ ಪ್ಲೆಸೆಂಟ್' ಎನ್ನುತ್ತಿದ್ದರು".

ಆರ್.ಎಸ್.ಎನ್ ರೇಖಾಚಿತ್ರಕಾರರೆಂದೇ ಪ್ರಸಿದ್ಧರು......ಅವರ ಚಿತ್ರಗಳನ್ನು ವ್ಯಕ್ತಿಚಿತ್ರಗಳು, ನೃತ್ಯಭಂಗಿಗಳು, ಜಾನಪದ ಜೀವನದೃಶ್ಯಗಳು,

ಬಿ.ವಿ.ಕೆ.ಶಾಸ್ತ್ರಿಯವರು ವಿವರಿಸಿರುವ ಬ್ಯಾಲೆ ಚಿತ್ರಗಳು ಇತ್ಯಾದಿ. ಕೆಲವು ವಿಮರ್ಶಕರು ಇವರ ಚಿತ್ರಗಳನ್ನು ಗೀಚುಚಿತ್ರಗಳೆಂದು ಗುರುತಿಸುತ್ತಾರೆ (ಡೂಡಲಿಂಗ್). ಜೀವಂತಿಕೆ, ಸಾದೃಶ್ಯ ಗುಣ, ಚಲನೆ, ಚೈತನ್ಯ, ಮಿತ ರೇಖಾಭಿವ್ಯಕ್ತಿ ರೂಪ ಮತ್ತು ಸಂರಚನೆಗಳ ವೈಶಿಷ್ಟ್ಯ ಇವು ಅವರ ಚಿತ್ರಗಳ ಪ್ರಧಾನ ಗುಣಗಳು. ಅವರು ಕಲೆಯನ್ನು ಕುರಿತು ಆಳವಾಗಿ ಚಿಂತಿಸಿದ್ದರು. "ಲೈಫ್ ಈಸ್ ಫಾರ್ಮ್ ಅಂಡ್ ಫಾರ್ಮ್ ಈಸ್ ಲೈಫ್ : ಅಂಡ್ ಸೆಪರೇಟೆಡ್ ದೆ ಆರ್ ಇನ್‌ಕನ್ಸೀವೆಬಲ್" ಎಂದು ಹೇಳುತ್ತಿದ್ದರು. ಆರ್.ಎಸ್.ಎನ್. ಒಬ್ಬ ಶಿಲ್ಪಿಯೂ ಹೌದು.

ಇಂತಹ ಪ್ರತಿಭಾವಂತರ ಬಗ್ಗೆ ಸಂಪಾದಿತವಾದ ಪುಸ್ತಕವನ್ನು ಓದುವುದೇ ಒಂದು ಸಂತೋಷ.

**ಕುವೆಂಪು ಸಾಹಿತ್ಯ ಚಿತ್ರಸಂಪುಟ**

2004ರಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಕುವೆಂಪು ಅವರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ಅವರ ಸಾಹಿತ್ಯ ಕೃತಿಗಳಿಂದ ಆರಿಸಿದ ಭಾಗಗಳನ್ನು ಆಧರಿಸಿದ ವರ್ಣಚಿತ್ರಗಳ ಸಂಪುಟವನ್ನು ಕನ್ನಡ ಜನತೆಗೆ ಅರ್ಪಿಸಿತು. ಇದು ಒಂದು ಅಪೂರ್ವ ಕೃತಿ. ಸಂಪಾದಕ ಎಂ ಎಚ್ ಕೃಷ್ಣಯ್ಯನವರಿಗೆ ತುಂಬ ಇಷ್ಟವಾದ ಪುಸ್ತಕವಿದು.

ಇದರ ಸಂಪಾದಕೀಯದಲ್ಲಿ ಕುವೆಂಪು ಅವರ ವ್ಯಕ್ತಿತ್ವ ಮತ್ತು ಸಾಹಿತ್ಯವನ್ನು ಸಂಕ್ಷಿಪ್ತವಾಗಿ ಪರಿಚಯಿಸಿ ಈ ವಿಶಿಷ್ಟ ಕೃತಿಯ ರೂಪಣೆಯ ಬಗ್ಗೆ ಓದುಗರಿಗೆ ಮಾಹಿತಿ ನೀಡಿದ್ದಾರೆ.

"ಕುವೆಂಪು ಅವರ ಪ್ರತಿಭೆ ಸಾಹಿತ್ಯ ಮಾಧ್ಯಮದಲ್ಲಿ ಅಭಿವ್ಯಕ್ತಿ ಕಂಡಿದ್ದರೂ, ಅವರು ಚಿತ್ರ ರಚಿಸಲಿಲ್ಲ. ಸಂಗೀತ ರಚಿಸಲಿಲ್ಲ ಎಂದರೂ ಸಹ ಅವರ ಸಂವೇದನೆಯಲ್ಲಿ ಆ ಮಾಧ್ಯಮಗಳ ಭಾವಾಭಿವ್ಯಕ್ತಿ ಮೌಲ್ಯಗಳು ಇರಲಿಲ್ಲವೆಂದು ಹೇಳುವಂತಿಲ್ಲ. ಸಂವೇದನೆ ವಿಶ್ಲೇಷಣಾತ್ಮಕವಲ್ಲ, ಸಂಶ್ಲೇಷಣಾತ್ಮಕ. ಗ್ರಹಣೇಂದ್ರಿಯಾನುಭವಗಳು ವಿವಿಕ್ತವಲ್ಲ. ಪ್ರತ್ಯೇಕವಲ್ಲ: ಯಾವುದೇ ಒಂದು ಕಲೆಯ ಗ್ರಹಿಕೆಯಲ್ಲಿ ಸಂಸ್ಕಾರ ಕಾರಣವಾಗಿಯೋ ಸಂವೇದನೆ ಕಾರಣವಾಗಿಯೋ ಇನ್ನೊಂದರ ಅನುಭವ ಕರಗಿರುತ್ತದೆ. ಕುವೆಂಪು ಅವರದು ಬಹುಮುಖೀ ಸಂವೇದನೆ. ಆದ್ದರಿಂದ ಕಲಾವಿದರಿಗೂ ಅದು

ಪ್ರೇರಣೆಯಾಗಬಲ್ಲುದು. ಅವರ ಕಲ್ಪನೆ ಹರಿಯಲು ಮೂಲ ಮಾತೃಕೆಯಾಗಬಲ್ಲುದು. ಈ ಸಂಪುಟದ ಹಲವು ಕಲಾಕೃತಿಗಳು ಅದಕ್ಕೆ ದೃಷ್ಟಾಂತವಾಗಿವೆ".

ಮುಂದುವರಿದು ಕೃಷ್ಣಯ್ಯನವರು ಹೀಗೆ ಹೇಳುತ್ತಾರೆ – "ಈ ಸಂಪುಟದಲ್ಲಿ ಕರ್ನಾಟಕದ ಹಾಗೂ ರಾಜ್ಯದ ಹೊರಗಿನ ನಲವತ್ತೈದು ಕಲಾವಿದರು ಕುವೆಂಪು ಅವರ ಕವನ, ಕಥನಕವನ, ನಾಟಕ, ಕಥೆ, ಕಾದಂಬರಿ, ಪ್ರಬಂಧ, ಖಂಡಕಾವ್ಯ, ಮಹಾಕಾವ್ಯಗಳಿಂದ ಆರಿಸಿದ ಭಾಗಗಳನ್ನು ಚಿತ್ರಗಳಾಗಿ ರಚಿಸಿದ್ದಾರೆ. ಮೈಸೂರಿಗೆ, ಕುಪ್ಪಳಿಗೆ ಹೋಗಿ ನಿಸರ್ಗದೃಶ್ಯಗಳನ್ನು ಜಲವರ್ಣದಲ್ಲಿ ರಚಿಸಿದ್ದಾರೆ. ರೇಖಾಚಿತ್ರ ರಚನೆಯನ್ನೂ ಮಾಡಿದ್ದಾರೆ. ಕಲಾಕೃತಿ ರಚನೆಗೆ ಜಲವರ್ಣ, ತೈಲವರ್ಣ, ಆಕ್ರಿಲಿಕ್ ವರ್ಣ, ಕಂಪ್ಯೂಟರ್ ಸೃಜನೆ, ಮಿಶ್ರಮಾಧ್ಯಮ ಇತ್ಯಾದಿ ಚಿತ್ರಮಾಧ್ಯಮಗಳನ್ನು ಬಳಸಿದ್ದಾರೆ".

ಮುಂದುವರಿದು ಕೃಷ್ಣಯ್ಯನವರು "ಕೆಲವು ಚಿತ್ರ ಕಲಾವಿದರಿಗೆ ಕುವೆಂಪು ಕೃತಿ ಕಲ್ಪನೆಗೆ ಪ್ರೇರಣೆಯಾಗಿದೆ, ಚಿಮ್ಮುಹಲಗೆಯಾಗಿದೆ. ಕುವೆಂಪು ಕೃತಿಗೆ ವಿರುದ್ಧ ಎಂಬಂತೆ ಸ್ಪಂದಿಸಿರುವ ರಚನೆಯೂ ಇದೆ". ಈ ವೈವಿಧ್ಯವನ್ನು ಗಮನಿಸಿ ಕೃಷ್ಣಯ್ಯನವರು ಇಲ್ಲಿನ ಅನೇಕ ಚಿತ್ರಗಳನ್ನು ಕುರಿತು ಕೂಲಂಕಷವಾಗಿ ಚರ್ಚಿಸಿದ್ದಾರೆ.

ಒಟ್ಟಿನಲ್ಲಿ ಈ ಅಪರೂಪದ ಕೃತಿಯ ವೈಶಿಷ್ಟ್ಯವನ್ನು ಗುರುತಿಸುವಂತಹ ಸೂಕ್ತ ಪ್ರಸ್ತಾವನೆಯನ್ನು ಈ ಕೃತಿಯ ಸಂಪಾದಕರಾದ ಕೃಷ್ಣಯ್ಯನವರು ಬರೆದಿದ್ದಾರೆ. "ಈ ಚಿತ್ರ ಸಂಪುಟದ ರಚನೆಗಳನ್ನು ಕುವೆಂಪು ನೋಡುವಂತಿದ್ದಿದ್ದರೆ ಭಾವಮಗ್ನರಾಗುತ್ತಿದ್ದರು ಎಂಬ ಮಾತು ಮಾರ್ಮಿಕವಾಗಿದೆ. ಪ್ರತಿ ಚಿತ್ರದ ಬಗ್ಗೆ ಮತ್ತು ಅದನ್ನು ಬರೆದವರ ಬಗ್ಗೆ ಟಿಪ್ಪಣಿ ನೀಡಿರುವುದು ಓದುಗರಿಗೆ ಅನುಕೂಲಕರವಾಗಿದೆ.

*****

**ಮೂರ್ತಾಮೂರ್ತ**

ನಾಟಕಕಾರ, ನಟ, ಲೇಖಕ ಎ.ಎಸ್.ಮೂರ್ತಿ ಅವರಿಗೆ ಎಪ್ಪತ್ತೈದು ವರ್ಷಗಳಾದಾಗ 'ವಿಜಯನಗರ ಬಿಂಬ' ಸಂಸ್ಥೆ ಪ್ರಕಟಿಸಿದ 'ರಂಗಗೌರವ' ಅಭಿನಂದನ ಗ್ರಂಥ ಇದು (2003). ಎಂ.ಎಚ್. ಕೃಷ್ಣಯ್ಯನವರು ಅಚ್ಚುಕಟ್ಟಾಗಿ

ಸಂಪಾದಿಸಿದ ಈ ಕೃತಿಗೆ ಹೆಸರು ನೀಡಿದವರು ದಿವಂಗತ ಮೇಷ್ಟ್ರು ಕಿ.ರಂ.ನಾಗರಾಜ್.

ಕೃಷ್ಣಯ್ಯನವರು ಹೇಳುವಂತೆ "ಅದಮ್ಯ ಚೈತನ್ಯ, ನಿರಂತರ ಕ್ರಿಯಾಶೀಲತೆಯ ಸಂಕೇತ ಎ.ಎಸ್.ಮೂರ್ತಿ........ಅವರ ಇರುವಿಕೆ ಕೆಂಪೇಗೌಡ ಗೋಪುರಗಳಂತೆ, ಚೈತನ್ಯೋತ್ಸಾಹಗಳ ಚಿರಸಂಕೇತ ಎಂಬ ಭಾವನೆ ಮೂಡುತ್ತದೆ. ರಂಗ ಚಟುವಟಿಕೆ, ನಾಟಕ ರಚನೆಗಳಿರಲಿ ಆಕಾಶವಾಣಿಯ ಕಾರ್ಯಕ್ರಮ ಒಂದು ಮಾತು, ಮನೆ ಮಾತು, ಈರಣ್ಣರಿಂದಾಗಿ, ಮೂರ್ತಿ ಒಂದು ಐಕನ್ ಆಗಿದ್ದರು ಎಂಬುದೂ ವಾಸ್ತವ.....(ಅವರು) ನಿರಂತರೆಯ ಸಂಕೇತವೂ ಆಗಿದ್ದಾರೆ. ಅವರ ತಂದೆ ಅ.ನ.ಸುಬ್ಬರಾಯರು ಕಳೆದ ಶತಮಾನದ ಪ್ರಾರಂಭದಲ್ಲಿ ಹಲವು ಪ್ರಥಮಗಳನ್ನು ಸಾಧಿಸಿದವರು. ಹತ್ತೊಂಬತ್ತು ಇಪ್ಪತ್ತರಲ್ಲಿ ಬಳೇಪೇಟೆಯಲ್ಲಿ ಪ್ರಥಮ ಕಲಾ ಪ್ರದರ್ಶನವನ್ನು ಏರ್ಪಡಿಸಿದವರು".

ಕೃಷ್ಣಯ್ಯನವರು 'ಜನಪ್ರಿಯ ಎಂಬ ಪಟ್ಟಿ ಹಚ್ಚಿ ನಮ್ಮ ವಿಮರ್ಶಕರು ಎ.ಎಸ್.ಮೂರ್ತಿಯವರ ನಾಟಕ ರಚನೆಗಳನ್ನು ಕನ್ನಡ ಸಾಹಿತ್ಯ ವಿಮರ್ಶಕರು ನಿರ್ಲಕ್ಷಿಸಿದರು, ಇದಕ್ಕೆ ಕಾರಣ ಮೂರ್ತಿಯವರು ನಾಟಕಗಳನ್ನು ರಚಿಸುತ್ತಿದ್ದ ಕಾಲದಲ್ಲಿ ರಂಗಪರಿಭಾಷೆ ಇನ್ನೂ ಬೆಳೆಯದಿದ್ದದ್ದು, ಜೊತೆಗೆ ಮೂರ್ತಿಯವರ ವರ್ತಮಾನತ್ವವನ್ನು ದೋಷವೆಂಬಂತೆ ಪರಿಗಣಿಸಿದ್ದು' ಎಂಬ ಅನಿಸಿಕೆಯನ್ನು ವ್ಯಕ್ತಪಡಿಸಿದ್ದಾರೆ. ಜನಪ್ರಿಯ ಸಾಹಿತ್ಯವನ್ನೂ ನಾವು ಪಾಶ್ಚಾತ್ಯರು ಮಾಡುವಂತೆ ಗಂಭೀರ ಅವಗಾಹನೆಗೆ ಒಳಪಡಿಸಬೇಕು ಎಂಬ ಕೃಷ್ಣಯ್ಯನವರ ಅಭಿಪ್ರಾಯ ಎ.ಎಸ್.ಮೂರ್ತಿಯವರ ವಿಷಯದಲ್ಲಿ ಮತ್ತು ಒಟ್ಟು ಸಂಸ್ಕೃತಿಯ ಸಂದರ್ಭದಲ್ಲಿ ಒಪ್ಪುವಂಥದ್ದು.

**ಬೆಂಗಳೂರು ದರ್ಶನ**

ಉದಯಭಾನು ಕಲಾಸಂಘವು ಪ್ರಕಟಿಸಿರುವ ಮೂರು ಸಂಪುಟಗಳ ಬೃಹತ್ ಗ್ರಂಥ ಇದು(ಮೊದಲ ಮುದ್ರಣ 2005, ಪರಿಷ್ಕೃತ ದ್ವಿತೀಯ ಮುದ್ರಣ 2016). ಬೆಂಗಳೂರು ನಗರವನ್ನು ಅದರೆಲ್ಲ ಮಗ್ಗುಲುಗಳಲ್ಲಿ ನೂರಾರು ಛಾಯಾಚಿತ್ರಗಳೊಂದಿಗೆ ಪರಿಚಯಿಸುವ ಎರಡುಸಾವಿರದ ಐನೂರಕ್ಕೂ ಹೆಚ್ಚು ಪುಟಗಳುಳ್ಳ ಕೃತಿ. ಅನೇಕ ಕೈಗಳು ಇದಕ್ಕಾಗಿ ದುಡಿದಿವೆ. ಕೃಷ್ಣಯ್ಯನವರು

ಇದಕ್ಕಾಗಿ ವಿಜಯಾ ಅವರೊಂದಿಗೆ ಸೇರಿ ದೀರ್ಘವಾದ ಪ್ರಸ್ತಾವನೆಯನ್ನು ಬರೆದಿದ್ದಾರೆ.

"ಹತ್ತಿರ ಯಾವ ದೊಡ್ಡ ನದಿಯೂ ಇಲ್ಲದಿದ್ದರೂ ನೀರಿನ ಆಸರೆಯನ್ನು ಕಂಡುಕೊಂಡ ಈ ನಗರವು ಬೆಳೆಯುತ್ತ ಬಂದಿದೆ ಎನ್ನುವುದು ಇದರ ಇತಿಹಾಸಕ್ಕೆ ಸಂಕೇತವಾಗಬಹುದು. ಹಾಗೆಯೇ ಬೆಂಗಳೂರು ನಗರವು ಕಾವೇರಿ ನೀರನ್ನು ಬಳಸಿಕೊಳ್ಳಲು ಪ್ರಾರಂಭಿಸಿ ಕಾವೇರಿಯೂ ಸೋಲು ಸ್ಥಿತಿಗೆ ಬರುತ್ತಿರುವುದು ಬೆಂಗಳೂರಿನ ಇತಿಹಾಸಕ್ಕೆ ಸಂಕೇತವಾಗಬಹುದು.

ಅತ್ಯಂತ ಗೌರವದಿಂದ ಸ್ಮರಿಸಬೇಕಾದ ಹಿರಿಯ ಚೇತನ ಎಂದರೆ ಬೆಂಗಳೂರನ್ನು ಸ್ಥಾಪಿಸಿದ ಮೊದಲನೆಯ ಕೆಂಪೇಗೌಡರು". ಹೀಗೆ ಪ್ರಾರಂಭವಾಗುವ ಪ್ರಸ್ತಾವನೆಯು ಬೆಂಗಳೂರು ವಾಣಿಜ್ಯಸ್ಥಳವಾಗಿ, ಕೈಗಾರಿಕಾಕೇಂದ್ರವಾಗಿ ಬೆಳೆದದ್ದು, ಕೈಗಾರಿಕೀಕರಣ ಮತ್ತು ಜಾಗತೀಕರಣಗಳಿಂದಾಗಿ ಪರಂಪರಾಗತ ಕುಟುಂಬ ವ್ಯವಸ್ಥೆ ಮಾಯವಾಗುತ್ತಿರುವುದು ಇವುಗಳ ಬಗ್ಗೆ ಚಿಂತನೆಯನ್ನು ಹೊಂದಿದೆ.

'ಸಂಸ್ಕೃತಿ, ನಾಗರಿಕತೆ' ವಿಭಾಗದಲ್ಲಿ ಎಲ್ಲ ಧರ್ಮಗಳ ಜನರೂ ಇಲ್ಲಿ ನಿರಾಂತಕವಾಗಿ ಬಾಳುತ್ತಿರುವುದನ್ನು ಗುರುತಿಸಲಾಗಿದೆ. 'ಈ ವಿಶಾಲ ನಗರದಲ್ಲಿ ಪ್ರತಿಯೊಬ್ಬರೂ ತಮಗೆ ಬೇಕಾದ ಸಣ್ಣ ಸಾಂಸ್ಕೃತಿಕ ವಲಯವನ್ನು ಕಂಡುಕೊಂಡು ಬಾಳಬಹುದು'. ಎಂಬ ವಿಷಯ ಸ್ವಾಗತಾರ್ಹ. ಚಿತ್ರಕಲೆ, ಸಂಗೀತ, ನೃತ್ಯ ಮುಂತಾದ ವಿಷಯಗಳಲ್ಲಿ ಬೆಂಗಳೂರಿನಲ್ಲಿ ಕನ್ನಡತನ ಕಂಡರೂ 'ಅನೇಕ ಮಂದಿ ಕನ್ನಡಿಗರಿಗೆ ಥಟ್ಟನೆ ತುಟಿಗೆ ಬರುವುದು ಇಂಗ್ಲಿಷ್'. ಇದು ವಿಪರ್ಯಾಸವಾದರೂ ಸತ್ಯ. ಅದಕ್ಕಾಗಿಯೇ 'ಬೆಂಗಳೂರನ್ನು ಕನ್ನಡವಾಗಿ ಉಳಿಸಿಕೊಳ್ಳದಿದ್ದರೆ ಇಡೀ ಕರ್ನಾಟಕ ಬಲಗುಂದುತ್ತದೆ' ಎಂಬ ಎಚ್ಚರಿಕೆಯ ಮಾತನ್ನು ಇಲ್ಲಿ ಹೇಳಲಾಗಿದೆ. ಮುಂದೆ ಬೆಂಗಳೂರು ಬೆಳೆಯಬೇಕಾದ ರೀತಿಯ ಬಗ್ಗೆಯೂ ಇಲ್ಲಿ ಆಲೋಚಿಸಲಾಗಿದೆ. ಬೆಂಗಳೂರಿನ ತಾಳ್ಮೆಯನ್ನು ಇದರಲ್ಲಿ ವಾಸಿಸುವ ನಾಗರಿಕರು ಪರೀಕ್ಷೆ ಮಾಡಬಾರದು ಎಂಬ ಕಿವಿಮಾತನ್ನು ಸಹ ಹೇಳಲಾಗಿದೆ. ಬೆಂಗಳೂರು ಎದುರಿಸುತ್ತಿರುವ ನೀರಿನ ಸಮಸ್ಯೆಯಂತಹ ಕೆಲವು ಪರಿಹಾರ ಕಾಣದ ಸಮಸ್ಯೆಗಳ ಬಗೆಗಿನ ಚರ್ಚೆಯೂ ಇಲ್ಲಿದೆ.

ಬೆಂಗಳೂರನ್ನು ಕುರಿತ ಅಗಾಧ ಮಾಹಿತಿಯನ್ನು ಈ ಬೃಹತ್ ಗ್ರಂಥದ 21 ಅಧ್ಯಾಯಗಳಲ್ಲಿ ಅಳವಡಿಸಲಾಗಿದೆ.

*****

**ಕರ್ನಾಟಕ ಕಲಾದರ್ಶನ**

ನವಕರ್ನಾಟಕ ಪ್ರಕಾಶನ ಸಂಸ್ಥೆಯು ತನ್ನ ಐವತ್ತನೇ ವರ್ಷದ ಸುವರ್ಣ ಸಂಭ್ರಮಕ್ಕೆ ಸಂಗ್ರಹಯೋಗ್ಯ ಕೃತಿಯನ್ನು ಅರ್ಪಿಸಬೇಕೆಂಬ ಉದ್ದೇಶದಿಂದ ಹೊರತಂದ ಎರಡು ಸಂಪುಟಗಳ ಬೃಹತ್ ಕೃತಿ ಇದು(2010). 1200 ಪುಟಗಳ ಎರಡು ಸಂಪುಟಗಳಷ್ಟೇ ಅಲ್ಲದೆ ಸಂದರ್ಭಸೂಚಿ ಮತ್ತು ಅಡಕಬಿಲ್ಲೆಯನ್ನೂ ಒಳಗೊಂಡಿದೆ. ಇದರಲ್ಲಿ ಚಿತ್ರಕಲೆ, ಶಿಲ್ಪಕಲೆ, ಕರಕುಶಲಕಲೆ, ವಾಸ್ತುಶಿಲ್ಪ, ಛಾಯಾಚಿತ್ರಕಲೆ, ರಂಗಭೂಮಿ, ಸಂಗೀತ, ನೃತ್ಯ, ಸಂಗೀತ ಎಂಬ ಒಂಬತ್ತು ಅಧ್ಯಾಯಗಳಿವೆ. ಎರಡು ಸಂಪುಟಗಳಲ್ಲಿ ಪ್ರಕಟವಾಗಿರುವ ಚಿತ್ರಗಳ ಸಂಖ್ಯೆ 4300! ಕರ್ನಾಟಕದ ಕಲೆಗಳ ಬಗ್ಗೆ ತಿಳಿದುಕೊಳ್ಳಬಯಸುವವರು, ಕಲಾಭ್ಯಾಸಿಗಳು ಓದಲೇಬೇಕಾದ ಕೃತಿ ಇದು. ಪ್ರೊ.ಎಂ.ಎಚ್.ಕೃಷ್ಣಯ್ಯನವರು ಡಾ.ವಿಜಯಾ ಮತ್ತು ಶ್ರೀ ಸಿ.ಆರ್.ಕೃಷ್ಣರಾವ್ ಅವರೊಂದಿಗೆ ಸೇರಿ ಈ ಕೃತಿಯನ್ನು ಸಂಪಾದಿಸಿದ್ದಾರೆ. ನಾಲ್ಕೂವರೆ ವರ್ಷದ ಪರಿಶ್ರಮದ ಫಲ ಈ ಕೃತಿ. ಇಲ್ಲಿ ಸಾಹಿತ್ಯವನ್ನು ಹೊರತು ಪಡಿಸಿ ಇತರ ಕಲೆಗಳ ಬಗ್ಗೆ ಬರೆಯಲಾಗಿದೆ.

ಸಂಪಾದಕರ ಮಾತುಗಳಿಂದ ನಾವು ತಿಳಿದುಕೊಳ್ಳುವ ವಿಚಾರಗಳಲ್ಲಿ ಕೆಲವನ್ನು ಇಲ್ಲಿ ಗಮನಿಸಬಹುದು.

ಕರ್ನಾಟಕವು ಏಕೀಕರಣಗೊಂಡ ಹೊತ್ತಿನಲ್ಲಿ ರಾಷ್ಟ್ರೀಯ ಹಾಗೂ ಪ್ರಾದೇಶಿಕ ಅನನ್ಯತೆಗಳನ್ನು, ಸಂಸ್ಕೃತಿ, ಕಲೆಗಳ ಕ್ಷೇತ್ರಗಳಲ್ಲಿನ ವೈಶಿಷ್ಟ್ಯಗಳನ್ನು ಪರಿಚಯಿಸುವ ಉತ್ಸಾಹ ಇತ್ತು. ಆಗ ಅನಕೃ, ಶಿವರಾಮ ಕಾರಂತರಂತಹ ಲೇಖಕರು ಕಲೆಗಳ ಬಗ್ಗೆ ಬರೆದರು. ಇದಾದ ನಂತರ ಐವತ್ತು ವರ್ಷಗಳು ಕಳೆದಿವೆ. ಕಲೆಗಳು ಬೃಹತ್ ವೃಕ್ಷಗಳಂತೆ ರೆಂಬೆಕೊಂಬೆಗಳನ್ನು ಚಾಚಿ ಬೆಳೆದಿವೆ. ಆದರೆ ಇವುಗಳ ಬಗ್ಗೆ ದಾಖಲೆ, ಬರವಣಿಗೆಗಳು ಹೆಚ್ಚಿಲ್ಲ. ಈ ಗ್ರಂಥವು ಆ ಕೊರತೆಯನ್ನು ಸ್ವಲ್ಪ ಮಟ್ಟಿಗೆ ತುಂಬುವ ಪ್ರಯತ್ನ ಮಾಡಿದೆ.

'ಸಾಹಿತ್ಯೇತರ ಕಲೆಗಳ ಕ್ಷೇತ್ರಗಳಲ್ಲಿ ಕರ್ನಾಟಕದ ಸಾಧನೆಯ ಹೆಜ್ಜೆಗಳನ್ನು ಗುರುತಿಸಲು ಹೊರಟಾಗ' ಆದ ದರ್ಶನವು ಈ ಗ್ರಂಥರೂಪ ತಳೆದಿದೆ.

ಕರ್ನಾಟಕದ ಚಿತ್ರಕಲೆಯನ್ನು ಗಮನಿಸುವಾಗ ಕರ್ನಾಟಕದಲ್ಲಿ ಕ್ರಿಸ್ತಪೂರ್ವ ಕಾಲದಲ್ಲಿನ ಬಂಡೆಗಳ ಮೇಲಿನ ಗೀರುಚಿತ್ರಗಳು, ಬಾದಾಮಿ, ಅಜಂತಾ, ಎಲ್ಲೋರದ ಚಿತ್ರಗಳು, ಮೈಸೂರು ಸಾಂಪ್ರದಾಯಿಕ ಶೈಲಿಯ ಚಿತ್ರಗಳು, ಕಿನ್ನಾಳ ಕಲೆ, ತೊಗಲು ಬೊಂಬೆ ಕಲೆಗಳ ಬಗ್ಗೆ ವಿವರಗಳು ಸಿಗುತ್ತವೆ. ರೇಖಾಚಿತ್ರ, ವ್ಯಂಗ್ಯಚಿತ್ರಗಳ ಬಗೆಗೂ ವಿವರಗಳಿವೆ.

ಭಾರತೀಯ ಶಿಲ್ಪಕಲೆಯಲ್ಲಿ ಕರ್ನಾಟಕದ ಶಿಲ್ಪಕಲೆಗೆ ವಿಶಿಷ್ಟ ಸ್ಥಾನವಿರುವುದನ್ನು ಗುರುತಿಸಲಾಗಿದೆ. ಬಾದಾಮಿ, ಐಹೊಳೆ, ಪಟ್ಟದಕಲ್, ಹೊಯ್ಸಳ ದೇವಾಲಯಗಳು, ಶ್ರವಣಬೆಳಗೊಳದ ಗೊಮ್ಮಟನ ಬೃಹತ್ ಶಿಲ್ಪ ಜೊತೆಗೆ ಕರ್ನಾಟಕದ ಇನ್ನೊಂದು ವಿಶೇಷವಾದ ಶಿವನೃತ್ಯ ಭಿತ್ತಿಶಿಲ್ಪಗಳನ್ನು ಗಮನಿಸಲಾಗಿದೆ. ಎಲಿಫೆಂಟಾದ ಬೃಹತ್‌ಶಿಲ್ಪಗಳಲ್ಲಿ ಒಂದಾದ, 'ಮನುಷ್ಯನ ಕೈ ಸೃಷ್ಟಿಸಿರುವ ದೈವದ ಭವ್ಯ ಪ್ರತಿಪಾದನೆ ಮತ್ತೆಲ್ಲೂ ಇಲ್ಲ' ಎಂದು ರೆನೆಗ್ರೂಸೆ ಎಂಬ ವಿಮರ್ಶಕರಿಂದ ಪ್ರಸಿದ್ಧಿ ಪಡೆದಿರುವ ತ್ರಿಮೂರ್ತಿ ಶಿಲ್ಪದ ಬಗ್ಗೆ ಇಲ್ಲಿ ಪ್ರಸ್ತಾಪವಿದೆ.

ವಾಸ್ತುಶಿಲ್ಪಕಲೆಯ ಬಗ್ಗೆ ವಿವರಗಳಿವೆ. ಕರ್ನಾಟಕದ ಬಾದಾಮಿ, ಐಹೊಳೆ, ಪಟ್ಟದಕಲ್ಲುಗಳನ್ನು ವಾಸ್ತುಶಿಲ್ಪದ ತೊಟ್ಟಿಲು ಎಂದು ಕರೆಯುತ್ತಾರೆ. ಹೊಯ್ಸಳ ವಾಸ್ತುಕಲೆಯ ವಿಶೇಷತೆಯ ಬಗ್ಗೆ ವಿವರಗಳಿವೆ. ಕಲೆ ಮತ್ತು ವಾಸ್ತುತಂತ್ರಜ್ಞಾನ ಮೇಳೈಸಿದ ನಿರ್ಮಾಣವಾದ ಬಿಜಾಪುರದ ಗೋಳಗುಮ್ಮಟದ ಬಗ್ಗೆ ವಿವರಗಳಿವೆ.

ಇಂದು ಸೂಕ್ಷ್ಮ ಸಂವೇದನಾಕಲೆಯಾಗಿ ಮಾರ್ಪಟ್ಟಿರುವ ಛಾಯಾಚಿತ್ರಕಲೆಯ ಬಗ್ಗೆ ಪ್ರಸ್ತಾಪಿಸಲಾಗಿದೆ.

ಸಾಹಿತ್ಯ, ಸಂಗೀತ, ಅಭಿನಯ, ನೃತ್ಯ, ದೃಶ್ಯ ಇವುಗಳು ಸಮ್ಮಿಲನಗೊಂಡ ಸಂಕೀರ್ಣ ಕಲೆಯಾದ ರಂಗಭೂಮಿಯ ಬಗ್ಗೆ ವಿವರಗಳಿವೆ. ವೃತ್ತಿ ರಂಗಭೂಮಿ, ಹವ್ಯಾಸಿ ರಂಗಭೂಮಿ, ಆಧುನಿಕ ರಂಗಭೂಮಿ, ಮೌನ ನಾಟಕ(ಮೈಮ್), ಬೀದಿನಾಟಕಗಳಲ್ಲದೆ ಸಮಾನಾಂತರವಾಗಿ

ಉಳಿದುಬಂದಿರುವ ಜನಪದ ರಂಗಭೂಮಿ ಅಲ್ಲದೆ, ಅನ್ಯಭಾಷಾ ರಂಗಭೂಮಿ ಇವೆಲ್ಲದರ ಬಗ್ಗೆ ವಿವೇಚನೆ ಇದೆ.

'ಬಹುಶಃ ಭಾರತದಲ್ಲೆ ಕರ್ಣಾಟಕ ಶಾಸ್ತ್ರೀಯ ಸಂಗೀತ, ಹಿಂದೂಸ್ಥಾನೀ ಶಾಸ್ತ್ರೀಯ ಸಂಗೀತ, ಪಾಶ್ಚಾತ್ಯ ಶಾಸ್ತ್ರೀಯ ಸಂಗೀತ ಒಂದು ರಾಜ್ಯದಲ್ಲಿ ಔನ್ನತ್ಯವನ್ನು ಸಾಧಿಸಿರುವುದು, ಪ್ರಸಿದ್ಧ ಸಂಗೀತಗಾರರ ಪರಂಪರೆ ಇರುವುದು ಕರ್ನಾಟಕದಲ್ಲಿ ಮಾತ್ರ' ಎಂಬ ವಿವರವು ಸಂತೋಷ ತರುತ್ತದೆ. ಗಮಕಕಲೆ ಕರ್ನಾಟಕದ ಒಂದು ವೈಶಿಷ್ಟ್ಯ ಎಂಬುದನ್ನು ಗುರುತಿಸಲಾಗಿದೆ.

ಕಂಚಿಯ ನಟರಾಜನಿಗಿಂತಲೂ ಪ್ರಾಚೀನವಾದ ಕರ್ನಾಟಕದ ನಟರಾಜ ಮೂರ್ತಿಗಳ ಬಗ್ಗೆ, ಭರತನಾಟ್ಯದಲ್ಲಿ ಕರ್ನಾಟಕದ್ದೇ ಆದ ಮೈಸೂರು ಶೈಲಿಯು ಬೆಳೆದು ಬಂದದ್ದರ ಬಗ್ಗೆ, ಕರ್ನಾಟಕದ ಹೆಮ್ಮೆಯಾದ ಯಕ್ಷಗಾನದ ಬಗ್ಗೆ ಇಲ್ಲಿ ಪ್ರಸ್ತಾಪ ಇದೆ.

ಚಲನಚಿತ್ರಕಲೆಯ ಬಗ್ಗೆ ಮಾಹಿತಿ ಇದೆ. "ಇಪ್ಪತ್ತನೆಯ ಶತಮಾನ ಚಲನಚಿತ್ರಯುಗ ಎಂಬಷ್ಟು ಜನಜೀವನದ ಮನರಂಜನೆಯ ಭಾಗವಾಗಿ ಬೆಳೆಯಿತು. ಇದೊಂದು ನೂತನ ಅವಿಷ್ಕಾರ" ಎಂಬ ವಿಷಯ ಇಲ್ಲಿದೆ. ಆದರೆ ಚಲನಚಿತ್ರ ಕಲೆಯ ಬಗ್ಗೆ ನಮ್ಮಲ್ಲಿ ವ್ಯವಸ್ಥಿತ ದಾಖಲಾತಿ ಇಲ್ಲದ್ದರ ಬಗ್ಗೆ, ಈ ಕಲೆಯನ್ನು ಕುರಿತು ಸಾಕಷ್ಟು ಲೇಖನಗಳು ಸಿಗದಿರುವ ಬಗ್ಗೆ ಬೇಸರವನ್ನೂ ವ್ಯಕ್ತಪಡಿಸಲಾಗಿದೆ.

ಈ ಪ್ರಸ್ತಾವನೆಯಲ್ಲಿ ಒಟ್ಟು ಗ್ರಂಥದ ಪಕ್ಷಿನೋಟವೂ ಸಿಗುತ್ತದೆ ಹಾಗೂ ಕಲಾವಿಷಯಕವಾಗಿ ನಮ್ಮಲ್ಲಿ ದಾಖಲೆಯ ಕೊರತೆ ಎಷ್ಟಿದೆ ಎಂಬುದೂ ಅರ್ಥವಾಗುತ್ತದೆ.

*****

## ಸಂದರ್ಶನ

ಪ್ರಶ್ನೆ 1 ;– ಸರ್, ನೀವು ಅಧ್ಯಾಪನವನ್ನು ಆತ್ಮಸಂತೋಷದ ಮಾರ್ಗವೆಂದು ಭಾವಿಸಿದವರು. ಸಾವಿರಾರು ವಿದ್ಯಾರ್ಥಿಗಳಿಗೆ ಪ್ರೀತಿಯಿಂದ ಪಾಠ ಮಾಡಿದವರು. ಇಂದಿನ ಸೆಮೆಸ್ಟರ್ ವ್ಯವಸ್ಥೆ, ಅಂಕಗಳಿಕೆಯ ಧಾವಂತ, ಶಿಕ್ಷಣದ ವ್ಯಾಪಾರೀಕರಣ....ಈ ಸನ್ನಿವೇಶದಲ್ಲಿ ಅಧ್ಯಾಪಕನ ಪ್ರಾಮುಖ್ಯ ಕಡಿಮೆಯಾಗಿದೆ ಎಂದು ನಿಮಗೆ ಅನ್ನಿಸುತ್ತದೆಯೇ?

ಉತ್ತರ :–ಅಧ್ಯಾಪನ ಒಂದು ಕಲೆ. ಪಾಠ ಮಾಡುತ್ತಿರುವ ಅಧ್ಯಾಪಕನಿಗೆ ಪಠ್ಯವಿಷಯದ ಬಗ್ಗೆ ಪ್ರೀತಿ ಇರಬೇಕು. ಜೊತೆಗೆ ತಾನು ಮಾಡುತ್ತಿರುವ ಪಾಠ ಹೇಳುವ ಕೆಲಸದಿಂದ ಅವನಿಗೆ ಆನಂದ ಸಿಗಬೇಕು. ಈ ಪ್ರೀತಿ, ಆನಂದ, ತೃಪ್ತಿ ಬೇರೆ ವಿಷಯಗಳಲ್ಲಿ ಸಿಗುವುದಿಲ್ಲ.

ಪಠ್ಯಭಾಗ(ಸಿಲೆಬಸ್) ಮುಗಿಸುವುದು ಅಧ್ಯಾಪಕನ ಕೇಂದ್ರ ಉದ್ದೇಶವಾಗಬಾರದು. ಪರೀಕ್ಷೆಯ ದೃಷ್ಟಿಯಿಂದ ಪಾಠ ಮಾಡುವುದೂ ಅವನ ಮುಖ್ಯ ಉದ್ದೇಶವಲ್ಲ. ಪಠ್ಯ ಒಂದು ನೆಪ ಅಷ್ಟೆ. ಪಾಠ ಮಾಡುವ ಉದ್ದೇಶವೆಂದರೆ ವಿದ್ಯಾರ್ಥಿಯ ಜ್ಞಾನದಿಗಂತದ ವಿಸ್ತರಣೆ. ಪಾಠದ ನೆಪದಿಂದ ವಿದ್ಯಾರ್ಥಿಗೆ ಯಾವೆಲ್ಲ ಜ್ಞಾನಶಿಸ್ತುಗಳ ಬಗ್ಗೆ ಹೇಳಬಹುದೋ ಅವೆಲ್ಲವನ್ನೂ ಹೇಳಬೇಕು.

ಪಠ್ಯಭಾಗಕ್ಕಿಟ್ಟ ಎಲ್ಲ ಪಠ್ಯಗಳೂ ಶ್ರೇಷ್ಠವಾಗಿರುವುದಿಲ್ಲ ನಿಜ, ಅದರೆ ಎಂತಹ ನೀರಸ ಪಠ್ಯದಲ್ಲೂ ಕೆಲವು ಒಳ್ಳೆಯ ಅಂಶಗಳಿರುತ್ತವೆ. ವಿದ್ಯಾರ್ಥಿಗೆ ಅದನ್ನು ಮುಟ್ಟಿಸಬೇಕು. ಇದರಲ್ಲಿ ನನಗೆ ಮಾದರಿ ಪ್ರೊ. ತೀ.ನಂ. ಶ್ರೀಕಂಠಯ್ಯನವರು. ಎಂತಹ ಶುಷ್ಕ ಪಾಠವನ್ನಾದರೂ ಜೀವಂತವಾಗಿಸಬಲ್ಲ ಶಕ್ತಿ ಅವರಿಗಿತ್ತು. ನನಗೆ ಇಂತಹ ಅತ್ಯುತ್ತಮ ಅಧ್ಯಾಪಕರ ಪಾಠ ಕೇಳುವ ಸುಯೋಗ ಲಭಿಸಿತ್ತು. ಇವರು ಸಂಬಳಕ್ಕೋಸ್ಕರ ಪಾಠ ಹೇಳಿದವರಲ್ಲ. ತೀನಂಶ್ರೀ ಅವರ ಒಂದು ಮಾತನ್ನು ನಾನು ಸದಾ ನೆನಪಿನಲ್ಲಿಟ್ಟುಕೊಂಡಿದ್ದೇನೆ. "ಪಿಯುಸಿ ತರಗತಿಗೆ ಹೋಗಬೇಕಾದರೂ ಸಿದ್ಧತೆಯಿಲ್ಲದೆ ಹೋಗಬೇಡ. ಸಿದ್ಧತೆ ಮಾಡಿಕೊಳ್ಳಲು ಸಾಧ್ಯವಾಗದಿದ್ದರೆ ಅವತ್ತು ರಜ ಹಾಕಿಬಿಡು". ನಾನು ಅಧ್ಯಾಪಕನ ಕೆಲಸಕ್ಕೆ ಸೇರಿ, ಹೊರಟು ನಿಂತಾಗ

ಅವರು ಹೇಳಿದ ಮಾತು ಇದು. ಇದನ್ನು ನಾನು ನನ್ನ ಅಧ್ಯಾಪನವೃತ್ತಿಯುದ್ದಕ್ಕೂ ಪಾಲಿಸಿದ್ದೇನೆ.

ಇವತ್ತು ಪರಿಸ್ಥಿತಿ ಬದಲಾಗಿದೆ. ಶಿಕ್ಷಣಸಂಸ್ಥೆಗಳು ಕಾರ್ಪೊರೇಟ್ ದೃಷ್ಟಿಕೋನವನ್ನು ಅಳವಡಿಸಿಕೊಳ್ಳುತ್ತಿವೆ. ಈ ದೃಷ್ಟಿಕೋನದಲ್ಲಿ ಎಷ್ಟು ಬೇಕೋ ಅಷ್ಟನ್ನು ಬೇಗ ಬೇಗ ಹೇಳಿಬಿಡಬೇಕು ಎಂಬ ಭಾವನೆ ಕೆಲಸ ಮಾಡುತ್ತದೆ. ಇದರಿಂದ ವಿಷಯದ ಸಮಗ್ರತೆ, ಆಳ ದಕ್ಕುವುದಿಲ್ಲ. ಸೆಮೆಸ್ಟರ್ ಪದ್ಧತಿಯ ಪಾಠ ಕಣ್ಣಿಗೆ ಪಟ್ಟಿ ಕಟ್ಟಿದ ಕುದುರೆಯ ಓಟದಂತಿದೆ ಎಂದು ಹೇಳಬಹುದು.

ಪ್ರಶ್ನೆ 2 :– ಹಳಗನ್ನಡ ಓದುವುದೇ ಕಷ್ಟವೆಂಬ ಭಾವನೆ ಇಂದಿನ ವಿದ್ಯಾರ್ಥಿಗಳದು. ವಿದ್ಯಾರ್ಥಿಗಳು ಅನೇಕ ದೃಷ್ಟಿಗಳಿಂದ ಕನ್ನಡದಿಂದ ದೂರ ಸರಿಯುತ್ತಿರುವ ಈ ಹೊತ್ತಿನಲ್ಲಿ ಅವರಿಗೆ ಹಳಗನ್ನಡ ಇಷ್ಟವಾಗುವಂತೆ ಮಾಡುವುದು ಹೇಗೆ?

ಉತ್ತರ:– ಈ ವಿಷಯವನ್ನು ಕುರಿತು ನಾನು ಹದಿನೈದು ಇಪ್ಪತ್ತು ಕಡೆ ಉಪನ್ಯಾಸ ಕೊಟ್ಟಿದ್ದೇನೆ. ಇಲ್ಲಿ ಗಮನಿಸಬೇಕಾದ ಮೂರು ಮುಖ್ಯ ವಿಷಯಗಳಿವೆ.

ಅ. ಹಳಗನ್ನಡದ ವಸ್ತು ಇಂದಿಗೆ ಹೇಗೆ ಪ್ರಸ್ತುತ ಎಂಬ ಪ್ರಶ್ನೆ. ಹಳಗನ್ನಡವು ಹೇಳುವ ಪುರಾಣಗಳನ್ನು ಕಟ್ಟಿಕೊಂಡು ಇವತ್ತು ನಮಗೇನಾಗಬೇಕು ಎಂಬ ಭಾವನೆ ಕೆಲವರಲ್ಲಿದೆ. ಇಲ್ಲಿ ನಾವು ಹಳಗನ್ನಡದ ವಸ್ತುವನ್ನು ಯಾವ ರೀತಿಯಲ್ಲಿ ಗ್ರಹಿಸುತ್ತೇವೆ ಅನ್ನೋದು ಮುಖ್ಯ. ಹಳಗನ್ನಡವು ಮಾನವ ಅನುಭವವನ್ನು ಮಿಥಿಕಲ್ ಇಮೇಜಸ್(ಪೌರಾಣಿಕ ಪ್ರತಿಮೆ)ಗಳಲ್ಲಿ ಹೇಳುತ್ತದೆ. ಉದಾಹರಣೆಗೆ ಮಹಾಭಾರತದಲ್ಲಿ ಬರುವ ದ್ರೌಪದಿಯ ಪ್ರತಿಭಟನೆ. ಇದು ಇವತ್ತಿಗೆ ಪ್ರಸ್ತುತವಾಗಿಲ್ಲವಾ? ಸಹಸ್ರಾರು ವರ್ಷಗಳಿಂದ ಬದುಕುತ್ತಾ ಬಂದಿರುವ ಮಾನವನ ಬದುಕಿನ ರೀತಿ ಬದಲಾಗಿರಬಹುದೇ ಹೊರತು ಅವನ ಮೂಲಭೂತ ಭಾವನೆಗಳು ಬದಲಾಗಿಲ್ಲ. ಹೀಗಾಗಿ ಹಳಗನ್ನಡದ ವಸ್ತು ಇಂದಿಗೂ ಪ್ರಸ್ತುತವಾಗಿದೆ.

ಆ. ಹಳಗನ್ನಡದ ಭಾಷೆ ತುಂಬ ಕಠಿಣ ಎಂಬ ಭಾವನೆ. ಯಾವುದೇ ಹೊಸಭಾಷೆಯನ್ನು ಕಲಿಯಲು ಪ್ರಯತ್ನ ಬೇಕು. ಒಂದು ಭಾಷೆಯ ಲಯವನ್ನು ಅರಿತುಕೊಳ್ಳುವದು ಮುಖ್ಯ. ಕಾಲ ಕಳೆದಂತೆ ಭಾಷೆಯ

ಸಂರಚನೆಯೇನೂ ಬದಲಾಗುವುದಿಲ್ಲ. ಗದ್ಯವಾಗಲಿ, ಪದ್ಯವಾಗಲಿ ಅದಕ್ಕಿರುವ ಸೂಕ್ಷ್ಮ ಲಯವನ್ನು ಹಿಡಿದು ಓದಿಕೊಂಡರೆ ಅರ್ಥೈಸುವುದು ಕಷ್ಟವಲ್ಲ. ಉದಾಹರಣೆಗೆ ಶ್ರೀ ಅವರ ಅಶ್ವತ್ಥಾಮನ್ ನಾಟಕದಲ್ಲಿ ಬರುವ 'ಇಂದವನ್ ನಾಳೆ ನಾನ್ ಏನ್ ಪಾಡು ಆಳಿನ ಬಾಳ್' ಎಂಬ ಮಾತು. ಹಳ್ಳಿಗರ ಮಾತಿನಲ್ಲಿ ಇವತ್ತಿಗೂ ಈ ಸಂರಚನೆಯನ್ನು ಕಾಣಬಹುದು. ಭಾಷೆಗೆ ಧಾಟಿ, ಜೀವನಾಡಿ, ನಾದ ಇರುತ್ತದೆ. ಇದನ್ನು ಅರಿಯಲು ಪ್ರಯತ್ನಿಸಬೇಕು.

ಇ. ಹಳಗನ್ನಡವು ಛಂದಸ್ಸಿಗೆ ಸಂಬಂಧಪಟ್ಟುದು ಎಂಬ ವಿಷಯ. ಛಂದಸ್ಸು ಎಂದರೆ ಗುರು ಲಘುಗಳ ಲೆಕ್ಕಾಚಾರ, ಇದು ತುಂಬ ಕಷ್ಟಕರ ಎಂಬ ಭಾವನೆ ಹಲವರಲ್ಲಿದೆ. ಮತ್ತೆ ನಾನು ಹೇಳುವುದೇನೆಂದರೆ ಛಂದಸ್ಸಿನ ಲೆಕ್ಕಾಚಾರವನ್ನು ಅರಿಯುವುದಕ್ಕಿಂತ ಲಯದ ಮರ್ಮವನ್ನು ತಿಳಿಯುವುದು ಮುಖ್ಯ. ಮುಕ್ತಛಂದಸ್ಸಿನಲ್ಲೂ ಅದರದೇ ಅಥ ಲಯವಿಲ್ಲವೇ? ಲಯ ಹಿಡಿದು ಕಾವ್ಯವನ್ನು ಓದುವುದು ಮುಖ್ಯ.

ಈ ಆಧುನಿಕ ಮನುಷ್ಯನ ಸಮಸ್ಯೆಯೇ ಬೇರೆ, ಹಳೆಯ ಕಾಲದ ಸಾಹಿತ್ಯದಿಂದ ಇದನ್ನು ಎದುರಾಗಲು ಸಾಧ್ಯವಿಲ್ಲ ಎಂಬ ವಾದ ಇದೆ. ನೋಡಿ, ಮನುಷ್ಯನ ಹೃದಯದಾಳದಲ್ಲಿ ತಾನು ಅಪೂರ್ಣ ಎಂಬ ಭಾವನೆ ಇರುತ್ತದೆ. ಬೇರೆಯವರ ಅನುಭವಗಳನ್ನು ತಿಳಿದು ತನ್ನ ಅರಕೆಯನ್ನು ತುಂಬಿಕೊಳ್ಳಲು ಅವನು ಪ್ರಯತ್ನಿಸುತ್ತಾನೆ. ಹಳಗನ್ನಡ ಸಾಹಿತ್ಯದಲ್ಲಿ ಯುಗಯುಗಗಳಿಂದ ಸಂಚಿತವಾದ ಮಾನವ ಅನುಭವ ಇರುತ್ತದೆ. ಇದನ್ನು ನಮ್ಮದಾಗಿಸಿಕೊಳ್ಳಲು ಹಳಗನ್ನಡ ಸಾಹಿತ್ಯವನ್ನು ಓದಬೇಕು.

ಪ್ರಶ್ನೆ 3:– ನೀವು ಅಧ್ಯಾಪಕರಾಗಿಯಷ್ಟೇ ಅಲ್ಲದೆ ವಿವಿಧ ಕಾಲೇಜುಗಳಲ್ಲಿ ಪ್ರಾಂಶುಪಾಲರಾಗಿಯೂ ಸೇವೆ ಸಲ್ಲಿಸಿದವರು. ಪ್ರಾಂಶುಪಾಲರಾದಾಗ ಕಾಲೇಜಿನ ಆಡಳಿತಾತ್ಮಕ ಕೆಲಸಗಳಲ್ಲಿ ಪಾಠ ಹೇಳಲು ಸಮಯ ಸಿಗುವುದು ತುಂಬ ಕಷ್ಟ. ಪಾಠ ಹೇಳುವಾಗ ಇದ್ದ ಸಂತೋಷವನ್ನು ಪ್ರಾಂಶುಪಾಲರಾದಾಗ ಕಳೆದುಕೊಂಡ ಭಾವನೆ ನಿಮಗೆ ಬಂತೇ?

ಉತ್ತರ:–ಹೌದು. ಪ್ರಾಂಶುಪಾಲರಾದಾಗ ಆಡಳಿತಾತ್ಮಕ ವಿಷಯಗಳಿಗೆ ಗಮನ ಕೊಡಬೇಕಾಗುತ್ತದೆ. ಮುಖ್ಯವಾಗಿ ಪರೀಕ್ಷೆಗಳು. ಪರೀಕ್ಷೆಗಳಲ್ಲಿ ಕಾಪಿ ಹೊಡೆಯುವುದು, ಅಶಿಸ್ತು ಎಂದರೆ ನನಗಾಗದು. ಈ ವಿಷಯಕ್ಕೆ ನಾನು

ಸಾಕಷ್ಟು ಕಿರಿಕಿರಿ ಅನುಭವಿಸಿದ್ದೇನೆ. ಕಾಪಿ ಹೊಡೆಯುವ ಹುಡುಗರು, ಅದಕ್ಕೆ ಹಿಂಬಾಗಿಲಿನ ಸಹಕಾರ ನೀಡುವ ರಾಜಕೀಯ ಶಕ್ತಿಗಳು ಇವು ನನಗೆ ಅಹಿತಕರ ವಿಷಯಗಳಾಗಿದ್ದವು. ಕೆಲವರ ವಿರೋಧವನ್ನೂ ನಾನು ಕಟ್ಟಿಕೊಂಡೆ. ಆ ಹುದ್ದೆ ಬೇಡವೆನ್ನಿಸಿ ನನ್ನ ವೃತ್ತಿ ಜೀವನದ ಕೊನೆಯ ನಾಲ್ಕು – ಐದು ವರ್ಷಗಳಲ್ಲಿ ನಾನು ಪ್ರೊಫೆಸರ್ ಕೆಲಸವನ್ನೇ ಸಂತೋಷದಿಂದ ಮಾಡಿದೆ.

ಪ್ರಶ್ನೆ 4:–ನಿಮ್ಮದು ವಿಭಿನ್ನ ರೀತಿಯ ಸಾಹಿತ್ಯ ವಿಮರ್ಶೆ. ಸಾಹಿತ್ಯ ಕ್ಷೇತ್ರವು ಇದನ್ನು ಸ್ವೀಕರಿಸಿದ ಬಗೆ ಹೇಗೆ? ನಿಮ್ಮ ಬರಹಕ್ಕೆ ಬಂದ ಸ್ಪಂದನೆಗಳ ಬಗ್ಗೆ ನಿಮಗೆ ತೃಪ್ತಿ ಇದೆಯೇ?

ಉತ್ತರ:– ಸೈನಸ್ತೇಸಿಯಾ. ಅಂದರೆ ಬೇರೆ ಬೇರೆ ಮಾಧ್ಯಮಗಳಿಂದ ಉಂಟಾದ ಕಲಾನುಭವಗಳು ಒಂದಕ್ಕೊಂದು ಸೇರಿಕೊಂಡು ಒಂದು ಹೊಸ ಅನುಭವವನ್ನು ಕೊಡುವುದು. ನಾನು ಈ ಸಾಹಿತ್ಯ ವಿಮರ್ಶೆ ಮಾಡುವಾಗ ಈ ರೀತಿಯ ಅನುಭವವನ್ನು ವ್ಯಕ್ತಪಡಿಸಲು ಪ್ರಯತ್ನಿಸಿದ್ದೇನೆ. ಅಂದರೆ ಕಾವ್ಯ ಓದುವಾಗ ಚಿತ್ರದ ಅನುಭವ, ಶಿಲ್ಪದ ಅನುಭವ ಅರ್ಥಾತ್ ದೃಶ್ಯಕಲೆಗಳ ಅನುಭವ ಉಂಟಾಗುವುದು. ಇದು ತೌಲನಿಕ ವಿಮರ್ಶೆ ಅಲ್ಲ. ಅಂತರ್‌ಶಿಸ್ತೀಯ ಅಧ್ಯಯನವೂ ಅಲ್ಲ. ಇದು ವಿವಿಧ ಕಲೆಗಳ ನಡುವಿನ ಸಂಬಂಧದ ಗ್ರಹಿಕೆಯಿಂದ ಉಂಟಾಗುವಂಥದ್ದು. ಇದು ಸಂವೇದನೆಯ ಪ್ರಶ್ನೆ. ಆದರೆ ಇದನ್ನು ನಮ್ಮ ಸಾಹಿತ್ಯ ಕ್ಷೇತ್ರವು ಸರಿಯಾಗಿ ಅರ್ಥ ಮಾಡಿಕೊಂಡು ಸ್ಪಂದಿಸಿದೆ ಎಂದು ನನಗನ್ನಿಸಿಲ್ಲ. ನಮ್ಮವರು ದ್ವೀಪಗಳ ಹಾಗೆ ಯೋಚಿಸುತ್ತಾರೆ. ಸಾಹಿತ್ಯ ಅಂದರೆ ಸಾಹಿತ್ಯ ಮಾತ್ರ. ಚಿತ್ರ ಅಂದರೆ ಚಿತ್ರ ಮಾತ್ರ ಹೀಗೆ. ಸಾಹಿತ್ಯ ಕ್ಷೇತ್ರದವರು ಸಂಗೀತದ ಬಗ್ಗೆ ಕೊಂಚ ಒಲವು ತೋರಿಸುತ್ತಾರೆ ಅನ್ನೋದು ಬಿಟ್ಟರೆ ಬೇರೆ ಕಲೆಗಳ ಬಗ್ಗೆ ತಲೆ ಕೆಡಿಸಿಕೊಳ್ಳೋದಿಲ್ಲ. ಎಚ್.ಎಸ್.ರಾಘವೇಂದ್ರರಾವ್ ಈ ಬಗ್ಗೆ ಓಲುವೆ ಉಳ್ಳವರು. ಅದರೆ ಅಂಥವರು ತೀರಾ ಅಪರೂಪ.

ಪ್ರಶ್ನೆ:–ನಮ್ಮ ಪರಂಪರೆಯಲ್ಲಿ ಜಾನಪದ ಸಂಸ್ಕೃತಿಯಿಂದ ಮೊದಲುಗೊಂಡು ನವೋದಯ ಹಂತದವರೆಗೂ ಸಾಹಿತ್ಯ, ಸಂಗೀತ, ಗಮಕ, ಹಾಡುಗಾರಿಕೆ ಮೊದಲಾದವು ಅಭಿನ್ನವಾಗಿದ್ದವು. ನವ್ಯ ಸಾಹಿತ್ಯ ಚಳುವಳಿ ಬಂದಾಗ ಸಂಗೀತವನ್ನು ದೂರ ಇಡಲಾಯಿತು. ಇದು ಅಸಹಜ ಬೆಳವಣಿಗೆ ಎಂದು ನಿಮಗನ್ನಿಸಿದೆಯೇ?

• ಉತ್ತರ:–ಸ್ವಾತಂತ್ರ್ಯ ಬರುವ ಮುಂಚೆ ಇದ್ದ ಕನಸುಗಳು ಸ್ವಾತಂತ್ರ್ಯ ಬಂದಾಗ ಭಗ್ನಗೊಂಡವು. ಇದರಿಂದ ಕಾವ್ಯದ ಅಭಿವ್ಯಕ್ತಿಯ ಶೈಲಿ ಬದಲಾಗಿ, ಕವಿಗಳು ರಸದೃಷ್ಟಿಯಿಂದ ದೂರವಾದರು. ಇದು ಈಗಾಗಲೇ ಹಲವು ಬಾರಿ ಚರ್ಚೆಗೊಳಗಾಗಿರುವ ವಿಷಯ. ನವ್ಯಕವಿಗಳು ತಮ್ಮ ಕಾವ್ಯದಲ್ಲಿ ತಂದ ರೂಪಕ, ಪ್ರತಿಮೆಗಳು ತಮ್ಮ ವ್ಯಂಗ್ಯದಿಂದಾಗಿ ನವೋದಯದ 'ಸುಂದರ' ರೂಪಕ ಪ್ರತಿಮೆಗಳಿಗೆ ಸಂಪೂರ್ಣ ಭಿನ್ನವಾಗಿದ್ದವು. ಆದರೆ ಒಂದು ವಿಚಾರ. ನವ್ಯರು ಸಂಗೀತವನ್ನು ಬೇಡವೆಂದರೂ ಭಾಷೆಯ ಜೀವಲಯವು ಅವರ ಕಾವ್ಯದಲ್ಲಿ ಇದ್ದೇ ಇತ್ತು, ಈ ಜೀವಲಯ ಗದ್ಯದಲ್ಲೂ ಇರುತ್ತದೆ. ಭಾಷೆಯನ್ನು ಬಳಸಿದ ತಕ್ಷಣ ಇದು ಹೊಮ್ಮುತ್ತದೆ.

ಮುಂದೆ ದಲಿತ ಬಂಡಾಯ ಚಳುವಳಿ ಬಂದಾಗ ಸಂಗೀತವು ವೃಂದಗೀತೆಗಳ ರೂಪದಲ್ಲಿ ಮತ್ತೆ ಬಂತು. ನವೋದಯದ ಭಾವಗೀತೆ ಇಲ್ಲಿ ಸಮೂಹಗೀತೆಯಾಗಿ ಬದಲಾಯಿತು. ಸಾಮಾನ್ಯವಾಗಿ ದಲಿತಕವಿಗಳು ಹಳ್ಳಿಯಿಂದ ಬಂದವರು. ಅವರ ಪ್ರತಿಭಟನಾ ಕಾವ್ಯದಲ್ಲಿ ಹಳ್ಳಿಯ ಹಾಡಿನ ಮಟ್ಟುಗಳು, ಧಾಟಿಗಳು ಸಹಾಯಕ್ಕೆ ಬಂದವು. ಹೀಗಾಗಿ ಸಂಗೀತ ಸ್ಪಷ್ಟವಾಗಿ ಹೇಳುವುದಾದರೆ ಲಯ ಒಂದಲ್ಲ ಒಂದು ರೀತಿಯಲ್ಲಿ ಸಾಹಿತ್ಯದ ಜೊತೆಗೆ ಇದ್ದೇ ಇದೆ.

ಸಂಗೀತ ಸಂಪೂರ್ಣವಾಗಿ ಅಮೂರ್ತ ಕಲೆ. ಶೋಪನ್ ಹೌರ್ ಹೇಳಿದ ಮಾತು ನೆನಪಾಗುತ್ತದೆ. ಎಲ್ಲ ಕಲೆಗಳೂ ಸಂಗೀತದ ಮಟ್ಟಕ್ಕೆ ಏರಲು ಹಂಬಲಿಸುತ್ತವೆ. ಶಾಸ್ತ್ರ ಪ್ರಿಸ್ಕ್ರಿಟಿವ್ ಆದರೆ ಕಲೆ ಡಿಸ್ಕ್ರಿಪ್ಟಿವ್. ಕಲೆ ಯಾವುದನ್ನೂ ನಮ್ಮ ಮೇಲೆ ಹೇರುವುದಿಲ್ಲ. ಕಲೆಗಳ ಅಂತರ್ಸಂಬಂಧವನ್ನು ಅರಿಯುವುದರಿಂದ ನಮ್ಮ ವಿಮರ್ಶೆ ಹೆಚ್ಚು ಶ್ರೀಮಂತಗೊಳ್ಳುತ್ತದೆ.

ಪ್ರಶ್ನೆ 5:– ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ನೀವು ಕೆಲಸ ಮಾಡಿದವರು. ಆ ಅನುಭವ ಹೇಗಿತ್ತು?

ಉತ್ತರ:–ನನಗೆ ಮೊದಲಿನಿಂದಲೂ ಕನ್ನಡವು ಆಧುನಿಕಗೊಳ್ಳಬೇಕಾದರೆ ತಂತ್ರಜ್ಞಾನದ ಮುನ್ನಡೆಯನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು ಎಂದು

ಅನ್ನಿಸುತ್ತಿತ್ತು. ನಾನು ಅಕಾಡೆಮಿಯ ಅಧ್ಯಕ್ಷನಾದಾಗ ಈ ದಿಸೆಯಲ್ಲಿ ನನ್ನ ಕೈಲಾದಷ್ಟು ಪ್ರಯತ್ನ ಪಟ್ಟೆ.

ನಾನು ಅಕಾಡೆಮಿಯಲ್ಲಿ ಹಾಕಿಕೊಂಡ ಮುಖ್ಯ ಯೋಜನೆಗಳಲ್ಲಿ ಒಂದು, ಕವಿಗಳು ತಮ್ಮ ಸ್ವಂತ ಕವಿತೆಯನ್ನು ತಮ್ಮ ದನಿಯಲ್ಲಿ ಓದುವುದನ್ನು (ವಿಡಿಯೋ ಮೂಲಕ) ಚಿತ್ರೀಕರಿಸಿಕೊಂಡು, ಸಿಡಿಗಳಲ್ಲಿ ದಾಖಲಿಸುವುದು ಮತ್ತು ಅಂತರ್ಜಾಲಕ್ಕೆ ಹಾಕುವುದು. ಮೊದಲಿಗೆ ಐದು ಕವಿಗಳ ಕವಿತಾ ವಾಚನವನ್ನು ಹೀಗೆ ದಾಖಲಿಸಿಕೊಂಡು ಸಂಬಂಧಪಟ್ಟ ಅಧಿಕಾರಿಗಳಿಗೆ ಪ್ರದರ್ಶನ ಏರ್ಪಡಿಸಲಾಯಿತು. ಅವರು ಅದನ್ನು ತುಂಬ ಮೆಚ್ಚಿಕೊಂಡು ಇದು ಆಗಲೇಬೇಕಾದ ಕೆಲಸ ಎಂದು ಹೇಳಿ ಅದಕ್ಕಾಗಿ ಬೇಕಾಗುವ ಹಣವನ್ನು ಬಿಡುಗಡೆ ಮಾಡಿದರು. ಈ ದಾಖಲೆಯನ್ನು ಮುಂದುವರಿಸಿ ಒಟ್ಟು 154 ಕವಿಗಳ ಸ್ವಂತ ಕವಿತೆಗಳನ್ನು ಅವರ ದನಿಯಲ್ಲಿ ದಾಖಲಿಸಿದೆವು, ಇದು ನನಗೆ ಸಂತೋಷ ಕೊಟ್ಟ ಕೆಲಸ.

ಪಾಶ್ಚಾತ್ಯರು ತಮ್ಮ ಕವಿಗಳ ದನಿಗಳನ್ನು, ಕವಿತೆಗಳನ್ನು ಹೀಗೆ ದಾಖಲು ಮಾಡುವುದನ್ನು ನೋಡಿದ್ದೆ. ನಾವೂ ಹೀಗೆ ಯಾಕೆ ಮಾಡಬಾರದು ಅನ್ನಿಸಿ ಮಾಡಿದ ಕಾರ್ಯಯೋಜನೆ ಇದು.

ಇನ್ನೊಂದು ಯೋಜನೆ ಅಂದರೆ ಸಾಲುದೀಪಗಳು ಮುಂತಾದ ಮುಖ್ಯಕೃತಿಗಳು ಜಾಲತಾಣದಲ್ಲಿ ಸಿಗುವಂತೆ ಮಾಡಿದ್ದು. ಕನ್ನಡ ಆಧುನಿಕ ಕಾಲದಲ್ಲಿ ಜನರನ್ನು ತಲುಪಬೇಕೆಂದರೆ ಹೀಗೆ ಮಾಡುವುದು ತುಂಬ ಅಗತ್ಯ ಎಂಬುದು ನನ್ನ ಭಾವನೆ.

ಅಕಾಡೆಮಿಯಲ್ಲಿ ಮಾಡಿದ ಇನ್ನೊಂದು ಕೆಲಸ ಅಂದರೆ ಕವಿಗಳ ಹೆಸರು, ಮನೆವಿಳಾಸ, ದೂರವಾಣಿ ಸಂಖ್ಯೆ ಮುಂತಾದ ಮಾಹಿತಿಗಳನ್ನು ಜಿಲ್ಲಾವಾರು ಕ್ರಮದಲ್ಲಿ ಅಂತರ್ಜಾಲದಲ್ಲಿ ಸಿಗುವಂತೆ ಮಾಡಿದ್ದು. ಇದರಿಂದ ಪತ್ರಕರ್ತರು ಮತ್ತು ಕಾವ್ಯಾಸಕ್ತರಿಗೆ ತುಂಬ ಉಪಯೋಗವಾಯಿತು.

ಕನ್ನಡದ ಸಣ್ಣಕಥೆಗಳನ್ನು ಕೇಳುಪುಸ್ತಕದ ರೂಪದಲ್ಲಿ ಪೆನ್‌ಡ್ರೈವ್‌ಗೆ ಹಾಕಲು ಸಾಧ್ಯವಾಗುವ ರೀತಿಯಲ್ಲಿ ದಾಖಲಿಸಬೇಕು ಎಂಬ ಆಸೆ ಇತ್ತು. ಈ ಯೋಜನೆ ಸಾಧ್ಯವಾಗಲಿಲ್ಲ.

ಅಕಾಡೆಮಿಯಲ್ಲಿದ್ದಾಗ ಅಂದುಕೊಂಡಷ್ಟನ್ನು ಮಾಡಲಾಗದಿದ್ದರೂ ಕೈಲಾದಷ್ಟನ್ನು ಮಾಡಿದ್ದೇನೆ ಎಂಬ ಭಾವನೆ ನನ್ನದು.

ಪ್ರಶ್ನೆ 6:–ಶಾಲೆ ಕಾಲೇಜುಗಳಲ್ಲಿ ಕಲಾಸ್ವಾದನೆಯನ್ನು ಕಲಿಸಲು ಸಾಕಷ್ಟು ಪ್ರಯತ್ನಗಳಾಗುತ್ತಿವೆ ಎಂದು ನಿಮಗೆ ಅನ್ನಿಸುತ್ತದೆಯೇ? ಈ ನಿಟ್ಟಿನಲ್ಲಿ ಏನು ಮಾಡಬೇಕು?

ಉತ್ತರ:–ಇಂದು ಕೆಲವು ಶಾಲೆಗಳಲ್ಲಿ ಕಲೆಯನ್ನು ಒಂದು ಫ್ಯಾಷನ್ ಎಂಬಂತೆ ಹೇಳಿಕೊಡುತ್ತಿದ್ದಾರೆ. ಆದರೆ ಈ ತೋರಿಕೆಯ ಆಸಕ್ತಿಗಿಂತ ನಿಜವಾದ ಕಲಾಸಕ್ತಿ ಮುಖ್ಯ. ಮಕ್ಕಳಿಗೆ ಬಾಲ್ಯದಲ್ಲಿ ಕಲೆ ಎಂದರೆ ಏನು, ಅದನ್ನು ಹೇಗೆ ಸವಿಯಬೇಕು ಅನ್ನುವುದನ್ನು ಹೇಳಿಕೊಟ್ಟರೆ ಅವರು ಮುಂದೆ ಅದನ್ನು ಆಸ್ವಾದಿಸುವುದನ್ನು ಕಲಿಯುತ್ತಾರೆ. ಎಲ್ಲರೂ ಕಲಾವಿದರಾಗಬೇಕು ಅಂತಲ್ಲ. ಕಲೆಯಲ್ಲಿ ಆಳವಾದದ್ದು, ಗಂಭೀರವಾದದ್ದು ಏನು ಎಂಬುದನ್ನು ಗುರುತಿಸಲು ಅವರು ಕಲಿಯುತ್ತಾರೆ. ಈ ಪ್ರಯತ್ನ ಮಾಡಬೇಕು. ನಾನು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಲ್ಲಿದ್ದಾಗ ಈ ಕಲಾಸ್ವಾದನೆಯ ಕಾರ್ಯಾಗಾರಗಳನ್ನು ಮಾಡಿದ್ದೆ. ಲಲಿತಾ ಶ್ರೀನಿವಾಸನ್, ಆರ.ಎಂ.ಹಡಪದ್ ಮೊದಲಾದ ಕಲಾ ಪರಿಣಿತರು ಬಂದು ಎಳೆಯರಿಗೆ ಕಲೆಗಳ ಪರಿಚಯವನ್ನು ಮಾಡಿಕೊಟ್ಟಿದ್ದರು. ಐನ್‌ಸ್ಟೈನ್ ಒಂದು ಪಾಶ್ಚಾತ್ಯ ಶಾಸ್ತ್ರೀಯ ಸಂಗೀತದ ಕಛೇರಿಗೆ ಹೋಗಿದ್ದಾಗ ಆ ಕಲೆ ಎಂದರೆ ಏನೆಂದೇ ಗೊತ್ತಿರದಿದ್ದ ಒಬ್ಬ ಹುಡುಗನಿಗೆ ತಾಳ್ಮೆಯಿಂದ ಅದನ್ನು ಪರಿಚಯಿಸಿ, ಆಸ್ವಾದಿಸುವುದನ್ನು ಕಲಿಸಿದರಂತೆ. ನಾವು ಈ ದಾರಿ ಹಿಡಿಯಬೇಕು.

ಪ್ರಶ್ನೆ 7:–ಈ ಜಾಗತೀಕರಣದ ಕಾಲದಲ್ಲಿ ಬದುಕು ತುಂಬ ಬದಲಾಗಿದೆ. ಶೆಟ್ಟಿ ಅಂಗಡಿ, ಕಾಕಾ ಅಂಗಡಿಗಳ ಬದಲು ಮಾಲ್‌ಗಳು ಬಂದಿವೆ. 'ಬಳಸು ಮತ್ತು ಎಸೆ' ಧೋರಣೆ ಕೇವಲ ವಸ್ತುಗಳ ಮಟ್ಟಿಗೆ ಮಾತ್ರವಲ್ಲ, ಮನುಷ್ಯ ಸಂಬಂಧಗಳಲ್ಲೂ ತಲೆದೋರಿದೆ. ಈ ಕುರಿತು ಹಿರಿಯರಾದ ನೀವು ಏನು ಹೇಳುತ್ತೀರಿ?

ಉತ್ತರ:–ಹಿಂದೆ ಗೊತ್ತಿರುವ ಅಂಗಡಿಗಳಿಗೆ ಹೋಗ್ತಿದ್ವಿ. ಅಂಗಡಿಯವರ ಪರಿಚಯ ಇರುತ್ತಿತ್ತು. ಮೋಸ ಕಡಿಮೆ ಇತ್ತು. ಇವತ್ತು ಆ ಮಾನವೀಯ ಸ್ಪರ್ಶ

(ಹ್ಯೂಮನ್ ಟಚ್) ಇಲ್ಲ. ಇದರಿಂದಾಗಿ ಮೋಸ ಮಾಡುವುದು ಹೆಚ್ಚುತ್ತಿದೆ. ಯಾಂತ್ರಿಕತೆ ಹೆಚ್ಚುತ್ತಿದೆ.

ಇನ್ನೊಂದು ಪರಿಣಾಮವೂ ಆಗುತ್ತಿದೆ. 1947ಕ್ಕಿಂತ ಮುಂಚೆ ಬೆಂಗಳೂರಿನಲ್ಲಿ ದಂಡುಪ್ರದೇಶ(ಕಂಟೋನ್ಮೆಂಟ್)ಕ್ಕೂ ಸಾಮಾನ್ಯ ಪ್ರದೇಶಕ್ಕೂ ಅಂತರ ಕಲ್ಪಿಸುವ ಗೇಟ್ ಒಂದು ಕಬ್ಬನ್ ಪಾರ್ಕಿನಲ್ಲಿತ್ತು. ಈಗ ನನಗೆ ಅನ್ನಿಸುತ್ತೆ, ಐಟಿಪ್ರಪಂಚದಿಂದಾಗಿ ಹೊಸ ರೀತಿಯ ದಂಡು ಪ್ರದೇಶ ನಿರ್ಮಾಣವಾಗಿದೆ ಅಂತ; ಒಂದು ಐಟಿ ದಂಡು ಪ್ರದೇಶ. ಅದು ಬೇರೆಯೇ ಪ್ರಪಂಚ. ಇನ್ನೊಂದು ಹಳೆಯ ನಗರ ಪ್ರದೇಶ. ಜಾಗತೀಕರಣದಿಂದ ಎಲ್ಲ ರೀತಿಯ ಸವಲತ್ತು, ಸೌಲಭ್ಯ ಸಿಕ್ಕಿರಬಹುದು(ಕೆಲವರಿಗೆ). ಆದರೆ ಅಂತಿಮವಾಗಿ ಬದುಕಿಗೆ ಬೇಕಾದ್ದೇನು? ನೆಮ್ಮದಿ. ಅದೊಂದು ಇಲ್ಲ!

ಪ್ರಶ್ನೆ:–ಎಲ್ಲ ಕಲೆಗಳಂತೆ ಸಿನಿಮಾವನ್ನೂ ಸಹ ಗಮನಿಸಿಕೊಂಡು ಬಂದವರು ನೀವು. ಈಗ ಬರುತ್ತಿರುವ ಕನ್ನಡ ಸಿನಿಮಾಗಳನ್ನು ಕುರಿತು ನಿಮ್ಮ ಅನಸಿಕೆ ಏನು?

ಉತ್ತರ:–ನೋಡಿ, ಯಾವುದೇ ಕಲೆಗೆ ಮೂರು ಉದ್ದೇಶಗಳಿರುತ್ತವೆ. ಮನೋರಂಜನೆ, ರಸದೃಷ್ಟಿ ಮತ್ತು ಚಿಂತನೆ. ಕಲೆಯನ್ನು ಸೃಷ್ಟಿಸುವ ಎಲ್ಲರೂ ಈ ಮೂರರ ಬಗ್ಗೆಯೂ ಆಲೋಚನೆ ಮಾಡುತ್ತಾರೆ ಎಂದು ಹೇಳಲಾಗದು. ವ್ಯಾಪಾರೀ ದೃಷ್ಟಿಯ ಸಿನಿಮಾಗಳನ್ನು ಮಾಡುವವರಲ್ಲಿ ಮನರಂಜನೆಯ ಉದ್ದೇಶವೇ ಮುಖ್ಯವಾಗಿರುತ್ತದೆ. ಕಲಾತ್ಮಕ ದೃಷ್ಟಿಯ ಸಿನಿಮಾಗಳ ರೀತಿಯೇ ಬೇರೆ. ಉದಾಹರಣೆಗೆ ಗಿರೀಶ್ ಕಾಸರವಳ್ಳಿಯ ಸಿನಿಮಾಗಳು. ಅವರ ಸಿನಿಮಾಗಳು ಮೇಲ್ನೋಟಕ್ಕೆ ಹೇಳುತ್ತಿರುವುದೇ ಬೇರೆ ವಿಷಯ. ಆಳದಲ್ಲಿ ಹೇಳುತ್ತಿರುವುದೇ ಬೇರೆ. ಅವರ 'ದ್ವೀಪ' ಸಿನಿಮಾ ನೀರು, ಪ್ರವಾಹ, ಮುಳುಗಡೆ ಇವುಗಳನ್ನೆಲ್ಲ ಉದ್ದಕ್ಕೂ ತೋರಿಸುತ್ತಿದ್ದರೂ ಕೊನೆಗೆ ಆ ಸಿನಿಮಾದಿಂದ ಹೊರಡುವ ಸಂದೇಶವೇನೆಂದರೆ, ಮನುಷ್ಯನು ಬೇರೆ ಮನುಷ್ಯರ ಸಂಪರ್ಕವನ್ನು ಕಳೆದುಕೊಂಡು ಒಂದು ದ್ವೀಪವಾಗಿದ್ದಾನೆ ಎಂದು. ಹೀಗೆ ಸಿನಿಮಾಭಾಷೆಯ ಎಲ್ಲ ಸಾಧ್ಯತೆಗಳನ್ನೂ ದುಡಿಸಿಕೊಳ್ಳುವವರೂ ಇದ್ದಾರೆ. ಜನಪ್ರಿಯತೆಯ ಜಾಡಿನಿಂದ ಹೊರಬರದಿರುವವರೂ ಇದ್ದಾರೆ. ರಾಜ್‌ಕಪೂರ್ ಜನಪ್ರಿಯ ಅಂಶಗಳನ್ನು ಹೊಂದಿದ್ದರೂ ತಮ್ಮ ಕಾಲದ ಪ್ರಭಾವದಿಂದಲೋ

ಏನೋ ಎಡ ಪಂಥೀಯ ಚಿಂತನೆಗಳನ್ನು ತಮ್ಮ ಸಿನಿಮಾಗಳಲ್ಲಿ ತರುವ ಪ್ರಯತ್ನವನ್ನು ಮಾಡುತ್ತಿದ್ದರು.

ಪ್ರಶ್ನೆ:– ಜೀವನದ ಎಲ್ಲ ಏಳುಬೀಳು, ಎಡರುತೊಡರುಗಳ ನಡುವೆಯೂ ನೀವು ಕಲೆ, ಸಾಹಿತ್ಯಗಳ ಬಗ್ಗ ನಿರಂತರ ಉತ್ಸಾಹವನ್ನು ಉಳಿಸಿಕೊಂಡು ಬಂದಿರಿ. ಇದು ಹೇಗೆ ಸಾಧ್ಯವಾಯಿತು? ದಣಿವು, ಬೇಸರ ನಿಮ್ಮನ್ನು ಕಾಡಲಿಲ್ಲವೇ?

ಉತ್ತರ:–ಉತ್ಸಾಹ ಉಳಿಯಲು ಕಾರಣ ಪ್ರೀತಿ. ಎಲ್ಲಿ ಪ್ರೀತಿ ಇರುತ್ತದೋ ಅಲ್ಲಿ ಕಷ್ಟ ಅನ್ನಿಸುವ ಪ್ರಶ್ನೆ ಇಲ್ಲ. ನನಗೆ ಅಧ್ಯಾಪನದ ಬಗ್ಗೆ ಅಪಾರ ಪ್ರೀತಿ ಎಂದೆನಲ್ಲ. ಹಾಗೆಯೇ ಕಲೆಯ ಬಗ್ಗೆಯೂ ನನಗೆ ತುಂಬ ಪ್ರೀತಿ. ಸಂಗೀತ ಕೇಳುತ್ತಾ, ಚಿತ್ರ ನೋಡುತ್ತಾ, ಶಿಲ್ಪಕಲೆಯನ್ನು ಆಸ್ವದಿಸುತ್ತಾ ನಾನು ಗಂಟೆಗಟ್ಟಲೆ ಮೈಮರೆಯಬಲ್ಲೆ. ದೆಹಲಿಯಲ್ಲಿ ಒಮ್ಮೆ ರೋಡಿನ್‌ನ 'ದ ಕಿಸ್' ಎಂಬ ಶಿಲ್ಪವನ್ನು ನೋಡುತ್ತ ನಾನು ಮೈಮರೆತದ್ದು ನೆನಪಾಗುತ್ತದೆ. ಮಣ್ಣಿನಿಂದಲೇ ಎದ್ದು ಬಂದಿದ್ದಾರೇನೋ ಎಂಬಂತೆ ತೋರುವ  ಇಬ್ಬರು ಗಂಡು ಹೆಣ್ಣು ಮನಃಪೂರ್ವಕವಾಗಿ ಚುಂಬಿಸುವುದನ್ನು ಅಭಿವ್ಯಕ್ತಿಸುವ ಕಲಾಕೃತಿ ಅದು. ಆ ದೇಹ ರಚನೆ, ಭಾವ, ಶಿಲ್ಪಿಯ ಕೌಶಲ್ಯ ಇವನ್ನೆಲ್ಲ ಗಮನಿಸುತ್ತ ನಾನು ಸುಮಾರು ಹದಿನೈದು ನಿಮಿಷ ಕಳೆದಿರಬೇಕು. ಹಾಗೆ ನೋಡುತ್ತ ಇದ್ದವನಿಗೆ ಮಣ್ಣಿನಿಂದಲೇ ಅರಳುವ ಮನುಷ್ಯ, ಅದರಲ್ಲಿ ಗಂಡು, ಹೆಣ್ಣು ಅನ್ನುವ ವಿಧ, ಅವರ ನಡುವಿನ ಪ್ರೀತಿಯ ಉತ್ಕಟತೆ, ಆ ಪ್ರೀತಿ ಆ ನಿರ್ದಿಷ್ಟ ಗಂಡು ಹೆಣ್ಣಿನ ವ್ಯಾಪ್ತಿಯನ್ನು ಮೀರಿ ಇಡೀ ಲೋಕವನ್ನೇ ವ್ಯಾಪಿಸುವ ಪರಿ......ಅಬ್ಬ! ವ್ಹಾಟ್ ಎ ಕಿಸ್ ಇಟ್ ವಾಸ್! ಕಿಸ್ ಆಫ್ ಲವ್? ಆರ್ ಕಿಸ್ ಆಫ್ ಲೈಫ್? ನಾನು ಚಿತ್ರದಲ್ಲಿ ಹೀಗೆ ಸುಮಾರು ಹೊತ್ತು ಕಳೆದು ಹೋಗಿ ಯಾವಾಗಲೋ ವಾಸ್ತವಲೋಕದ ಪ್ರಜ್ಞೆಗೆ ಮರಳಿದಾಗಷ್ಟೆ ನನ್ನ ಪಕ್ಕ ಹೆಂಗಸೊಬ್ಬರು ಇದ್ದಿದ್ದನ್ನು ಗಮನಿಸಿದೆ! ಅಲ್ಲಿಯವರೆಗೂ ಸುತ್ತಮುತ್ತ ಏನಾಯಿತೋ ನನಗೆ ತಿಳಿಯದು. ಈಗಲೂ ಅಷ್ಟೆ. ಕಲಾಕೃತಿಯನ್ನು ನೋಡುತ್ತ ನನ್ನನ್ನೇ ನಾನು ಮರೆಯಬಲ್ಲೆ. ಇದೇ ನನ್ನ ಉತ್ಸಾಹದ ಮೂಲ ಅನ್ನಿಸುತ್ತದೆ.

ಪ್ರಶ್ನೆ:–ಈಗೀಗ ತುಂಬ ಚರ್ಚಿತವಾಗುತ್ತಿರುವ ಲಿವ್ ಇನ್ ಸಂಬಂಧ, ಗೇ, ಲೆಸ್ಬಿಯನ್ ಪರಿಕಲ್ಪನೆಗಳು – ಇವುಗಳ ಕುರಿತು ನಿಮ್ಮ ಅನಿಸಿಕೆ ಏನು?

ಉತ್ತರ :– ಈ ಗೇ, ಲೆಸ್ಬಿಯನ್ ಅನ್ನುವುದೆಲ್ಲ ಕೊನೆಗೂ ಮನುಷ್ಯನ ದೇಹ ಮತ್ತು ಮೆದುಳಿಗೆ ಸಂಬಂಧಿಸಿದ ಸಂಗತಿಗಳು. ಕಾಮ ಮತ್ತು ಪ್ರೇಮವನ್ನು ವಿಂಗಡಿಸಿ ನೋಡುವುದು ವಿಕ್ಟೋರಿಯನ್ ಮನಸ್ಥಿತಿ. ಭಾರತೀಯರಲ್ಲಿ ಅಂತಹ ಭೇದ ಇರಲಿಲ್ಲ. ಕಾಮಸೂತ್ರವನ್ನು ರಚಿಸಿದ ವಾತ್ಸಾಯನನ್ನು ಋಷಿ ಸ್ಥಾನದಲ್ಲಿಟ್ಟವರು ನಾವು. ಪ್ರಾಣಿಗಳಲ್ಲಿ ಕಾಮ ಅನ್ನುವುದು ಋತು ನಿಯಂತ್ರಿತ, ಮನುಷ್ಯರಲ್ಲಿ ಅದು ಮೆದುಳಿನಿಂದ ನಿಯಂತ್ರಿಸಲ್ಪಡುವಂಥದ್ದು. ಗೇ, ಲೆಸ್ಬಿಯನ್ ಮುಂತಾದವನ್ನೆಲ್ಲ ನಾವು ಪ್ರಕೃತಿದತ್ತ ಸಂಗತಿ ಎನ್ನಬೇಕೇ ಹೊರತು ಅನೈಸರ್ಗಿಕ ಅನ್ನುವ ಅಗತ್ಯವಿಲ್ಲ. ಸಹಜ, ಅಸಹಜ ಎಲ್ಲವೂ ಪ್ರಕೃತಿಯ ಭಾಗವೇ.

ಪ್ರಶ್ನೆ:–ನಿಮಗೆ ನಿಮ್ಮ ಜೀವನದ ಯಾವುದಾದರೂ ವಿಷಯವನ್ನು ಕುರಿತು ಪಶ್ಚಾತ್ತಾಪ ಇದೆಯೇ?

ಉತ್ತರ:–ನಾನು ಹದಿನೇಳು ವರ್ಷದವನಾಗಿದ್ದಾಗ ಮಕರಂದ ಎಂಬ ಹೆಸರಿನಲ್ಲಿ ರೂಪಾಂತರಿಸಿ ಕುವೆಂಪು ಅವರಿಂದ ಮೆಚ್ಚುಗೆ ಪಡೆದಿದ್ದೆ. ಆ ಲೇಖನವು ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟಗೊಂಡಿತ್ತು. ಆದರೆ ಕಾರಣಾಂತರಗಳಿಂದ ನಾನು ಆಮೇಲೆ ತುಂಬ ವರ್ಷ ಬರೆಯಲಿಲ್ಲ. ಮೇಷ್ಟ್ರಾದ ಮೇಲಂತೂ ಮಕ್ಕಳಿಗೆ ಪಾಠ ಹೇಳುವುದರಲ್ಲೇ ಅತೀವ ತೃಪ್ತಿ ಕಾಣುತ್ತಿದ್ದೆ. ನನ್ನ ಕೆಲವು ಸಮಕಾಲೀನರು, ಪರಿಚಿತ ಅಧ್ಯಾಪಕರು ತರಗತಿಯ ಪಾಠಕ್ಕಾಗಿ ಮಾಡಿಕೊಂಡ ಟಿಪ್ಪಣಿಗಳನ್ನು ಬಳಸಿಕೊಂಡು ಸಾಕಷ್ಟು ಪುಸ್ತಕಗಳನ್ನು ಬರೆದರು. ನಾನು ಅವರೊಂದಿಗೆ 'ಏಕೆ ಬರೆಯಬೇಕು? ಪಾಠ ಮಾಡಿದರೆ ಸಾಲದೇ?' ಎಂದು ವಾದ ಕೂಡ ಮಾಡುತ್ತಿದ್ದೆ. ಸುಮಾರು 1970–71ರವರೆಗೂ ನಾನು ಹೇಳಿಕೊಳ್ಳುವಷ್ಟು ಬರೆಯಲೇ ಇಲ್ಲ. ನನ್ನನ್ನು ಜನ ಬೆನ್ನು ಹತ್ತಿ ಬರೆಸಿದ್ದೇ ಹೆಚ್ಚು. ಓದುವುದರಲ್ಲಿನ ಖುಷಿ ಬರೆಯುವುದರ ಬಗ್ಗೆ ಇರಲಿಲ್ಲ. ಒಮ್ಮೊಮ್ಮೆ ಯೋಚಿಸಿದರೆ "ಏಕೆ ಹೀಗೆ ಮಾಡಿದೆ?" ಅನ್ನಿಸುತ್ತದೆ. ಇದು ದೊಡ್ಡ ವ್ಯಥೆ ಅಂತ ಅಲ್ಲ, ಒಮ್ಮೊಮ್ಮೆ ಬರುವ ಭಾವನೆ ಅಷ್ಟೆ.

*****

# ಉಪಸಂಹಾರ

ಕೃಷ್ಣಯ್ಯನವರ ಬದುಕು ಬರಹಗಳನ್ನು ಒಟ್ಟಿಗೆ ನೋಡಿದಾಗ ಒಬ್ಬ ಅಧ್ಯಯನಶೀಲ ಆಧ್ಯಾಪಕನ ಶ್ರದ್ಧೆಯು ಎಂತಹ ಅದ್ಭುತಗಳನ್ನು ಸಾಧಿಸಬಹುದು ಅನ್ನಿಸುತ್ತದೆ. ಕಾವ್ಯಮೀಮಾಂಸೆಯು ಇವರನ್ನು ಸೌಂದರ್ಯ ಮೀಮಾಂಸೆಯತ್ತ, ಸೌಂದರ್ಯ ಮೀಮಾಂಸೆಯು ಕಲೆಗಳತ್ತ ಒಯ್ದಿತು. ಕಲಾವಿಮರ್ಶೆ ಮಾಡುತ್ತ ಸಾಹಿತ್ಯದಲ್ಲಿ ಕಲೆಯ ಅಂಶಗಳನ್ನು ಮತ್ತು ಕಲೆಯಲ್ಲಿ ಸಾಹಿತ್ಯದ ಅಂಶಗಳನ್ನು ಕಾಣುವ ವಿಶೇಷ ರೀತಿಯು ಇವರಿಗೆ ಪ್ರಾಪ್ತವಾಯಿತು. ಇದರ ಜೊತೆಗೆ ಹಿಡಿದ ಕೆಲಸವನ್ನು ಅದೆಷ್ಟೇ ಕಷ್ಟವಾದರೂ ಬಿಡದೆ ಮುಗಿಸುವ ಪರಿಯು ಇವರಿಂದ ದೊಡ್ಡ ದೊಡ್ಡ ಕೆಲಸಗಳನ್ನು ಮಾಡಿಸಿದೆ. 'ಬೆಂಗಳೂರು ದರ್ಶನ', 'ಕರ್ನಾಟಕ ಕಲಾ ದರ್ಶನ'ದಂತಹ ಕೃತಿಗಳನ್ನು ಸಂಪಾದಿಸುವುದು ಸುಲಭದ ಮಾತಲ್ಲ. ಅದಕ್ಕೆ ಅಪಾರ ತಾಳ್ಮೆ, ಸಹನೆ ಬೇಕು. ಸಾವಿರಾರು ಪುಟಗಳನ್ನು ಮೀರಿ ಹರಿದ ನಿಟ್ಟೂರು ಶ್ರೀನಿವಾಸರಾಯರ ನೆನೆಪುಗಳನ್ನು ಅಚ್ಚುಕಟ್ಟಾಗಿ ಒಂದು ಕೃತಿಯಲ್ಲಿ ಕಟ್ಟಿಕೊಡುವುದೂ ಸುಲಭವಲ್ಲ. ಇಲ್ಲೆಲ್ಲ ಹಿಡಿದ ಕೆಲಸವನ್ನು ಛಲ ಬಿಡದೆ ಪೂರೈಸುವ ಗುಣ ಕೆಲಸ ಮಾಡಿದೆ. ಇದರ ಜೊತೆಗೆ ಇವರಲ್ಲಿರುವ ಕಷ್ಟ ಸಹಿಷ್ಣುತೆ ಯಾರೇ ಆದರೂ ಮೆಚ್ಚಿಕೊಳ್ಳುವಂಥದ್ದು. ಜೀವನದಲ್ಲಿ ಬರುವ ಅನೇಕ ಏಳುಬೀಳುಗಳನ್ನು ಎದುರಿಸಿಯೂ ಮನಸ್ಸನ್ನು ಕಹಿ ಮಾಡಿಕೊಳ್ಳದೆ ಉತ್ಸಾಹ ಕಳೆದುಕೊಳ್ಳದೆ ಇವರು ಕೆಲಸ ಮಾಡಿದ ರೀತಿ ಕಿರಿಯರಿಗೆ ಒಂದು ಪಾಠ. ತಮ್ಮ ಶಿಷ್ಯರಿಂದ, ಸಹೋದ್ಯೋಗಿಗಳಿಂದ, ಪರಿಚಿತರಿಂದ ತುಂಬು ಗೌರವಕ್ಕೆ ಪಾತ್ರರಾದ ವ್ಯಕ್ತಿ ಇವರು. "ಓ, ಕೃಷ್ಣಯ್ಯನವರೇ! ಸಜ್ಜನರು. ಅದ್ಭುತವಾಗಿ ಪಾಠ ಮಾಡ್ತಿದ್ದರು. ಅವರ ತರಗತಿಯೆಂದರೆ ಯಾರೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ಯಾವಾಗಲೂ ತರಗತಿ ತುಂಬಿರುತ್ತಿತ್ತು. ಎಲ್ಲವನ್ನೂ ಅರ್ಥವಾಗುವಂತೆ ವಿವರಿಸಿ ಹೇಳುತ್ತಿದ್ದರು. ತಮ್ಮ ಕಿರಿಯ ಸಹೋದ್ಯೋಗಿಗಳಿಗೂ ಸ್ವಲ್ಪವೂ ಬೇಸರಿಸಿಕೊಳ್ಳದೆ ಮಾರ್ಗದರ್ಶನ ಮಾಡುತ್ತಿದ್ದರು. ಯಾವ ಅನಗತ್ಯ, ತಂಟೆ, ತಕರಾರಿಗೂ ಹೋದವರಲ್ಲ. ತಾವಾಯಿತು, ತಮ್ಮ ಕೆಲಸವಾಯಿತು ಎಂಬಂತೆ ಇದ್ದವರು." ಇವರ ಬಗ್ಗೆ ಯಾರನ್ನು ಕೇಳಿದರೂ ಇದೇ ಮಾತು.

ಇವರ ಭಾಷಾಬಳಕೆಯ ಬಗ್ಗೆ ಎರಡು ಮಾತು ಬರೆಯಲೇಬೇಕು. ನಿಖರ, ಸ್ಪಷ್ಟ, ಅನುಮಾನಕ್ಕೆಡೆಯಿಲ್ಲದ ಮಾತುಗಳು. ಚಿಕ್ಕ ಲೇಖನವಾಗಲಿ,

ದೊಡ್ಡದಾಗಲಿ ಉತ್ತಮ ಪೂರ್ವಸಿದ್ಧತೆ ಮಾಡಿಕೊಳ್ಳುತ್ತಾರೆ. ಓದುಗರನ್ನು ಸೆಳೆಯುವ ಒಂದು ಸ್ವಾರಸ್ಯಕರ ಸಂಗತಿಯೊಂದಿಗೆ ವಿಷಯ ಪ್ರಸ್ತಾಪಿಸಿ, ತಕ್ಕ ಹಿನ್ನೆಲೆಯೊಂದಿಗೆ ವಿಷಯ ಪ್ರಸ್ತಾಪ ಮಾಡುತ್ತಾರೆ. ನಂತರ ಆ ವಿಷಯದ ಎಲ್ಲ ಮಗ್ಗುಲುಗಳನ್ನೂ ಓದುಗರ ಅರಿವಿಗೆ ತರುತ್ತಾ ಜ್ಞಾನದ ಧಾರೆ ಎರೆಯುತ್ತಾರೆ. ಇವರ ಲೇಖನ ಓದುತ್ತಿದ್ದರೆ ತರಗತಿಯಲ್ಲಿ ಪಾಠ ಕೇಳಿದ ಅನುಭವವಾಗುತ್ತದೆ.


ಕನ್ನಡ ವಿಮರ್ಶಾಲೋಕ ಕೃಷ್ಣಯ್ಯನವರ ಸಾಹಿತ್ಯ ವಿಮರ್ಶೆಯ ಬಗ್ಗೆ ಅಲ್ಲೊಮ್ಮೆ ಇಲ್ಲೊಮ್ಮೆ ಕ್ವಚಿತ್ತಾಗಿ ಪ್ರಸ್ತಾಪಿಸಿದ್ದು ಬಿಟ್ಟರೆ ಹೆಚ್ಚು ಗಮನ ಕೊಟ್ಟಿಲ್ಲ. ಬಹುಶಃ ಅವರನ್ನು ಕುರಿತ ಅಭಿನಂದನ ಗ್ರಂಥವೊಂದು ಬಂದರೆ ಅವರ ವಿಮರ್ಶೆ ಮತ್ತು ಕಲಾಚಿಂತನೆಗೆ ಸಿಗಬೇಕಾದ ಮನ್ನಣೆ ಸಿಗಬಹುದೇನೋ.

ಈ ನಾಡಿನ ಎಲ್ಲ ಕನ್ನಡ ಮೇಷ್ಟ್ರುಗಳಿಗೆ ಸ್ಫೂರ್ತಿಯಾಗಬಲ್ಲ ವ್ಯಕ್ತಿತ್ವದ ಎಂ.ಎಚ್.ಕೃಷ್ಣಯ್ಯ ಮೇಷ್ಟ್ರಿಗೆ ಧನ್ಯವಾದಗಳು.

ಥ್ಯಾಂಕ್ಯೂ ಸರ್!

**********ಮುಕ್ತಾಯ***********

# ಛಾಯಾಚಿತ್ರಗಳು






ಪ್ರಶಸ್ತಿ ಸಮಿತಿ



ಕರ್ನಾಟಕ ಸರ್ಕಾರ
ಸುವರ್ಣ ಸಂಭ್ರಮ
ಕರ್ನಾಟಕ ಸಾಹಿತ್ಯ ಅಕಾಡೆಮಿ
ಗೌರವ ಪ್ರಶಸ್ತಿ
೨೦೧೧ ಮತ್ತು ೨೦೧೨
೨೦೧೦ ಮತ್ತು ೨೦೧೧






ಶ್ರೀ
ಚಿತ್ರಕಲಾ ಚಿಂತನೆ
ಗ್ರಂಥ ಬಿಡುಗಡೆ ಸಮಾರಂಭ


18 6 '91









ಕನ್ನಡ ಗೆಳೆಯರ ಬಳಗ
ಪ್ರೊ|| ಎಂ.ಎಚ್. ಕೃಷ್ಣಯ್ಯ-೭೦
ಶುಭ ಹಾರೈಕೆ ★ ಗೌರವಾರ್ಪಣೆ ★ 'ಆಲೋಕನ' ಪುಸ್ತಕದ ಲೋಕಾರ್ಪಣೆ






ಕರ್ನಾಟಕ ನಾಟಕ ಅಕಾಡಮಿ


ವೃಕ್ಷ
ವಾಸುದೇವ್







MELODY
LORE
Satu
nuary 2006











## ಛಾಯಾಚಿತ್ರ ವಿವರ

೧. ಕುವೆಂಪು ಅವರೊಂದಿಗೆ ಇದ್ದ ಸ್ಮರಣೀಯ ಕ್ಷಣ

೨. ಕನ್ನಡ ವಿಶ್ವವಿದ್ಯಾಲಯದ ನುಡಿಹಬ್ಬದಲ್ಲಿ ನಾಡೋಜ ಗೌರವ

೩. ಮಾಸ್ತಿ ಪ್ರಶಸ್ತಿಯ ಸಂಭ್ರಮ

೪. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿಯ ಸುಸಂದರ್ಭ

೫. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನದ ಸವಿನೆನಪು

೬. ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರೊಡನೆ

೭. ಶ್ರೀ ಶಂಕರ ಪಾಟೀಲರ ಚಿತ್ರಕಲಾ ಚಿಂತನೆ ಕೃತಿಯನ್ನು ಶ್ರಿ ಆರ್.ಎಂ.ಹಡಪದ್ ಅವರು ಬಿಡುಗಡೆ ಮಾಡುತ್ತಿರುವುದು

೮. ಶ್ರೀ ಪುತಿನ ಮತ್ತು ಶ್ರೀ ಬಸವರಾಜ ಸಬರದ ಅವರೊಂದಿಗೆ

೯. ಕವಿಶೈಲದಲ್ಲಿ ಶ್ರೀ ಷಟ್ಟರ್ ಹಾಗೂ ಶ್ರೀಮತಿ ಬಿ.ಎನ್.ಸುಮಿತ್ರಾಬಾಯಿ ಅವರೊಂದಿಗೆ

೧೦. ಚೆಂಬೆಳಕಿನ ಕವಿ ಚೆನ್ನವೀರ ಕಣವಿ ಅವರೊಂದಿಗೆ

೧೧. ಶ್ರೀ ಯು.ಆರ್.ಅನಂತಮೂರ್ತಿ, ಶ್ರೀಮತಿ ಎಸ್ತರ್ ಮತ್ತು ಶ್ರೀ ಗಿರೀಶ್ ಕಾರ್ನಾಡ್ ಅವರೊಂದಿಗೆ

೧೨. ಪ್ರೊ.ಕೃಷ್ಣಯ್ಯನವರಿಗೆ 70 ವರ್ಷಗಳಾದ ಸುಸಂದರ್ಭ. ಸಾಹಿತ್ಯ ಲೋಕದ ದಿಗ್ಗಜರು ಮತ್ತು ಜೀವನಸಂಗಾತಿ ಶ್ರೀಮತಿ ಸುವರ್ಣ ಅವರೊಂದಿಗೆ

೧೩. ಚಿತ್ರಕಾರ ಶ್ರೀ ಎನ್.ಮರಿಶಾಮಾಚಾರ್ ಅವರಿಗೆ ಸನ್ಮಾನ (ಪತ್ನಿಯೊಂದಿಗೆ)

೧೪. ಕರ್ನಾಟಕ ಕಲಾ ದರ್ಶನ ಕೃತಿಯ ಬಿಡುಗಡೆಯ ಸುದಿನ

೧೫. ಕರ್ನಾಟಕ ನಾಟಕ ಅಕಾಡೆಮಿಯ ವಿಚಾರ ಸಂಕಿರಣದಲ್ಲಿ ಭಾಷಣ ಮಾಡುತ್ತಿರುವುದು

೧೬. 'ವೃಕ್ಷ – ವಾಸುದೇವ್ ಕಲೆ ಬದುಕು' ಪುಸ್ತಕದ ಲೋಕಾರ್ಪಣೆಯ ಸಂದರ್ಭದಲ್ಲಿ

೧೭. ಶ್ರೀ ವಿವೇಕ್ ಶಾನ್‌ಭಾಗ್ ಮತ್ತು ಶ್ರೀ ಕೆ.ವಿ.ಅಕ್ಷರ ಅವರಿಗೆ ಸನ್ಮಾನ

೧೮. ಶ್ರೀ ಯು.ಆರ್.ಅನಂತಮೂರ್ತಿ ಅವರೊಂದಿಗೆ

೧೯. ಸಿನಿಮಾ ಲೋಕದ ಸಾಧಕರೊಂದಿಗೆ

೨೦. ರಾಷ್ಟ್ರಕವಿ ಶ್ರೀ ಜಿ.ಎಸ್. ಶಿವರುದ್ರಪ್ಪ ಅವರೊಂದಿಗೆ

೨೧. ಕ್ರಿಕೆಟಿಗ ಶ್ರೀ ಜಿ.ಆರ್.ವಿಶ್ವನಾಥ್ ಅವರೊಂದಿಗೆ

೨೨. ಕೃಷ್ಣಯ್ಯನವರು ಶ್ರೀರಂಗರಿಗೆ ಮಾಲಾರ್ಪಣೆ ಮಾಡುತ್ತಿರುವ ಚಿತ್ರ

೨೩. ಬ್ಯಾಡ್ಮಿಂಟನ್ ಆಟಗಾರ ಶ್ರೀ ಪ್ರಕಾಶ್ ಪಡುಕೋಣೆ ಅವರೊಂದಿಗೆ

೨೪. ಶ್ರೀ ಮುಖ್ಯಮಂತ್ರಿ ಚಂದ್ರು ಅವರಿಂದ ಸನ್ಮಾನ

*******

# ವ್ಯಕ್ತಿ ವಿವರ

## ಜೀವನ ಪಥ

ಜನನ : ಮೈಸೂರು 21–07–1937

ಶಿಕ್ಷಣ :ಬಿ.ಎ.(ಆನರ್ಸ್) ಮತ್ತು ಎಂ.ಎ.(ಕನ್ನಡ), 1959

ವೃತ್ತಿ :1959 ಕನ್ನಡ ಅಧ್ಯಾಪಕರು, ಸರ್ಕಾರಿ ಕಾಲೇಜುಗಳು. ಬೆಂಗಳೂರು, ಕೋಲಾರ, ಮಂಗಳೂರು, ತುಮಕೂರು, ಮಂಡ್ಯಗಳಲ್ಲಿ ಅಧ್ಯಾಪಕ, ರೀಡರ್, ಪ್ರಾಧ್ಯಾಪಕರಾಗಿ ಬೋಧನಾ ಕಾರ್ಯ ನಿರ್ವಹಣೆ. ಚೆನ್ನಪಟ್ಟಣ, ಮಾಗಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಾಂಶುಪಾಲರು

ಸಂಪಾದಕರು : 'ಯುವ ಕರ್ನಾಟಕ', 'ಸ್ಪೋರ್ಟ್ಸ್ ಅರೆನಾ', – ಯುವಜನ ಸೇವಾ ಕ್ರೀಡಾ ನಿರ್ದೇಶನಾಲಯ, ಬೆಂಗಳೂರು 1979–83, ಪ್ರತಿ ನಿಯೋಜನೆ ಮೇರೆಗೆ.

ಗೌರವ ಸಂಪಾದಕರು : 1987–92 'ಕರ್ನಾಟಕ ಕಲಾವಾರ್ತೆ', ಕರ್ನಾಟಕ ಲಲಿತಕಲಾ ಅಕಾಡೆಮಿ

ಪ್ರಧಾನ ಸಂಪಾದಕರು : ಕಲಾ ಪಂಥ ಮಾಲೆ : ಎಕ್ಸ್‌ಪ್ರೆಷನಿಸಂ, ಇಂಪ್ರೆಷನಿಸಂ (ಎರಡು ಪುಸ್ತಕಗಳು ಬಂದಿವೆ)

ಮಾಜಿ ಸದಸ್ಯರು : 1, ಕಾರ್ಯಕಾರಿ ಸಮಿತಿ(ಸಿಂಡಿಕೇಟ್, ಕನ್ನಡ ವಿಶ್ವವಿದ್ಯಾಲಯ, ಹಂಪಿ,

2. ಕನ್ನಡ ಪುಸ್ತಕ ಪ್ರಾಧಿಕಾರ

3. ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ, ತಂಜಾವೂರು

ಪ್ರಶಸ್ತಿ: ರಾಜ್ಯೋತ್ಸವ ಪ್ರಶಸ್ತಿ, ಕುವೆಂಪು ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಹಂಪಿ ಕನ್ನಡ ವಿ.ವಿ.ನಾಡೋಜ, ಗೌರವ ಡಾಕ್ಟೊರೇಟ್

ಗೌರವಾಧ್ಯಕ್ಷರು : ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಅಧ್ಯಕ್ಷರು : ವಿ.ಸೀ.ಸಂಪದ

ಮಾಜಿ ಅಧ್ಯಕ್ಷರು : ಕರ್ನಾಟಕ ಸಾಹಿತ್ಯ ಅಕಾಡೆಮಿ (2008–2011)

ಸಾಹಿತ್ಯ ಪಥ

1. ಕಾವ್ಯಭಾಷೆ (ಸಾಹಿತ್ಯ ವಿಮರ್ಶೆ) 2000
2. ಶೃಂಗಾರ ಲಹರಿ (ಕಲಾ ವಿಮರ್ಶೆ, ಲಲಿತ ಕಲಾ ಅಕಾಡೆಮಿ ಪುರಸ್ಕಾರ) 1989
3. ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ (ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರ) 1993, ವಿಸ್ತೃತ 1999
4. ಆರ್.ಎಂ.ಹಡಪದ್ (ಕಲಾ ವಿಮರ್ಶೆ) 1997
5. ನಾಟಕ ಮತ್ತು ಸೌಂದರ್ಯಪ್ರಜ್ಞೆ 2001
6. ಆಲೋಕನ (ಸಾಹಿತ್ಯ ವಿಮರ್ಶೆ) 2006
7. ರೂಪಶಿಲ್ಪಿ ಬಸವಯ್ಯ (ಶಿಲ್ಪಕಲೆ) 1989
8. ಎನ್.ಎಚ್.ಕುಲಕರ್ಣಿ (ನವ್ಯ ಶಿಲ್ಪಕಲೆ) 1990
9. ತ್ಯಾಗಯೋಗಿ (ಎಸ್,ಕರಿಯಪ್ಪನವರ ಜೀವನಚರಿತ್ರೆ) 1994
10. ಎಚ್,ಕೆ,ವೀರಣ್ಣಗೌಡರು 2000
11. ನಿಟ್ಟೂರು : ನೂರರ ನೆನಪು 2003
12. ಅಜಂತ ಮತ್ತು ಎಲ್ಲೋರ : 1994
13. ಐತಿಹಾಸಿಕ ಕಾದಂಬರಿ : ಒಂದು ಸಮೀಕ್ಷೆ (ಲೇಖನ ಮಾಲೆ) 1971
14. ರಂಗಭೂಮಿ ಮತ್ತು ಸೌಂದರ್ಯಪ್ರಜ್ಞೆ 2009
15. ಕಲಾ ಸಂಸ್ಕೃತಿ 2012
16. ಸಾಹಿತ್ಯ ಕಲೆ 2015

ಸಂಪಾದಿತ ಕೃತಿಗಳು

1. ಸಾಲುದೀಪಗಳು (ಇತರರೊಡನ) 1990

2. ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ (ಇತರರೊಡನೆ) 1993
3. ಬೆಂಗಳೂರು ದರ್ಶನ (ಇತರರೊಡನೆ) 2005
4. ಕುವೆಂಪು ಸಾಹಿತ್ಯ – ಚಿತ್ರ ಸಂಪುಟ 2004
5. ಆರ್.ಎಸ್.ಎನ್. ವ್ಯಕ್ತಿ ಮತ್ತು ಕಲೆ 2008
6. ಕಲೆ ಮತ್ತು ರಸಾಸ್ವಾದನೆ 1989
7. ಸಾಹಿತ್ಯ ಮತ್ತು ಕಲೆಗಳಲ್ಲಿ ಪರಿವರ್ತನೆ ಮತ್ತು ಪ್ರಗತಿ 1991
8. ಬೆಂಗಳೂರು ಕೆಂಪೇಗೌಡರ ವಂಶಸ್ಥರು 1996
9. ಮೂರ್ತಾಮೂರ್ತ (ಎ. ಎಸ್. ಮೂರ್ತಿ ಸಂಭಾವನ ಗ್ರಂಥ) 2003
10. ಕಾಲು ಶತಮಾನ ಕಂಡ ಕನ್ನಡ ಪತ್ರಿಕೆಗಳು (ಪತ್ರಿಕಾ ಅಕಾಡೆಮಿ)
11. ಹಳೆಯ ಗದ್ಯ ಸಾಹಿತ್ಯ 1987
12. ರನ್ನನ ಅಜಿತಪುರಾಣ ಸಂಗ್ರಹ 1966
13. ಶ್ರೀಗಿರಿ
14. ಸುವಿದ್ಯಾ
15. ಬಿರಿಮೊಗ್ಗು (ಪ್ರಬಂಧ) 1973
16. ಹೊಳಪು ಝಳಪು (ಕವನ) 1964
17. ಕರ್ನಾಟಕ ಕಲಾ ದರ್ಶನ (ಇತರರೊಡನೆ ಸಂಪುಟ) 2010
18. ಪೂರ್ಣಚಂದ್ರ (ಮುಖ್ಯಮಂತ್ರಿ ಚಂದ್ರು ಸಂಭಾವನಾ ಗ್ರಂಥ) 2013

*****